

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 17 ಗುರುವಾರ 2023
ಸಂಪುಟ: 44 | ಸಂಚಿಕೆ: 122 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಅಹಿಂಸಾತ್ಮಕ ಹೋರಾಟ ವಿಶ್ವದ ಇತಿಹಾಸದಲ್ಲೇ ಮಾದರಿ
ಮೈಸೂರಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ; ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಧ್ವಜಾರೋಹಣ ■ಪುಟ–7



ಭ್ರಷ್ಟಾಚಾರ ತನಿಖೆ ಅಸ್ತ್ರದಿಂದಲೇ
ಆಪರೇಷನ್ ಹಸ್ತ!

- ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಆಪರೇಟರ್
- ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆಲ್ಲುವ ತಂತ್ರಗಾರಿಕೆ
- ಬಿಜೆಪಿಯ ಅಸ್ತವನ್ನೇ ಬಳಸಿಕೊಂಡು ಅದಕ್ಕೇ ಪ್ರತ್ಯಾಸ್ತ್ರ ಪ್ರಯೋಗ
- ಕಾಂಗ್ರೆಸ್ ಸೇರುವ ಸನ್ನಾಹದಲ್ಲಿರುವ ಎಸ್.ಟಿ.ಸೋಮಶೇಖರ್, ಬೈರತಿ ಬಸವರಾಜ್, ಮುನಿರತ್ನ, ಗೋಪಾಲಯ್ಯ ಇತರರು





ಸೋಮಶೇಖರ್ | ಬೈರತಿ ಬಸವರಾಜ್ | ಮುನಿರತ್ನ | ಗೋಪಾಲಯ್ಯ

ಬೆಂಗಳೂರು, ಆ. 16(ಕೆಎಂಶಿ)– ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಸ್‌ಐಟಿ ಹಾಗೂ ಇನ್ನಿತರ ತನಿಖೆಯ ಗುಮ್ಮದ ಮೂಲಕ ಕೆಲವು ಬಿಜೆಪಿ ಶಾಸಕರನ್ನು ಆಪರೇಷನ್ ಹಸ್ತಾ ಮಾಡಲು ಕಾಂಗ್ರೆಸ್ ವೇದಿಕೆ ಸಿದ್ಧಪಡಿಸಿದೆ.

ಕೇಂದ್ರ ಬಿಜೆಪಿ ಅನುಸರಿಸಿದ ತಂತ್ರಗಳನ್ನೇ ರಾಜ್ಯ ಕಾಂಗ್ರೆಸ್ ಪ್ರತ್ಯಸ್ತ್ರ ಮಾಡಿಕೊಂಡು ಮುಂಬರುವ ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲು ಕಾರ್ಯ ತಂತ್ರ ರೂಪಿಸಿದೆ.

ಕೆಪಿಸಿಸಿ ತಂತ್ರಕ್ಕೆ 10ರಿಂದ 12 ಬಿಜೆಪಿ ಶಾಸಕರು ಕಾಂಗ್ರೆಸ್ ಕದ ತಟ್ಟಿದ್ದಾರೆ. ಈಗಾಗಲೇ ತೆರೆಮರೆಯಲ್ಲಿ ಮಾಜಿ ಸಚಿವರಾದ ಎಸ್.ಟಿ.ಸೋಮಶೇಖರ್, ಬೈರತಿ ಬಸವರಾಜ್, ಮುನಿರತ್ನ, ಗೋಪಾಲಯ್ಯ ಸೇರಿದಂತೆ ಪ್ರಮುಖ ಶಾಸಕರು ಸೇರಿದ್ದಾರೆ. ಇದರಲ್ಲಿ ಕೆಲವರು ಈಗಾಗಲೇ ಕೆಪಿಸಿಸಿ ಅಧ್ಯಕ್ಷ ● 6ನೇ ಪುಟಕ್ಕೆ

ಅನುಕೂಲ ಸಿಂಧು ರಾಜಕಾರಣ ಮಾಡಬೇಕಾಗುತ್ತದೆ: ಡಿಸಿಎಂ ಡಿಕೆಶಿ

ಬೆಂಗಳೂರು: ಯಾರ್‍ಯಾರು ಏನೆಲ್ಲಾ ಹೇಳಬೇಕೋ ಹೇಳಲಿ. ಅವರದ್ದು ಏನಿದೆಯೋ ಅದೆಲ್ಲವೂ ಮೊದಲು ಹೊರಗಡೆ ಬರಲಿ. ಅವರ ಮಾತುಗಳೆಲ್ಲ ಮುಗಿಯಲಿ. ಆನಂತರ ನಮ್ಮ ಬಳಿ ಇರುವುದನ್ನು ಬಯಲು ಮಾಡುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸದಾಶಿವನಗರದ ನಿವಾಸದ ಬಳಿ ಮಾಧ್ಯಮದವರ ಪ್ರಶ್ನೆಗಳಿಗೆ ಬುಧವಾರ ಉತ್ತರಿಸಿದ ಅವರು, 'ನಮ್ಮ ಬಳಿ ಇರುವ ಮಾಹಿತಿ ಬಹಿರಂಗ ಪಡಿಸಲು ಸಾಕಷ್ಟು ಸಮಯವಿದೆ. ನಮ್ಮ ಬಗ್ಗೆ ತುಂಬಾ ಚರ್ಚೆ ನಡೆಸುತ್ತಿರುವವರಿಗೆ ಉತ್ತರ ನೀಡುವ ಕಾಲ ಸಮೀಪಿಸಿದೆ, ಉತ್ತರ ನೀಡೋಣ' ಎಂದರು. ಆಪರೇಷನ್ ಹಸ್ತ ಕುರಿತು ಕೇಳಿದ ಪ್ರಶ್ನೆಗೆ, 'ನಮ್ಮ ಮುಂದಿನ ಗುರಿ ಲೋಕಸಭಾ ಚುನಾವಣೆ. ಯಾವುದೇ ಕಾರಣಕ್ಕೂ ದ್ವೇಷ ಸಾಧಿಸಬೇಡಿ, ಪಕ್ಷದ ಮತಗಳಿಕೆ ಪ್ರಮಾಣ ಹೆಚ್ಚು ಮಾಡಿ ಎಂದು ನಮ್ಮ ಪಕ್ಷದ ಕಾರ್ಯಕರ್ತರಿಗೆ ಸೂಚನೆ ನೀಡಿದ್ದೇವೆ ಎಂದರು. ಸ್ಥಳೀಯವಾಗಿ ಒಮ್ಮೊಮ್ಮೆ ಅನುಕೂಲಸಿಂಧು ರಾಜಕಾರಣ ಮಾಡಿಕೊಳ್ಳಬೇಕಾಗುತ್ತದೆ. ಯಾರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕು ಎನ್ನುವುದು ಸ್ಥಳೀಯ ನಾಯಕರಿಗೆ ಬಿಟ್ಟ ವಿಚಾರ. ದೊಡ್ಡ, ದೊಡ್ಡ ನಾಯಕರನ್ನು ಸೇರಿಸಿಕೊಳ್ಳುತ್ತಿಲ್ಲ, ಅನ್ಯಪಕ್ಷಗಳ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಕಾಂಗ್ರೆಸ್ ಸೇರ್ಪಡೆಗೆ ಒಲವು ತೋರಿದ್ದಾರೆ ಎಂದು ತಿಳಿಸಿದರು.

ಅನ್ನಭಾಗ್ಯಕ್ಕೆ ಆಂಧ್ರ, ತೆಲಂಗಾಣದ ಅಕ್ಕಿ

ಖರೀದಿ ಸಂಬಂಧ ಇನ್ನಷ್ಟೇ ನಿರ್ಧರಿಸುತ್ತೇವೆ



ಬೆಂಗಳೂರು, ಆ. 16(ಕೆಎಂಶಿ)– ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ ಅಕ್ಕಿ ನೀಡಲು ಆಂಧ್ರಪ್ರದೇಶ ಮತ್ತು ತೆಲಗಾಂಣ ರಾಜ್ಯ ಸರ್ಕಾರಗಳು ಮುಂದೆ ಬಂದಿವೆ ಎಂದು ಆಹಾರ ಮತ್ತು ನಾಗರಿಕ



ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಇಂದಿಲ್ಲಿ ತಿಳಿಸಿದರು.

ಇವೆರಡು ಸರ್ಕಾರಗಳು ಪ್ರತಿ ಕೆ.ಜಿ. ಅಕ್ಕಿಗೆ 40 ರೂ. ದರ ನಿಗದಿ ಮಾಡಿವೆ. ಕೇಂದ್ರ ಆಹಾರ ನಿಗಮ ನಿಗದಿ ಮಾಡಿರುವುದಕ್ಕಿಂತ 6 ರೂ. ಪ್ರತಿ ಕೆ.ಜಿ.ಗೆ ಹೆಚ್ಚಾಗಲಿದೆ. ಇಷ್ಟು ಹಣ ನೀಡಿದ ನಂತರವೂ ಅಕ್ಕಿಯನ್ನು ನಮ್ಮ ಗೋದಾಮುಗಳಿಗೆ ಸಾಗಾಣಿಕೆಯನ್ನು ಉಚಿತವಾಗಿ ಮಾಡುತ್ತಾರೆಯೋ ಇಲ್ಲವೋ ಎಂಬುದು ಇನ್ನೂ ಖಚಿತವಾಗಿಲ್ಲ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚು ಹಣ ನೀಡಲು ಸಾಧ್ಯವೇ ಎಂಬ ಬಗ್ಗೆ ಪರಿಶೀಲಿಸುತ್ತಿದ್ದೇವೆ. ಕೇಂದ್ರ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ದರ ನಿಗದಿ ಪಡಿಸಿ ಸಾಗಾಣಿಕೆ ವೆಚ್ಚ ಕೇಳಿದರೆ ಭರಿಸಲಾಗದು.

ರಾಜ್ಯ ಸರ್ಕಾರದ ನಿಲುವನ್ನು ಆಂಧ್ರ ಮತ್ತು ತೆಲಗಾಂಣ ರಾಜ್ಯಗಳಿಗೆ ತಿಳಿಸಿದ್ದು, ಅಧಿಕಾರಿಗಳು ಮಾತುಕತೆ ಮುಂದುವರೆಸಿದ್ದಾರೆ. ಇದು ಅಂತಿಮಗೊಳ್ಳುವವರೆಗೂ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಅಕ್ಕಿ ಬದಲು ಹಣ ಸಂದಾಯವಾಗಲಿದೆ ಎಂದರು.

ಪಡಿತರ ಚೀಟಿದಾರರಿಗೆ ಹೆಚ್ಚುವರಿ 5 ಕೆ.ಜಿ.ಅಕ್ಕಿ ಬದಲು ಹಣ ನೀಡುತ್ತಿದ್ದು, ಆಗಸ್ಟ್ ತಿಂಗಳ ಹಣವನ್ನು ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಒಂದು ವಾರದಲ್ಲಿ ಜಮೆಯಾಗಲಿದೆ ಎಂದು ಅಕ್ಕಿಯನ್ನು 10 ಅಥವಾ 11ನೇ ತಾರೀಖು ಕೊಡುತ್ತಿದ್ದೆವು. ತಾಂತ್ರಿಕ ಕಾರಣಗಳಿಂದ ಡಿಬಿಟಿ ಮೂಲಕ ಹಣ ವರ್ಗಾವಣೆ ತಡವಾಗಿದೆ. ಸಿಸ್ಟಮ್ ಸರಿ ಇರಲಿಲ್ಲ. ಈಗ ಎಲ್ಲಾ ಸಿಸ್ಟಮ್ ಸರಿ ಮಾಡಲಾಗಿದೆ. ಒಂದು ಬಟನ್ ಹೊತ್ತಿದರೆ ಹಣ ಸಂದಾಯ ಆಗಲಿದೆ ಎಂದರು. ಹೊಸ ಬಿಪಿಎಲ್ ಕಾರ್ಡ್ ● 6ನೇ ಪುಟಕ್ಕೆ



ಆಗಸ್ಟ್ 18 ರಿಂದ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮೊಟ್ಟೆ, ಬಾಳೆಹಣ್ಣು ವಿತರಣೆ



ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರವು ವಾರದಲ್ಲಿ ಎರಡು ದಿನ ಮೊಟ್ಟೆ ಮತ್ತು ಬಾಳೆಹಣ್ಣುಗಳನ್ನು ವಿತರಿಸಲಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಬುಧವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಮಧು ಬಂಗಾರಪ್ಪ, ವಿದ್ಯಾರ್ಥಿಗಳಿಗೆ ಮೊಟ್ಟೆ, ಬಾಳೆಹಣ್ಣು ವಿತರಿಸುವ ಯೋಜನೆ ಆ.18ರಿಂದ ಜಾರಿಗೆ ಬರಲಿದೆ. ಮೊದಲು ಮಂಡ್ಯ ಜಿಲ್ಲೆಯಲ್ಲಿ ಈ ಯೋಜನೆ ● 6ನೇ ಪುಟಕ್ಕೆ

ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್‌ರಿಂದ ಚಾ.ನಗರ ಬಳಿ
ಬೃಹತ್ ಪಾನೀಯ, ಚಾಕೊಲೇಟ್ ಘಟಕ ಸ್ಥಾಪನೆ

- 400 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ
- ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ
- 500 ರಿಂದ 800 ಮಂದಿಗೆ ಉದ್ಯೋಗ







ಚಾಮರಾಜನಗರ, ಆ.16– ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರುಳೀಧರನ್ ಅವರು ಜಿಲ್ಲೆಯಲ್ಲಿ ಬೃಹತ್ ಪಾನೀಯ ಹಾಗೂ ಚಾಕೊಲೇಟ್ ಘಟಕವನ್ನು ಸ್ಥಾಪಿಸಲು ಮುಂದಾಗಿದ್ದು, ಇದಕ್ಕಾಗಿ ಅವರು 400 ಕೋಟಿ ರೂ. ಬಂಡವಾಳ ಹೂಡಿಕೆಗೆ ನಿರ್ಧರಿಸಿದ್ದಾರೆ.

ತಾಲೂಕಿನ ಬದನಗುಪ್ಪೆ– ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಪಾನೀಯ ಹಾಗೂ ಚಾಕೊಲೇಟ್ ಘಟಕ ಆರಂಭಿಸುತ್ತಿದ್ದು, 46 ಎಕರೆ ಪ್ರದೇಶವನ್ನು ಖರೀದಿಸಿದ್ದಾರೆ. ಸರ್ಕಾರದಿಂದ ಪಡೆಯಬೇಕಾದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಕಾರ್ಖಾನೆಯ ನಿರ್ಮಾಣ ಕಾರ್ಯ ಆರಂಭಿಸಿದ್ದಾರೆ. ಕಾಮಗಾರಿಯು ತ್ವರಿತವಾಗಿ ನಡೆಯುತ್ತಿದ್ದು ಒಂಬತ್ತರಿಂದ ಹತ್ತು ತಿಂಗಳಲ್ಲಿ ಕಾರ್ಖಾನೆ ಆರಂಭವಾಗುವ ನಿರೀಕ್ಷೆ ಇದೆ. ಈ ಘಟಕದಿಂದ ಸ್ಥಳೀಯವಾಗಿ ಸುಮಾರು 500ರಿಂದ 800 ಮಂದಿಗೆ ಉದ್ಯೋಗ ದೊರೆಯಲಿದೆ ಎಂದು ಹೇಳಲಾಗುತ್ತಿದೆ. ಕಳೆದ ಆರು ತಿಂಗಳ ಹಿಂದೆ ಮುರುಳೀಧರನ್ ಅವರು ತಾಲೂಕಿನ ಕೆಲ್ಲಂಬಳ್ಳಿ, ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿ ಜಮೀನು ಖರೀದಿಸಿದ್ದರು. ಪಾನೀಯ

> “ಶ್ರೀಲಂಕಾದ ಮಾಜಿ ಕ್ರಿಕೆಟಿಗರಾದ ಮುತ್ತಯ್ಯ ಮುರುಳೀಧರನ್ ಅವರು ಬದನಗುಪ್ಪೆ ಕೈಗಾರಿಕೆ ಪ್ರದೇಶದಲ್ಲಿ 46.3 ಎಕರೆ ಜಾಗವನ್ನು ಖರೀದಿಸಿದ್ದಾರೆ. ಪಾನೀಯ ಹಾಗೂ ಚಾಕೊಲೇಟ್ ತಯಾರಿಕಾ ಕಾರ್ಖಾನೆ ಆರಂಭಿಸಲು ಕಾಮಗಾರಿ ಈಗಾಗಲೇ ಆರಂಭವಾಗಿದೆ. ಇದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯಲಿದೆ.
> –ರಾಜೇಂದ್ರ ಪ್ರಸಾದ್, ಉಪನಿರ್ದೇಶಕರು, ಕೈಗಾರಿಕೆ ಇಲಾಖೆ.

ಹಾಗೂ ಚಾಕೊಲೇಟ್ ಘಟಕ ಸ್ಥಾಪನೆಗೆ ನಿರ್ಧರಿಸಿದ್ದರು. ಇದಕ್ಕೆ ಪ್ರಸ್ತುತ ರಾಜ್ಯ ಮಟ್ಟದಲ್ಲೇ ಅನುಮತಿ ದೊರೆತಿದ್ದು, ಘಟಕ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. 'ಎಂ.ಎಸ್.ಮುತ್ತಯ್ಯ ಬೆವರೇಜ್ ಅಂಡ್ ಕನ್ಫೆಕ್ಷನರಿ ಪ್ರೈವೇಟ್ ಲಿಮಿಟೆಡ್' ಹೆಸರಿನಲ್ಲಿ ಕಾರ್ಖಾನೆ ಸ್ಥಾಪಿಸುತ್ತಿದ್ದು, ಇದು ಪಾನೀಯ ಹಾಗೂ ಚಾಕೊಲೇಟ್ ಘಟಕ ಎಂದು ಕೈಗಾರಿಕಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈಗಾಗಲೇ ಬಿರ್ಲಾ ಗ್ರೂಪ್ ನಿಂದ ಪರಿಸರ ಸ್ನೇಹಿ ಬಣ್ಣದ ಕಾರ್ಖಾನೆ ಕೂಡ ನಿರ್ಮಾಣವಾಗುತ್ತಿದ್ದು, ಇದರ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಗುಂಡ್ಲುಪೇಟೆಯಲ್ಲಿ ಭೂಮಿ ಖರೀದಿಸಿ ಕೃಷಿ ಚಟುವಟಿಕೆ ನಡೆಸುತ್ತಿದ್ದರೆ, ಮುತ್ತಯ್ಯ ಕೈಗಾರಿಕೋದ್ಯಮಿಯಾಗಿ ಚಾಮರಾಜನಗರಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಇದರಿಂದ ಜಿಲ್ಲೆಗೆ ಮತ್ತಷ್ಟು ಕೈಗಾರಿಕೆಗಳನ್ನು ಸೆಳೆಯಲು ಅನುಕೂಲವಾಗಲಿದೆ.

ಅಕ್ರಮ ಚಟುವಟಿಕೆಯ ಅಡ್ಡವಾಗುತ್ತಿರುವ ಚಾಮುಂಡಿಬೆಟ್ಟದಲ್ಲಿ ಸದ್ಯದಲ್ಲೇ 'ದಂಡಾಸ್ತ್ರ'

ಮೈಸೂರು,ಆ.16(ಎಂಟಿವೈ)–ಧಾರ್ಮಿಕ ಹಾಗೂ ಪ್ರವಾಸಿ ತಾಣವೂ ಆಗಿರುವ ಚಾಮುಂಡಿಬೆಟ್ಟದ ಪಾವಿತ್ರ್ಯತೆ, ಬೆಟ್ಟದ ನೈಸರ್ಗಿಕ ಪರಿಸರ ಕಾಪಾಡಲು ಇನ್ನು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಬೆಟ್ಟದಲ್ಲಿ ಪುಂಡಾಟ ಮೆರೆಯುವ ಕಿಡಿಗೇಡಿಗಳಿಗೆ ಸೆ.1ರಿಂದ 'ದಂಡ'ದ ಬಿಸಿ ಮುಟ್ಟಿಸಲು ಅರಣ್ಯ ಇಲಾಖೆ ನಿರ್ಧರಿಸಿದೆ.

ಮೈಸೂರು ನಗರದ ಹಸಿರೀಕರಣ ವಲಯ ವಾದ ಚಾಮುಂಡಿಬೆಟ್ಟ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದ್ದು, ಬೆಟ್ಟಕ್ಕೆ ಬರುವ ಪ್ರವಾಸಿಗರು ಹಾಗೂ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯವಾಗಿ ಘೋಷಿಸುವ ಕಾರ್ಯಕ್ಕೆ ಈ ಹಿಂದೆಯೇ ಚಾಲನೆ ದೊರಕಿತ್ತಾದರೂ, ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿತ್ತು. ಇದರಿಂದ ಬೆಟ್ಟದ ಸೂಕ್ಷ್ಮ ಪರಿಸರ ವಲಯಕ್ಕೆ ಭಾರೀ ಪ್ರಮಾಣದ ಹಾನಿಯುಂಟಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 76 ಹಾಗೂ 99(1)ರಂತೆ ಅರಣ್ಯ ರಕ್ಷಿಸಲು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ. ಇದರಿಂದ ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 69ರಡಿ ಕಾನೂನು ಬಾಹಿರ ಕೃತ್ಯದಲ್ಲಿ ಬಾಗಿಯಾಗುವವರಿಗೆ ಇನ್ನು ಮುಂದೆ ಬಿಸಿ ಮುಟ್ಟಿಸಲಿದೆ. ಚಾಮುಂಡಿಬೆಟ್ಟಕ್ಕೆ ಬರುವ ಪ್ರವಾಸಿ ಗರು ತಾವು ತಂದಿರುವ ತಿಂಡಿ, ತಿನಿಸಿನ ಪೊಟ್ಟಣ, ಪ್ಲೇಟ್, ನೀರಿನ ಬಾಟಲಿ ಸೇರಿದಂತೆ ಇನ್ನಿತರ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡಿ ಹೋಗು ವುದು, ಧೂಮಪಾನ ಮಾಡು ವುದು, ಮೀಸಲು ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸುವುದು ಹಾಗೂ ಮದ್ಯಪಾನ ಮಾಡುತ್ತಿರುವ ದೂರುಗಳು ವ್ಯಾಪಕವಾಗಿ ಕೇಳಿ ಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮಕ್ಕೆ ನಿರ್ಧರಿಸಿದೆ.

- ಸೆ.1ರಿಂದ ನಿಯಮ ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆ
- ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಬಿಸಾಡುವುದು, ಅತಿಕ್ರಮ ಪ್ರವೇಶ ಇಲ್ಲ
- ಬೆಟ್ಟದ ರಸ್ತೆಯಲ್ಲಿ ವಾಹನ ನಿಲುಗಡೆಗೆ ಇನ್ನು ಮುಂದೆ ಅವಕಾಶ ಇಲ್ಲ
- ಮಳಿಗೆಗಳಲ್ಲಿ ಪ್ಲಾಸ್ಟಿಕ್ ಮಾರಾಟ ನಿಷಿದ್ಧ; ತಪ್ಪಿದರೆ ದಂಡ
- ರಾತ್ರಿ 10 ಗಂಟೆ ನಂತರ ಪ್ರವೇಶಿಸಿದರೆ 2500 ರೂ. ದಂಡ



ಸೆ.1ರಿಂದ ದಂಡದ ನಿಯಮ ಜಾರಿ: ಅರಣ್ಯ ಇಲಾಖೆ ಹೊಸದಾಗಿ ಜಾರಿಗೆ ತಂದಿರುವ ದಂಡದ ನಿಯಮ ಸೆ.1ರಿಂದ ಜಾರಿಗೊಳಿಸಲಾ ಗುತ್ತದೆ. ಚಾಮುಂಡಿಬೆಟ್ಟ ಅರಣ್ಯ ಪ್ರದೇಶಕ್ಕೆ ಅತಿಕ್ರಮ ಪ್ರವೇಶಕ್ಕೆ 500 ರೂ., ಬೆಟ್ಟದ ● 6ನೇ ಪುಟಕ್ಕೆ

> “ಚಾಮುಂಡಿಬೆಟ್ಟಕ್ಕೆ ಬರುವ ಪ್ರವಾಸಿಗರು, ಭಕ್ತರು ಪರಿಸರಕ್ಕೆ ಮಾರಕವಾದ ತ್ಯಾಜ್ಯ ಎಸೆದು ಹೋಗುವ ಮೂಲಕ ಬೆಟ್ಟದ ಪರಿಸರ ವಲಯಕ್ಕೆ ಹಾನಿಯುಂಟು ಮಾಡು ವುದನ್ನು ತಡೆಗಟ್ಟಲು ಹಾಗೂ ಅನಧಿಕೃತ ಪ್ರವೇಶ, ಧೂಮಪಾನ, ಮದ್ಯಪಾನ ದಂತಹ ಕೃತ್ಯ ತಡೆಗಟ್ಟುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಸೆ. 1ರಿಂದ ದಂಡ ವಿಧಿಸುವ ಕಾರ್ಯಾಚರಣೆ ಆರಂಭಿಸಲಿದೆ. ಚಾಮುಂಡಿಬೆಟ್ಟದ ಪರಿಸರವನ್ನು ರಕ್ಷಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಮಹತ್ತರ ಹೆಜ್ಜೆಗೆ ಸಾರ್ವಜನಿಕರು ಸಹಕರಿಸಬೇಕು.
> –ಬಸವರಾಜು, ಡಿಸಿಎಫ್, ಮೈಸೂರು

ದಂಡದ ವಿವರ

ಅರಣ್ಯ ಪ್ರದೇಶಕ್ಕೆ ಅತಿಕ್ರಮ ಪ್ರವೇಶ	500 ರೂ.
ಎಲ್ಲೆಂದರಲ್ಲಿ ವಾಹನ ನಿಲುಗಡೆಗೆ	1000 ರೂ.
ರಸ್ತೆಯಲ್ಲಿ ತ್ಯಾಜ್ಯ ವಸ್ತು ಎಸೆದರೆ	500 ರೂ.
ಬೆಟ್ಟದ ಅಂಗಡಿಯಲ್ಲಿ ಪ್ಲಾಸ್ಟಿಕ್ ಮಾರಾಟ	2500 ರೂ.
ಎರಡನೆ ಬಾರಿಗೆ ಸಿಕ್ಕಿಬಿದ್ದರೆ	5000 ರೂ.
ಮೂರನೆ ಬಾರಿಗೆ ಸಿಕ್ಕಿಬಿದ್ದರೆ	10000 ರೂ.
ರಾತ್ರಿ ವೇಳೆ ಬೆಟ್ಟ ಪ್ರವೇಶಿಸಿದರೆ	2500 ರೂ.
ಆರೋಗ್ಯಕ್ಕೆ ಹಾನಿಕರ ವಸ್ತು ಹೊಂದಿದ್ದರೆ	5000 ರೂ.
ವನ್ಯ ಪ್ರಾಣಿಗಳಿಗೆ ಆಹಾರ ನೀಡಿದರೆ	1000 ರೂ.
ಅರಣ್ಯ ಸಂಪತ್ತಿಗೆ ಹಾನಿ ಮಾಡಿದರೆ	1000 ರೂ.



ಸೆ.20ರವರೆಗೆ ನಂದಿನಿ ಉತ್ಪನ್ನ ರಿಯಾಯಿತಿ ಮಾರಾಟ



ಮೈಸೂರು,ಆ.16(ಎಂಟಿವೈ)–ಗೌರಿ-ಗಣೇಶ ಚತುರ್ಥಿ ಹಾಗೂ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಕೆಎಂಎಫ್ ಹಾಗೂ ಮೈಮುಲ್ ಆ.15ರಿಂದ ಸೆ.20ರವರೆಗೆ ನಂದಿನಿ ಉತ್ಪನ್ನಗಳ ರಿಯಾಯಿತಿ ಮಾರಾಟ ಮೇಳ 'ನಂದಿನಿ ಸಿಹಿ ಉತ್ಸವ' ಆಯೋಜಿಸಿದೆ. ಮೈಸೂರಿನ ಮೆಗಾ ಡೈರಿ ಮುಂಭಾಗದ ನಂದಿನಿ ಮಿಲ್ಕ್ ಗ್ಯಾಲಕ್ಸಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಹಾಗೂ ಇನ್ನಿತರರು ಚಾಲನೆ ನೀಡಿದರು.

ಬಳಿಕ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿ, ವರ್ಷಕ್ಕೆ ಎರಡು ಬಾರಿ ಮೈಮುಲ್ ವತಿಯಿಂದ ಸಿಹಿ ಉತ್ಸವವನ್ನು ಆಚರಿಸಲಾಗುತ್ತದೆ. ಈ ಬಾರಿ ಗೌರಿ ಗಣೇಶೋತ್ಸವ ಹಾಗೂ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಸೆ.20ರವರೆಗೆ ಸಿಹಿ ಉತ್ಸವ ಹಮ್ಮಿಕೊಳ್ಳಲಾಗಿದ್ದು, ಈ ಉತ್ಸವದಲ್ಲಿ ಮೈಮುಲ್‌ನ ಸಿಹಿ ಉತ್ಪನ್ನಗಳ ಮೇಲೆ ಶೇ.20ರಷ್ಟು ರಿಯಾಯಿತಿ ಪಡೆಯಬಹುದು ಎಂದು ಹೇಳಿದರು.

ಡಿಸೆಂಬರ್ ಅಂತ್ಯದಲ್ಲಿ ಮತ್ತೊಂದು ಸಿಹಿ ಉತ್ಸವನ್ನು ಆಚರಿಸಲಾಗುವುದು. ನಂದಿನಿ ಉತ್ಪನ್ನಗಳು ಹೆಚ್ಚು ಜನರಿಗೆ ತಲುಪಬೇಕು ಎಂಬ ಉದ್ದೇಶದಿಂದ ಸಿಹಿ ಉತ್ಸವವನ್ನು ಆಚರಿಸಲಾಗುತ್ತಿದೆ. ಈ ಉತ್ಸವದಲ್ಲಿ ಹೆಚ್ಚಿನ ವಹಿವಾಟು ನಿರೀಕ್ಷಿಸಲಾಗುತ್ತಿದೆ. ದಸರಾ ಉತ್ಸವ ಸಂದರ್ಭದಲ್ಲೂ ಸಿಹಿ ಉತ್ಸವ ಆಚರಿಸಲು ಚಿಂತನೆ ನಡೆಸಲಾಗುವುದು, ಈ ಕುರಿತು ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಜತೆಗೆ ಮಾತುಕತೆ ನಡೆಸಲಾಗುವುದು ಎಂದರು.

ಈ ಸಂದರ್ಭ ಮೈಮುಲ್ ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಉಮಾಶಂಕರ್, ಕೆ.ಜಿ.ಮಹೇಶ್, ಸಿ.ಓಂಪ್ರಕಾಶ್, ಕೆ.ಈರೇಗೌಡ, ಕೆ.ಎಸ್.ಕುಮಾರ್, ದ್ರಾಕ್ಷಾಯಿಣಿ ಬಸವರಾಜಪ್ಪ, ಲೀಲಾ ಬಿ.ಕೆ. ನಾಗರಾಜ್, ಬಿ.ನೀಲಾಂಬಿಕೆ ಮಹೇಶ್ ಕುರಹಟ್ಟಿ, ಶಿವಗಾಮಿ ಷಣ್ಮುಗಂ, ಡಿ. ರಾಜೇಂದ್ರ, ಬಿ.ಎನ್.ಸದಾನಂದ, ಆರ್.ಚೆಲುವರಾಜು, ಗುರುಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯಕುಮಾರ್, ವ್ಯವಸ್ಥಾಪಕರಾದ ಕೆ.ಎಸ್. ಜಗದೀಶ್, ಎಚ್.ಕೆ.ಜಯಶಂಕರ್ ಹಾಗೂ ಇತರರು ಉಪಸ್ಥಿತರಿದ್ದರು.

ವಿಧಾನಪರಿಷತ್‌ಗೆ ಮೂವರು ನಾಮನಿರ್ದೇಶನ



ಉಮಾಶ್ರೀ ಸೀತಾರಾಂ ಸುಧಾಂದಾಸ್

ಬೆಂಗಳೂರು,ಆ.16–ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡಲು ಮೂವರನ್ನು ರಾಜ್ಯ ಸರ್ಕಾರ ಅಂತಿಮಗೊಳಿಸಿದೆ. ಕಲಾ ವಿಭಾಗದಿಂದ ನಟಿ ಹಾಗೂ ಮಾಜಿ ಸಚಿವೆ ಉಮಾಶ್ರೀ, ಶಿಕ್ಷಣ ವಿಭಾಗದಿಂದ ಮಾಜಿ ಸಚಿವ ಎಂ.ಆರ್. ಸೀತಾರಾಂ ಹಾಗೂ ಸಾಮಾಜಿಕ ಸೇವೆ ವಿಭಾಗದಡಿ ನಿವೃತ್ತ ಇಡಿ ಅಧಿಕಾರಿ ಸುಧಾಂದಾಸ್ ಅವರನ್ನು ಪಟ್ಟಿ ಮಾಡಲಾಗಿದೆ. ಆದರೆ ಸೀತಾರಾಂ ಮತ್ತು ಸುಧಾಂದಾಸ್ ಅವರ ನಾಮನಿರ್ದೇಶನಕ್ಕೆ ಆಕ್ಷೇಪವಿದ್ದು, ಈ ಸಂಬಂಧ ವಿವರಣೆ ನೀಡುವಂತೆ ರಾಜ್ಯಪಾಲರು, ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖುದ್ದಾಗಿ ರಾಜ್ಯಪಾಲರನ್ನು ಭೇಟಿಯಾಗಿ ಈ ಪಟ್ಟಿಯ ಬಗ್ಗೆ ವಿವರಿಸಿದ್ದರು. ಆದರೆ ರಾಜ್ಯಪಾಲರು ಇನ್ನೂ ಅಂಕಿತ ಹಾಕಿಲ್ಲ.

ಯೋಜನಾ ಮಂಡಳಿ ಉಪಾಧ್ಯಕ್ಷರಾಗಿ ರಾಜೀವ್‌ಗೌಡ: ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ (ಯೋಜನಾ ಮಂಡಳಿ) ಉಪಾಧ್ಯಕ್ಷರನ್ನಾಗಿ ರಾಜ್ಯಸಭೆಯ ಮಾಜಿ ಸದಸ್ಯರೂ ಆದ ಎಂ.ವಿ. ರಾಜೀವ್‌ಗೌಡ ಅವರನ್ನು ನೇಮಕ ಮಾಡಲಾಗಿದೆ.



ರಾಜೀವ್‌ಗೌಡ

ಇವರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದೆ. ಆರ್ಥಿಕ ಮತ್ತು ಶಿಕ್ಷಣ ತಜ್ಞರಾದ ಇವರು ಬೆಂಗಳೂರಿನ ಐಐಎಂ ಪ್ರಾಧ್ಯಾಪಕರಾಗಿದ್ದು, ಆರ್‌ಬಿಐ ಕೇಂದ್ರ ಮಂಡಳಿಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ಸಂಚಾಲಕರೂ ಆಗಿದ್ದರು.

ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಸರ್ವ ಸದಸ್ಯರ ಮಹಾಸಭೆ



ಮೈಸೂರು, ಆ. 16–ಮೈಸೂರಿನ ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಸರ್ವ ಸದಸ್ಯರ ಮಹಾಸಭೆ ಆರಾಧ್ಯ ಮಹಾಸಭಾದ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷ ಎಚ್.ಎನ್.ನವೀನ್ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ವೇಳೆ ಸಂಘದ 10 ಹಿರಿಯ ಸಹಕಾರಿ ಸದಸ್ಯರು ಮತ್ತು ಪ್ರಾಮಾಣಿಕವಾಗಿ ಸಾಲ ಮರುಪಾವತಿಸಿದ 10 ಸಂಘದ ಸದಸ್ಯರನ್ನು ಸನ್ಮಾನಿಸಲಾಯಿತು. ನಂತರ 10ನೇ ತರಗತಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉನ್ನತ ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಪತ್ತಿನ ಸಹಕಾರಿ ಆಡಳಿತ ಮಂಡಳಿ ಉಪಾಧ್ಯಕ್ಷ ಜೆ.ಎಸ್.ಸುನೀಲ್, ನಿರ್ದೇಶಕರಾದ ಚಿಕ್ಕಮ್ಮ ಬಸವರಾಜ್, ಸುದರ್ಶನ್, ಸರೋಜ ಚಂದ್ರಶೇಖರ್, ಸುಜಾತ ಎನ್.ಪ್ರದೀಪ್, ದಿಲೀಪ್, ಬಸವರಾಜು, ಎಸ್.ಸೋಮಶೇಖರ, ಭಾಗ್ಯ, ಜೆ.ಕೃಷ್ಣ, ಆರ್.ಸುರೇಂದ್ರ, ಕೆ.ಎನ್.ನಾಗರಾಜು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ಶ್ರೀಹರಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ನಿಧನ

ಪಿ.ವಿ.ರಂಗನಾಜನ್



ಮೈಸೂರು, ಆ. 16–ಮೈಸೂರಿನ ಬೋಗಾದಿ ನಿವಾಸಿ ಹಾಗೂ ಕೊಮಾಟ್‌ನಲ್ಲಿ ಸೀನಿಯರ್ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನಿಸ್ಟ್ ಪಿ.ವಿ. ರಂಗರಾಜನ್ (51) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಮೃತರು ತಂದೆ–ತಾಯಿ, ಪತ್ನಿ, ಓರ್ವ ಪುತ್ರ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸನತ್‌ಕುಮಾರ್



ಕೊಳ್ಳೇಗಾಲ ತಾಲೂಕಿನ ಕುಣಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ ಅವರ ಪುತ್ರ ಎಂ.ಸನತ್‌ಕುಮಾರ್ (32) ಅನಾರೋಗ್ಯದಿಂದ ಮೈಸೂರಲ್ಲಿ ಬುಧವಾರ ನಿಧನರಾದರು. ಮೃತರು ತಂದೆ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ನಾಳೆ (ಗುರುವಾರ) ಗ್ರಾಮದ ರುದ್ರಭೂಮಿಯಲ್ಲಿ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಮತಾ



ಮೈಸೂರಿನ ಲಕ್ಷ್ಮಿಪುರಂ ನಿವಾಸಿ, ಕುವೆಂಪುನಗರದ ಜಗದಾಂಬ ಪೆಟ್ರೋಲ್ ಬಂಕ್ ಮಾಲೀಕ ರುದ್ರಸ್ವಾಮಿ ಅವರ ಪತ್ನಿ ಮಮತಾ (53) ಬುಧವಾರ ನಿಧನರಾದರು. ಇವರು ವೀರಶೈವ ಮುಖಂಡ ದಿವಂಗತ ಶಿವಬಸಪ್ಪ ಅವರ ಸೊಸೆ. ಮೃತರು ಪತಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಅವರ ಸ್ವಗ್ರಾಮ ಸೋಮೇಶ್ವರಪುರದಲ್ಲಿ ನಾಳೆ(ಆ.17)ರಂದು ಮಧ್ಯಾಹ್ನ 12.30ಕ್ಕೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಜೆ.ಡಿ.ದಾಸಶೆಟ್ಟರು



ಸರಗೂರು ಪಟ್ಟಣ ನಿವಾಸಿ ಹಾಗೂ ಪಟ್ಟಣದ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಉಪಾಧ್ಯಾಯರಾದ ಜೆ.ಡಿ.ದಾಸಶೆಟ್ಟರು (87) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಮಧ್ಯಾಹ್ನ ಪಟ್ಟಣದ ಕಪಿಲಾ ನದಿ ತೀರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಚಾಟ್‌ಜಿಪಿಟಿ' ತಂತ್ರಾಂಶದ ಇತಿಮಿತಿ ಬಳಕೆ ಸೂಕ್ತ

ಮೈಸೂರು ವಿವಿ ಗ್ರಂಥಾಲಯ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಶಾಲಿನಿ ಆರ್.ಅರಸ್ ಅಭಿಮತ

ಮೈಸೂರು, ಆ.16(ಪಿಎಂ)–'ಚಾಟ್‌ಜಿಪಿಟಿ' ಕೃತಕ ಬುದ್ಧಿಮತ್ತೆ ತಂತ್ರಾಂಶವು ಶೈಕ್ಷಣಿಕ ಕ್ಷೇತ್ರದಲ್ಲೂ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದೆ. ಆದರೆ ಅದರ ಇತಿಮಿತಿ ಪರಿಜ್ಞಾನದೊಂದಿಗೆ ಬಳಕೆ ಮಾಡುವುದು ಸೂಕ್ತ ಎಂದು ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಶಾಲಿನಿ ಆರ್.ಅರಸ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದ ಸಭಾಂಗಣದಲ್ಲಿ ಮೈಸೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗ, ಇಂಗ್ಲಿಷ್ ಅಧ್ಯಯನ ವಿಭಾಗ ಹಾಗೂ ಗಣಕಯಂತ್ರ ಅಧ್ಯಯನ ವಿಭಾಗದ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಚಾಟ್ ಜಿಪಿಟಿ ಮತ್ತು ಶೈಕ್ಷಣಿಕ ಬರವಣಿಗೆ' ಕುರಿತ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.


'ಕೃತಕ ಬುದ್ಧಿಮತ್ತೆ (ಎಐ)' ತಂತ್ರಾಂಶ ವ್ಯವಸ್ಥೆಯಲ್ಲಿ 'ಚಾಟ್‌ಜಿಪಿಟಿ' ಒಂದಾಗಿದೆ. ಕೃತಕ ಬುದ್ಧಿಮತ್ತೆಯ ತಂತ್ರಾಂಶಗಳು ಹೊಸ ಪಠ್ಯಗಳನ್ನು ರಚಿಸುವ ಸಾಮರ್ಥ್ಯ ಹೊಂದಿವೆ. ಪ್ರಬಂಧಗಳನ್ನು ಬರೆಯಲು ಮತ್ತು ವಿದ್ವತ್‌ಪೂರ್ಣ ಲೇಖನಗಳು ಹಾಗೂ ಪುಸ್ತಕಗಳ ಬರವಣಿಗೆಗೆ ಇವು ಸಹಕಾರಿ. ವಿವಿಧ ಕ್ಷೇತ್ರಗಳಲ್ಲಿ ನಿಯೋಜಿತ ಕಾರ್ಯಗಳನ್ನು ಪೂರ್ಣಗೊಳಿಸಲು ಕೃತಕಬುದ್ಧಿಮತ್ತೆಯ ತಂತ್ರಾಂಶದ ಬಳಕೆ ಹೆಚ್ಚುತ್ತಿದೆ. ಇಂತಹ ಅಭ್ಯಾಸಗಳು ಶೈಕ್ಷಣಿಕ ವಲಯದಲ್ಲೂ ಹೆಚ್ಚಾಗುತ್ತಿದೆ ಎಂದು ಹೇಳಿದರು.

ಪುಸ್ತಕಗಳು, ಲೇಖನಗಳು ಮತ್ತು ಅಂತರ್ಜಾಲ ಒಳಗೊಂಡಂತೆ ವೈವಿಧ್ಯಮಯ ಶ್ರೇಣಿಯ ಸಾಧನವಾಗಿ ಚಾಟ್‌ಜಿಪಿಟಿ ತಂತ್ರಾಂಶವು ಬಳಕೆಯಾಗುತ್ತಿದೆ. ನಮ್ಮ ವಿವಿಧ ರೀತಿಯ ಅಪೇಕ್ಷೆಗಳು ಹಾಗೂ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಇದು ಪ್ರತಿಕ್ರಿಯಿಸುತ್ತದೆ. ಇದು ಬುದ್ಧಿವಂತರು ಮತ್ತಷ್ಟು ಚುರುಕಾಗಲು ಸಹಾಯ ಮಾಡುತ್ತದೆ. ಆದರೆ ವಿದ್ಯಾರ್ಥಿಗಳ ಕಲಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಸಹ ಉಂಟು ಮಾಡಬಹುದು. ನಾವು ಅಪೇಕ್ಷಿಸುವ ಹಾಗೂ ಪ್ರಶ್ನಿಸುವ ಬಗ್ಗೆ ಚಾಟ್‌ಜಿಪಿಟಿ ವ್ಯಾಪಕ ಪ್ರತಿಕ್ರಿಯೆಗಳನ್ನು ನೀಡಬಹುದಾದರೂ ಪ್ರತಿ ಪ್ರತಿಕ್ರಿಯೆಯೂ ವಿಶಿಷ್ಟ ಎಂಬುದಕ್ಕೆ ಖಾತರಿ ಇಲ್ಲ. ಇದು ಪ್ರಮುಖ ನ್ಯೂನತೆಯಾಗಿದೆ ಎಂದು ವಿವರಿಸಿದರು.

ಚಾಟ್‌ಜಿಪಿಟಿಯನ್ನು ಶೈಕ್ಷಣಿಕ ಕಾರ್ಯಗಳಿಗೆ ಸಹಾಯಕವಾಗಿ ಬಳಸಬೇಕು. ಸಂಶೋಧನೆಗಳ ಮೌಲ್ಯವರ್ಧನೆಗೆ ಇದು ಸಹಕಾರಿ. ಆದರೆ ಅದರ ಮಾಹಿತಿಗಳೇ ಅಂತಿಮ ಎಂದು ಪರಿಗಣಿಸಬಾರದು. ಅವು ತಾಜಾತನದಿಂದ ಕೂಡಿರುವ ಬಗ್ಗೆ ಯಾವುದೇ ಖಾತರಿ ಇರುವುದಿಲ್ಲ. ಸಂಶೋಧಕ ಅಥವಾ ಲೇಖಕನ ಭಾವನೆಗಳನ್ನು ಗ್ರಹಿಸಲು ಸಾಧ್ಯವಾಗದಿರುವುದೂ ಇದೆ. ಹಾಗಾಗಿ ಯಾವುದೇ ಕೃತಕ ಬುದ್ಧಿಮತ್ತೆ ತಂತ್ರಾಂಶವಾದರೂ ಅವುಗಳ ಇತಿಮಿತಿ ಗ್ರಹಿಸಿ ಸೂಕ್ತ ರೀತಿಯಲ್ಲಿ ಬಳಸುವುದು ಮುಖ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಮುಜ್ಫರ್ ಅಸ್ಸಾದಿ ಮಾತನಾಡಿ, ಚಾಟ್‌ಜಿಪಿಟಿ ಸೇರಿದಂತೆ ಕೃತಕ ಬುದ್ಧಿಮತ್ತೆ ತಂತ್ರಾಂಶ ಬಳಕೆಯನ್ನು ತಳ್ಳಿ ಹಾಕುವಂತಿಲ್ಲ. ಆದರೆ ಅವುಗಳ ಬಳಕೆಯು ಜಾಗತಿಕ ಮಟ್ಟದಲ್ಲಿ ಮಾನವನ ಮೂಲ ಸಂಸ್ಕೃತಿಗೆ ಧಕ್ಕೆ ಉಂಟು ಮಾಡುವಂತೆ ಇರಬಾರದು. ಹಾಗಾಗಿ ಅದರಲ್ಲೇ ಕಳೆದು ಹೋಗದಂತಹ ಎಚ್ಚರಿಕೆಯೂ ಅಗತ್ಯ. ತಂತ್ರಜ್ಞಾನವು ಮಾನವನ ಬದುಕಿಗೆ ಪೂರಕವಾಗಿರಬೇಕೇ ಹೊರತು ಮಾರಕವಾಗಿರಬಾರದು. ಈ ಹಿನ್ನೆಲೆಯಲ್ಲಿ ಅದರ ಸಮತೋಲನ ಬಳಕೆಯ ಜ್ಞಾನ ನಮ್ಮಲ್ಲಿರಬೇಕು ಎಂದು ಹೇಳಿದರು.

ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನ, ಗಣಕಯಂತ್ರ ವಿಭಾಗದ ಮುಖ್ಯಸ್ಥ ಪ್ರೊ.ಹೆಚ್.ಎಸ್.ನಾಗೇಂದ್ರ ಸ್ವಾಮಿ, ಗ್ರಂಥಾಲಯ ವಿಭಾಗದ ಮುಖ್ಯಸ್ಥ ಪ್ರೊ.ಎನ್.ಎಸ್.ಹರಿನಾರಾಯಣ ಸೇರಿದಂತೆ ಈ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳು ಹಾಜರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಬುಧವಾರ ನಿವೃತ್ತ ಪ್ರಾಧ್ಯಾಪಕಿ ಪ್ರೊ. ಶಾಲಿನಿ ಆರ್. ಅರಸ್, ಕೃತಕ ಬುದ್ಧಿಮತ್ತೆ ತಂತ್ರಾಂಶ ಕುರಿತು ಉಪನ್ಯಾಸ ನೀಡಿದರು.

> "1950ರ ದಶಕದಲ್ಲಿ 'ಥಿಂಕಿಂಗ್ ಮೆಷಿನ್' ಆವಿಷ್ಕಾರದ ಪ್ರಕ್ರಿಯೆಗಳು ಪ್ರಾರಂಭಗೊಂಡವು. ಆದರೆ ಕಳೆದೆರಡು ವರ್ಷಗಳಿಂದ ಇದು ಹೆಚ್ಚು ಗಮನ ಸೆಳೆಯುವಂತಾಗಿದೆ. 2022ರಲ್ಲಿ ಚಾಟ್‌ಜಿಪಿಟಿ ಬಿಡುಗಡೆಯು ಈ ನಿಟ್ಟಿನಲ್ಲಿ ಪ್ರಮುಖ ಅಂಶ ಎಂದು ಪರಿಗಣಿಸಬಹುದು. ಇದು ಭವಿಷ್ಯದಲ್ಲಿ ಮತ್ತಷ್ಟು ವೇಗವಾಗಿ ಬೆಳವಣಿಗೆ ಕಾಣುತ್ತದೆ ಎನ್ನಲಾಗುತ್ತಿದೆ. ಕೃತಕ ಬುದ್ಧಿಮತ್ತೆ (ಎಐ) ಎಂಬುದು ಯಂತ್ರಗಳಿಂದ, ವಿಶೇಷವಾಗಿ ಕಂಪ್ಯೂಟರ್ ವ್ಯವಸ್ಥೆಗಳು ಮಾನವನ ಬುದ್ಧಿಮತ್ತೆ ಪ್ರಕ್ರಿಯೆಯನ್ನು ಅನುಕರಣೆ ಮಾಡುವುದಾಗಿದೆ. ಇದು ಕಂಪ್ಯೂಟರ್ ವಿಜ್ಞಾನದ ಒಂದು ವ್ಯಾಪಕ ಶಾಖೆಯಾಗಿದ್ದು, ಸಾಮಾನ್ಯವಾಗಿ ಮಾನವನ ಬುದ್ಧಿವಂತಿಕೆಯ ಅಗತ್ಯವಿರುವ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುವ ಸ್ಮಾರ್ಟ್ ಯಂತ್ರಗಳು ಇವಾಗಿವೆ. –ಪ್ರೊ. ಶಾಲಿನಿ ಆರ್. ಅರಸ್

ನ.2ರಿಂದ 15ರವರೆಗೆ ಹಾಸನಾಂಬ ಜಾತ್ರಾ ಮಹೋತ್ಸವ

ದಿನದ 24 ಗಂಟೆಯೂ ದರ್ಶನಕ್ಕೆ ಅವಕಾಶ

ಹಾಸನ: ನವೆಂಬರ್ 2ರಿಂದ 15ರವರೆಗೆ ಹಾಸನಾಂಬ ಜಾತ್ರಾ ಮಹೋತ್ಸವ ನಡೆಯಲಿದ್ದು, ಈ ಬಾರಿ ದಿನದ 24 ಗಂಟೆಯೂ ಹಾಸನಾಂಬೆ ದರ್ಶನಕ್ಕೆ ಅವಕಾಶ ನೀಡಲಾಗುತ್ತಿದೆ.

ಹಾಸನಂಬಾ ಜಾತ್ರಾ ಮಹೋತ್ಸವ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ, ಮಂಗಳವಾರ ಪೂರ್ವಭಾವಿ ಸಭೆ ನಡೆಸಿದರು. ಸಭೆಯಲ್ಲಿ ಮಾತನಾಡಿದ ಸಚಿವರು, ಕಳೆದ ವರ್ಷ ದೇವಾಲಯಕ್ಕೆ 6 ಲಕ್ಷಕ್ಕೂ ಹೆಚ್ಚು ಮಂದಿ ಭಕ್ತರು ಆಗಮಿಸಿದ್ದರು. ಶಕ್ತಿ ಯೋಜನೆ ಜಾರಿಯಾಗಿರುವ ಹಿನ್ನೆಲೆಯಲ್ಲಿ ಈ ಬಾರಿ ಹೆಚ್ಚು ಜನರು ಭೇಟಿ ನೀಡುವ ಸಾಧ್ಯತೆಗಳಿವೆ. ಈ ಬಾರಿ ಸುಮಾರು 10 ಲಕ್ಷಕ್ಕೂ ಹೆಚ್ಚು ಮಂದಿ ಆಗಮಿಸುವ ಸಾಧ್ಯತೆಗಳಿವೆ. ಹೆಚ್ಚು ಭಕ್ತರು ಆಗಮಿಸುವುದರಿಂದ ಹಾಸನಾಂಬೆ ಮಹೋತ್ಸವ ವೈಭವದಿಂದ ನಡೆಸಲಾಗುತ್ತದೆ. ಅಧಿಕ ಸಂಖ್ಯೆಯಲ್ಲಿ ಭಕ್ತರು ಬರುವುದರಿಂದ ಅಚ್ಚುಕಟ್ಟಾಗಿ ಸಿದ್ಧತೆ ನಡೆಯಬೇಕು, ಯಾವುದೇ ಕುಂದುಕೊರತೆ ಮತ್ತು ಗಡಿಬಿಡಿ ಆಗಬಾರದೆಂದು ಸೂಚನೆ ನೀಡಿದರು.

ಒಟ್ಟು 14 ದಿನಗಳು ದೇವಿಯ ದೇಗುಲದ ಬಾಗಿಲು ತೆರೆಯಲಿದ್ದು, ಮೊದಲ ಹಾಗೂ ಕೊನೆಯ ದಿನ ಪೂಜಾ ವಿಧಿವಿಧಾನಗಳ ಕಾರಣ ಎರಡು ದಿನ ಸಾರ್ವಜನಿಕ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಬಿಟ್ಟರೆ ಒಟ್ಟು 12 ದಿನಗಳು 24 ಗಂಟೆ ಸಾರ್ವಜನಿಕರಿಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ ಎಂದು ಸಭೆಯಲ್ಲಿ ನಿರ್ಧರಿಸಲಾಯಿತು. ಈ ಬಾರಿ ಅದ್ಧೂರಿಯಾಗಿ ಜಾತ್ರೆ ನಡೆಸಬೇಕು. ಈ ಸಂಬಂಧ ಅಗತ್ಯ ತಯಾರಿ ಮಾಡಿಕೊಳ್ಳಿ ಎಂದು ಸಚಿವರು ಸೂಚನೆ ನೀಡಿದ್ದಾರೆ. ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಹಾಸನ ಎಂದರೆ ಶಿಲ್ಪಕಲೆಗಳ ತವರೂರು. ಪ್ರವಾಸೋದ್ಯಮವಾಗಿ ಬೆಳೆಸುವ ನಿಟ್ಟಿನಲ್ಲಿ ಹೆಚ್ಚು ಪ್ರಚಾರ ಕೊಟ್ಟು ಹಾಸನಾಂಬೆ ಮೂಲಕ ಹೆಚ್ಚು ಪ್ರವಾಸಿಗರನ್ನು ಸೆಳೆಯಲಾಗುವುದು. ಇದಕ್ಕಾಗಿ ವಿಶೇಷ ಕಾರ್ಯಕ್ರಮಗಳ ಆಯೋಜನೆ ಮಾಡಲಾಗುವುದು. ಅಧಿಕಾರಿಗಳು ಮತ್ತು ಹಿರಿಯ ನಾಗರಿಕರೊಂದಿಗೆ ಮತ್ತೊಮ್ಮೆ ಸಭೆ ನಡೆಸಲಾಗುತ್ತದೆ. ನಂತರ ಜಿಲ್ಲಾ ಪ್ರಾಧಿಕಾರವು ಕಾರ್ಯಕ್ರಮಗಳ ವಿವರ ವಾದ ಪಟ್ಟಿಯನ್ನು ಸಿದ್ಧಪಡಿಸುತ್ತದೆ ಎಂದು ಜಿಲ್ಲಾಧಿಕಾರಿ ಸಿ.ಸತ್ಯಭಾಮ ಹೇಳಿದರು.

ಬ್ರ್ಯಾಂಡಿಂಗ್ ಮೈಸೂರು ಸ್ಪರ್ಧೆ–2023ಕ್ಕೆ ಅರ್ಜಿ

ಮೈಸೂರು,ಆ.16– ಮೈಸೂರು ನಗರದಲ್ಲಿ ಪ್ರವಾಸೋದ್ಯಮ ಇಲಾಖಾ ವತಿಯಿಂದ "ಬ್ರ್ಯಾಂಡಿಂಗ್ ಮೈಸೂರು" ಸ್ಪರ್ಧೆಯನ್ನು ಹಮ್ಮಿಕೊಂಡಿದೆ.

ಕೊನೆಯಿಲ್ಲದ ಸಂತಸದ ಗೂಡು, ನಮ್ಮ ಮೈಸೂರು ಎಂಬ ವಿಷಯಕ್ಕೆ ಸಂಬಂಧಿಸಿದಂತೆ 'ಒಂದು ಆಕರ್ಷಕ ಲೋಗೋ+ ಒಂದು ಸಾಲುನುಡಿ, ಒಂದು ಸುಂದರ ಶುಭಕಾರಿ (mos cot), ವಿಭಿನ್ನವಾದ ಸ್ಮರಣಿಕೆಗಳು (sou venir), ಮೈಸೂರಿನಲ್ಲಿ ನಿಮ್ಮ ನೆಚ್ಚಿನ ಜಾಗ, ಚಟುವಟಿಕೆಯನ್ನು ವಿವರಿಸುವ ಒಂದು ಮುಂಬರಹ' ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಆಸಕ್ತರು ಅರ್ಜಿ ಸಲ್ಲಿಸಬಹುದಾಗಿದೆ. ನೋಂದಾಯಿಸಲು competitions @karnatakatourism.org ವೆಬ್‌ಸೈಟ್ ಅನ್ನು ಆ.31ರೊಳಗೆ ಸಂಪರ್ಕಿಸುವುದು. ಅರ್ಜಿ ಸಲ್ಲಿಸಲು ಸೆ.4 ಕೊನೆಯ ದಿನಾಂಕವಾಗಿದ್ದು, https://karnatakatourism.org/whats-new/competation ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಪ್ರತಿ ಸ್ಪರ್ಧೆಗೆ ಪ್ರಥಮ–20,000, ದ್ವಿತೀಯ–10,000 ಹಾಗೂ ತೃತೀಯ–5,000 ನಗದು ಬಹುಮಾನವನ್ನು ನೀಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ನಗರದ ಪ್ರತಿಷ್ಠಿತ ಅಧಿಕಾರಿಗಳೊಂದಿಗೆ ತಮ್ಮ ಅನಿಸಿಕೆಗಳನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗುತ್ತದೆ. ಸ್ಪರ್ಧೆಯಲ್ಲಿ ಗೆದ್ದ ಸಲ್ಲಿಕೆಗಳನ್ನು ಪ್ರವಾಸೋದ್ಯಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಅತಿಥಿ ಉಪನ್ಯಾಸಕರ ಪ್ರತಿಭಟನೆ



ಮೈಸೂರು,ಆ.16(ಜಿಎ)–ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯ ಮುಗಿಯುವವರೆಗೂ ಶೈಕ್ಷಣಿಕ ಅವಧಿ ಎಂದು ಪರಿಷ್ಕೃತ ವೇಳಾಪಟ್ಟಿಯ ಸುತ್ತೋಲೆ ಹೊರಡಿಸಬೇಕು. ಅಲ್ಲಿಯವರೆಗೂ ಮೌಲ್ಯಮಾಪನ ಕಾರ್ಯಗಳಲ್ಲಿ ಅತಿಥಿ ಉಪನ್ಯಾಸಕರು ಭಾಗವಹಿಸುವುದಿಲ್ಲ ಎಂದು ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ಬುಧವಾರ ಮೈಸೂರು ವಿವಿ ಕಾರ್ಯಸೌಧದ ಮುಂಭಾಗ ಪ್ರತಿಭಟನೆ ನಡೆಸಿತು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ವಿವಿ ಶೈಕ್ಷಣಿಕ ವೇಳಾಪಟ್ಟಿಯ ಸುತ್ತೋಲೆಗಳ ವ್ಯತ್ಯಾಸದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದರು.

2022–23ನೇ ಶೈಕ್ಷಣಿಕ ಸಾಲಿನ Even Semester ವೇಳಾಪಟ್ಟಿಯಂತೆ ಸ್ನಾತಕ ಪದವಿಗೆ ಬೋಧನೆ ತರಗತಿಗಳು ಜು.28ಕ್ಕೆ ಮುಕ್ತಾಯವಾಗುತ್ತದೆ. ಇದರಿಂದ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ವೇಳಾಪಟ್ಟಿಯಂತೆ ಕಾಲೇಜು ಶಿಕ್ಷಣ ಇಲಾಖೆ ಅತಿಥಿ ಉಪನ್ಯಾಸಕರ ಗೌರವಧನವನ್ನು ಜು.28ಕ್ಕೆ ಕೊನೆಗೊಳಿಸಿ ನಮ್ಮನ್ನು ಈಗಾಗಲೇ ಬಿಡುಗಡೆ ಮಾಡಿದೆ. ಆದರೆ, ಪರೀಕ್ಷಾ ಕಾರ್ಯಗಳು ಮಾತ್ರ ಬಾಕಿ ಉಳಿದಿವೆ. ಹೀಗಾಗಿ ಕಾಲೇಜು ಶಿಕ್ಷಣ ಇಲಾಖೆ ಗೌರವಧನ ನೀಡದ ಮತ್ತು ಬಿಡುಗಡೆಗೊಳಿಸಿದ ಕಾರಣ ಮೈಸೂರು ವಿವಿ ವ್ಯಾಪ್ತಿಯ ಸರ್ಕಾರಿ ಮೇಲ್ವಿಚಾರಣೆಯನ್ನು ಈಗಾಗಲೇ ಬಹಿಷ್ಕರಿಸಿದ್ದೇವೆ ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯ ಶೈಕ್ಷಣಿಕ ವೇಳಾಪಟ್ಟಿಯನ್ನು, ಪರೀಕ್ಷೆ ಕಾರ್ಯಗಳನ್ನೊಳಗೊಂಡಂತೆ ಶೈಕ್ಷಣಿಕ ಅವಧಿ ಎಂದು ಮೈ.ವಿ.ವಿ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯ ಸುತ್ತೋಲೆಯನ್ನು ಅತೀ ಶೀಘ್ರದಲ್ಲಿ ಹೊರಡಿಸಬೇಕೆಂದು ಈಗಾಗಲೇ ಎರಡು ಬಾರಿ ಮನವಿ ನೀಡಿದ್ದರೂ ಯಾವುದೇ ಕ್ರಮವನ್ನು ಮೈ.ವಿ.ವಿ ತೆಗೆದುಕೊಂಡಿಲ್ಲದ ಕಾರಣ ಪ್ರತಿಭಟನೆ ಮಾಡುತ್ತಿದ್ದೇವೆ. ನಾವುಗಳು ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ವಿಭಾಗಗಳಲ್ಲಿ ಮೌಲ್ಯಮಾಪನ ಕಾರ್ಯಗಳಿಗೆ ಭಾಗಿಯಾಗುವುದಿಲ್ಲ, ಮುಂದುವರೆದು ಜರೂರಾಗಿ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯ ಸುತ್ತೋಲೆ ಹೊರಡಿಸದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರವಾದ ಹೋರಾಟ ಮಾಡುತ್ತೇವೆ ಎಂದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಡಾ.ದಿವಾಕರ, ಮೈಸೂರು ಜಿಲ್ಲಾಧ್ಯಕ್ಷ ಹನುಮಂತೇಶ್, ಚಾಮರಾಜನಗರ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಹಾಸನ ಜಿಲ್ಲಾಧ್ಯಕ್ಷ ಯತೀಶ್ ಕಬ್ಬಾಳು, ಮಂಡ್ಯ ಜಿಲ್ಲಾಧ್ಯಕ್ಷ ಕೆ.ಹೆಚ್.ವಸಂತಕುಮಾರ್, ಉಪಾಧ್ಯಕ್ಷ ಡಾ.ಜಿ.ಮಹೇಶ್, ರಾಜ್ಯ ಮಹಿಳಾ ಪ್ರತಿನಿಧಿ ಡಾ.ಜಿ.ಶಾಮಲ, ಪ್ರಧಾನ ಕಾರ್ಯದರ್ಶಿಗಳಾದ ಗುರುರಾಜು ಬಿ.ಯರಗನಹಳ್ಳಿ, ಎಸ್.ಎಂ.ಮಾನಸ, ಮಾಧ್ಯಮ ವಕ್ತಾರ ಡಾ.ರವೀಂದ್ರ, ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಎಸ್.ನಾಗರಾಜ್ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.8.2023 ಗುರುವಾರ, ಮಳೆ ನಕ್ಷತ್ರ: ಮಖ 17.08.2023 ರಿಂದ 30.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಸಹಕಾರ ಭಾರತಿ:** ಸಹಕಾರ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸದಸ್ಯರಿಗೆ ಅಭ್ಯಾಸ ವರ್ಗ, ಉದ್ಘಾಟನೆ: ಸಹಕಾರ ಭಾರತಿ ರಾಷ್ಟ್ರೀಯ ಉಪಾಧ್ಯಕ್ಷ ಬಿ.ಹೆಚ್.ಕೃಷ್ಣರೆಡ್ಡಿ, ಅಧ್ಯಕ್ಷತೆ: ಜಿಲ್ಲಾಧ್ಯಕ್ಷ ಬಿ.ಮಹದೇವಸ್ವಾಮಿ, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹಾಲು ಪ್ರಕೋಷ್ಠ ಪ್ರಮುಖ ನರಸಿಂಹ ಕಾಮತ್, ನಾಗಮಣಿ, ಛಾಯಾ, ಎಸ್.ಆರ್.ನಾರಾಯಣರಾವ್, ಬಿ.ಆರ್.ಮಂಜುನಾಥ್, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಬಸವ ಜಯಂತಿ ಮತ್ತು ಶೂನ್ಯ ಸಂಪಾದನೆಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು: ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಉದ್ಘಾಟನಾ ಭಾಷಣ: ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಪ್ರೊ. ಮುರಿಗೇಶಪ್ಪ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ವಿಜಯಕುಮಾರಿ ಕರಿಕಲ್, ಆಶಯ ನುಡಿ: ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಚಂದ್ರಶೇಖರಯ್ಯ, ಸ್ಥಳ: ನೂತನ ಕಟ್ಟಡ, ಶ್ರೀ ಬಸವೇಶ್ವರ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿವಿ ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ:** ಇತಿಹಾಸ ರಿಫ್ರೆಶರ್ ಕೋರ್ಸ್ ಉದ್ಘಾಟನಾ ಸಮಾರಂಭ, ಉದ್ಘಾಟನೆ: ನಿವೃತ್ತ ಪ್ರಾಧ್ಯಾಪಕ ಪ್ರೊ.ಹೆಚ್.ಎಸ್.ಪ್ರಭಾಕರ್, ಉಪಸ್ಥಿತರು: ಕೇಂದ್ರದ ನಿರ್ದೇಶಕಿ ಪ್ರೊ.ಮಾಲಿನಿ, ಅಧ್ಯಕ್ಷತೆ: ಮೈಸೂರು ವಿವಿ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಸೋಮಶೇಖರ್, ಸ್ಥಳ: ಯುಜಿಸಿ–ಹೆಚ್‌ಆರ್‌ಡಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ.

■ **ವಿದ್ಯಾರಣ್ಯ ಟ್ರಸ್ಟ್ :** ಗ್ರಂಥಪಾಲಕರ ದಿನಾಚರಣೆ, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಧ್ಯಾಪಕರಾದ ಡಾ. ಆರ್.ಹೆಚ್. ಪವಿತ್ರ, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕದ ಅಧ್ಯಕ್ಷ ಚಂದ್ರಶೇಖರ್, ವಿಕ್ರಂ ಅಯ್ಯಂಗಾರ್, ಸ್ಥಳ: ವಿದ್ಯಾರಣ್ಯ ಕೋಚಿಂಗ್ ಸೆಂಟರ್, ವಿದ್ಯಾರಣ್ಯಪುರಂ, ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್. ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಸಂಧ್ಯಾ ಹೊನಗುಂಟಿಕರ್, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್ 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ–ಜಿ. ಶಾಂತಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00ಪ್ರೊ.ಆರ್. ವಿಶ್ವೇಶ್ವರನ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ;** 12.30 ದೇವರನಾಮ–ಅನಂತ ಕುಲಕರ್ಣಿ, ಸಹನಾ ರಾಮಚಂದ್ರ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ– ಕೆ.ಪಿ.ರೇವತಿ, ಜ್ಯೋತಿ ಮತ್ತು ಸ್ಟ್ಯಾನ್ಲೀ ಪಾರ್ಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ– ಕೆಂಪಮ್ಮ ಮತ್ತು ಸಂಗಡಿಗರು, 4.30 ವಿಜ್ಞಾನ ಭಾರತಿ–ವರ್ಣತಂತು ವ್ಯತ್ಯಯದ ಕಾಯಿಲೆಗಳ ಬಗ್ಗೆ ಮಾತನಾಡುತ್ತಾರೆ ಸುತ್ತೂರು ಎಸ್. ಮಾಲಿನಿ, ಜೀವಿಗಳಲ್ಲಿ ರಕ್ಷಣಾ ತಂತ್ರಗಳು ಕುರಿತು ಮಾತನಾಡುತ್ತಾರೆ ಡಾ. ನಂದಿನಿ ಜಿ., 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಬಯಲು ಸಂಚಾರ ಬೆಳೆಗಳ ಬೇಸಾಯ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ.ಕೆ.ಎನ್.ಹರ್ಷ, ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಹಲೋ ಯುವವಾಣಿ–ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ "ನಾಯಿ ಬಾಲ ಡೊಂಕೆ", ರಚನೆ– ಡಾ.ಅನಿಲಕುಮಾರ್ ಮುಗಳಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ :** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಸಿ.ಎಸ್. ಶ್ರೀನಿವಾಸಮೂರ್ತಿ ಆಚಾರ್ಯ ಅವರಿಂದ ಉತ್ತರಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 6ರಿಂದ 7ರವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇದಾನಂದ ಅವರಿಂದ ದೇವರೊಡನೆ ಸಂಭಾಷಣೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್, ಮೈಸೂರು :** ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ 3ನೇ ಹಂತ, ಸಂಜೆ 6.30 ರಿಂದ.

■ **ಚಿನ್ಮಯ ಮಿಷನ್ :** ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಕುರಿತು ಕನ್ನಡದಲ್ಲಿ ಪ್ರವಚನ, ಸ್ಥಳ: ಚಿನ್ಮಯ ಮಿಷನ್, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಸಂಜೆ 6.30ರಿಂದ.

■ **ಗಾನಭಾರತೀ :** ನರ್ತನ ನಮನ, ದಿವಂಗತ ಡಾ. ಕೆ. ರಾಮಶಾಸ್ತ್ರಿ ಹಾಗೂ ದಿವಂಗತ ಗುರು ವಾಲ್ಮೀಕಿ ಬ್ಯಾನರ್ಜಿ, ನವದೆಹಲಿ ಅವರಿಗೆ ಗಾಯನ ಹಾಗೂ ನರ್ತನದ ಮೂಲಕ ಶ್ರದ್ಧಾಂಜಲಿ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ

ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ, ವಿದ್ವಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸ್ಥಳ: ಸುತ್ತೂರು.

ಮೈಸೂರು ಮಿತ್ರ

ಗುರುವಾರ 17 ಆಗಸ್ಟ್ 2023

ಆ.20, ದೇವರಾಜ ಅರಸು ಜನ್ಮ ದಿನಾಚರಣೆ



ಮೈಸೂರು,ಆ.16– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆ.20ರಂದು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 108ನೇ ಜನ್ಮ ದಿನಾಚರಣೆಯನ್ನು ಬೆಳಗ್ಗೆ 10.30ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ. ರೂಪ, ಸಂಸದರು, ವಿಧಾನಸಭಾ ಸದಸ್ಯರು ಹಾಗೂ ವಿಧಾನಪರಿಷತ್ ಸದಸ್ಯರು ಉಪಸ್ಥಿತರಿರುವರು. ಜಿಲ್ಲೆಯ ಎಲ್ಲಾ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಯವರು ಮತ್ತು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರಕಾಸ್ತ್ರ ಹೊಂದಿದ್ದ ವಿದ್ಯಾರ್ಥಿಗಳ ಬಂಧನ

ಮೈಸೂರು, ಆ. 16– ಮಾರಕಾಸ್ತ್ರಗಳನ್ನು ಹೊಂದಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು 2 ಲಾಂಗ್ ಮತ್ತು ಕಾರು ವಶಪಡಿಸಿಕೊಂಡು 7 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಮಕೃಷ್ಣನಗರ ಡಿ ಬ್ಲಾಕ್ ನಿವಾಸಿ ಎಂಬಿಎ ವಿದ್ಯಾರ್ಥಿ ಸಮರ್ಥ್(25) ಮತ್ತು ಗಿರಿದರ್ಶಿನಿ ಲೇಔಟ್ ನಿವಾಸಿ ಬಿಇ ವಿದ್ಯಾರ್ಥಿ ಉತ್ಸವ್(19) ಬಂಧಿತರಾಗಿದ್ದು, ಇವರ ಸ್ನೇಹಿತರಾದ ರಾಹುಲ್, ಮನೋಜ್, ದರ್ಶನ್, ಅಭಿ ಮತ್ತು ಫರ್ದಿನ್ ಎಂಬುವರ ವಿರುದ್ಧ ಕೇಸ್ ದಾಖಲಿಸಲಾಗಿದೆ. ಇವರುಗಳು ಶಶಾಂಕ್ ಎಂಬ ಯುವಕನನ್ನು ಹೆದರಿಸಲು ಕಾರಿನಲ್ಲಿ ಲಾಂಗ್‌ಗಳನ್ನಿಟ್ಟುಕೊಂಡು ಕಾಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ವಿವರ: ಕುವೆಂಪುನಗರ ಸಬ್ ಇನ್ಸ್‌ಪೆಕ್ಟರ್ ಎಸ್.ಪಿ.ಗೋಪಾಲ್ ಅವರು ಆ.14ರಂದು ಮಧ್ಯಾಹ್ನ ಕುವೆಂಪುನಗರ ಕಾಂಪ್ಲೆಕ್ಸ್ ಬಳಿ ಸಿಬ್ಬಂದಿಯೊಂದಿಗೆ ಗಸ್ತಿನಲ್ಲಿದ್ದಾಗ ನಿಮಿಷಾಂಬ ಬಡಾವಣೆ ಬಳಿ ಇರುವ ಕದಂಬ ವೈನ್ಸ್ ಮುಂಭಾಗ ಕಾರನ್ನು ನಿಲ್ಲಿಸಿಕೊಂಡಿರುವ ಯುವಕರ ತಂಡ ಅನುಮಾನಾಸ್ಪದವಾಗಿ ವರ್ತಿಸುತ್ತಿದೆ ಎಂಬ ಮಾಹಿತಿ ಬಂದ ಹಿನ್ನೆಲೆಯಲ್ಲಿ ಅಲ್ಲಿಗೆ ತೆರಳಿದ್ದಾರೆ. ಕದಂಬ ವೈನ್ಸ್ ಮುಂಭಾಗ ಪೋಲೊ ಕಾರು (ಕೆಎ 12–ಪಿ 0868) ನಿಂತಿದ್ದು, ಅದರ ಬಳಿ ಕೆಲ ಯುವಕರು ಇರುವುದನ್ನು ಕಂಡಿದ್ದಾರೆ. ಪೊಲೀಸರ ಜೀಪ್ ನೋಡಿದ ತಕ್ಷಣ ಯುವಕರು ಓಡಲಾರಂಭಿಸಿದ್ದು, ಅವರಲ್ಲಿ ಸಮರ್ಥ್ ಮತ್ತು ಉತ್ಸವ್ ಮಾತ್ರ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ. ಅವರನ್ನು ವಿಚಾರಣೆಗೊಳಪಡಿಸಿದಾಗ ಸಮರ್ಥ್‌ಗೆ ಆತನ ಸ್ನೇಹಿತ ಶಶಾಂಕ್ ಹಿಂದಿನ ದಿನ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿದ್ದ ಎಂದು ಹೇಳಲಾಗಿದ್ದು, ಆತನನ್ನು ಕದಂಬ ವೈನ್ಸ್ ಬಳಿಗೆ ಕರೆಸಿಕೊಂಡು ಲಾಂಗ್‌ಗಳನ್ನು ತೋರಿಸಿ ಬೆದರಿಸಲು ಈ ಯುವಕರು ನಿಂತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಿ 7 ಮಂದಿ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಕೆಎಸ್‌ಆರ್‌ಟಿಸಿ ವಿಭಾಗೀಯ ಕಚೇರಿಯಲ್ಲಿ ಕಬ್ಬಿಣ ಕಳವು

ಮೈಸೂರು,ಆ.16–ಮೈಸೂರಿನ ಬನ್ನಿಮಂಟಪದಲ್ಲಿರುವ ಕೆಎಸ್‌ಆರ್‌ಟಿಸಿ ವಿಭಾಗೀಯ ಕಚೇರಿ ಆವರಣದಲ್ಲಿ 140 ಕೆಜಿ ತೂಕದ ಕಬ್ಬಿಣದ ವಸ್ತುಗಳನ್ನು ಕಳವು ಮಾಡುತ್ತಿದ್ದ ಓರ್ವನನ್ನು ಕೆಎಸ್‌ಆರ್‌ಟಿಸಿ ಭದ್ರತಾ ಸಿಬ್ಬಂದಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಮೈಸೂರಿನ ಕರಕುಶಲ ನಿವಾಸಿ ಅಪ್ಸನ್ ಎಂಬಾತನೇ ಬಂಧಿತನಾಗಿದ್ದು, ಈತನ ಜೊತೆಗಿದ್ದ ಇಬ್ಬರು ಪರಾರಿಯಾಗಿದ್ದಾರೆ.

ವಿವರ: ಕೆಎಸ್‌ಆರ್‌ಟಿಸಿ ಭದ್ರತಾ ಸಿಬ್ಬಂದಿ ಸಿ.ಜನಾರ್ಧನ (33), ಆಗಸ್ಟ್ 14ರಂದು 2ನೇ ಪಾಳಿ ಕರ್ತವ್ಯದಲ್ಲಿದ್ದಾಗ ಸಂಜೆ 6.35ರಲ್ಲಿ ಕೆಎಸ್‌ಆರ್‌ಟಿಸಿ ವಿಭಾಗೀಯ ಕಚೇರಿಯ ಹಿಂಭಾಗದಲ್ಲಿ ಕಳ್ಳತನ ನಡೆಯುತ್ತಿದೆ ಎಂದು ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಅಲ್ಲಿಗೆ ತೆರಳಿದ್ದಾರೆ. ಕಚೇರಿ ಹಿಂಭಾಗದ ಕಾಂಪೌಂಡ್ ಬಳಿ 40 ಕೆಜಿ ತೂಕದ ಡಿಸ್ಕ್, 80 ಕೆಜಿ ತೂಕದ ಕಬ್ಬಿಣದ ಗೇಟ್ ಮತ್ತು 20 ಕೆಜಿ ತೂಕದ ಕಬ್ಬಿಣದ ಬಿಡಿ ಭಾಗಗಳನ್ನು ಮೂವರು ಕದ್ದು ಸಾಗಿಸುತ್ತಿದ್ದುದನ್ನು ಕಂಡು ಅವರಲ್ಲಿ ಅಪ್ಸನ್ ಎಂಬಾತನನ್ನು ಜನಾರ್ಧನ ಹಿಡಿದು ಎನ್‌ಆರ್ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಅಪ್ಸನ್‌ನನ್ನು ಬಂಧಿಸಿ ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಮನೆಗಳಲ್ಲಿ ನಗದು, ಚಿನ್ನಾಭರಣ ಕಳವು

ಹೆಚ್.ಡಿ. ಕೋಟೆ, ಆ. 16– ಹೆಚ್.ಡಿ.ಕೋಟೆ ತಾಲೂಕು ಮಲಾರದಹುಂಡಿ ಗ್ರಾಮದಲ್ಲಿ ಒಂದೇ ದಿನ ರಾತ್ರಿ ಮೂರು ಮನೆಗಳಲ್ಲಿ ಸರಣಿ ಕಳ್ಳತನ ನಡೆದಿದೆ.



ಗ್ರಾಮದ ಶಿವಮ್ಮ(65), ಆ.13ರಂದು ಬೇರೆ ಊರಿನಲ್ಲಿರುವ ತನ್ನ ಮಗನ ಮನೆಗೆ ಹೋಗಿದ್ದು, ಮರುದಿನ ಬೆಳಗ್ಗೆ ನೋಡಿದಾಗ ಖದೀಮರು ಅವರ ಮನೆಯ ಬೀಗ ಮುರಿದು 35 ಸಾವಿರ ನಗದು, 6 ಗ್ರಾಂ ತೂಕದ ಚಿನ್ನಾಭರಣ ಹಾಗೂ ಪಕ್ಕದ ಮನೆಯ ರಮೇಶ ಎಂಬುವರ ಕೊಟ್ಟಿಗೆಯಲ್ಲಿದ್ದ 2 ಮೇಕೆಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ನಿಂಗರಾಜು(36), ಆ.13ರಂದು ಬೆಳಗ್ಗೆ ನಾಗನಹಳ್ಳಿಯ ಸಂಬಂಧಿಕರ ಮನೆಗೆ ಹೋಗಿದ್ದು, ಮರುದಿನ ಬೆಳಗ್ಗೆ ಬಂದು ನೋಡಿದರೆ, ಮನೆ ಬೀಗ ಮುರಿದು 50 ಸಾವಿರ ರೂ. ನಗದು, 10 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಲಾಗಿದೆ.

ಪುಟ್ಟಮ್ಮ(70) ಎಂಬುವರು ಆ.13ರಂದು ಸಂಜೆ ಮೈಸೂರಿನ ಮಗನ ಮನೆಗೆ ಹೋಗಿದ್ದು, ಮರುದಿನ ಬರುವಷ್ಟರಲ್ಲಿ ಮನೆ ಬೀಗ ಮುರಿದು 3 ಲಕ್ಷ ರೂ. ನಗದು ಕಳವು ಮಾಡಲಾಗಿದೆ. ಈ ಮೂರು ಪ್ರಕರಣಗಳು ಹೆಚ್.ಡಿ.ಕೋಟೆ ಠಾಣೆಯಲ್ಲಿ ದಾಖಲಾಗಿವೆ.

ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಗೃಹಿಣಿಗೆ 4.13 ಲಕ್ಷ ವಂಚನೆ

ಮೈಸೂರು, ಆ. 16– ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಗೃಹಿಣಿಯಿಂದ 4.13 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಸಾಲಿಗ್ರಾಮ ತಾಲೂಕು ಕರ್ತಾಳು ಗ್ರಾಮದ ಗೃಹಿಣಿ ಸಿ.ಎಸ್. ಸೌಮ್ಯ(27) ವಂಚನೆಗೊಳಗಾದವರಾಗಿದ್ದು, ಇವರ ಪತಿ ನವದೆಹಲಿಯಲ್ಲಿ ಸಶಸ್ತ್ರ ಸೀಮಾ ಬಲದ (ಎಸ್‌ಎಸ್‌ಬಿ) ಕಾನ್‌ಸ್ಟೇಬಲ್ ಆಗಿ ಕೆಲಸ ಮಾಡುತ್ತಿದ್ದಾರೆ. ಸೌಮ್ಯ ಅವರಿಗೆ 2022ರ ಸೆ.13ರಂದು ಬೆಳಗ್ಗೆ 8317310876 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತನ್ನ ಹೆಸರನ್ನು ಪ್ರವೀಣ್ ಎಂದು ತಿಳಿಸಿದ್ದು, ಸಮಾಜ ಸೇವಕನೆಂದು ಪರಿಚಯ ಮಾಡಿಕೊಂಡಿದ್ದಾನೆ. ಸೌಮ್ಯ ಅವರ ವಿದ್ಯಾಭ್ಯಾಸದ ಬಗ್ಗೆ ಕೇಳಿದ್ದು ಅವರು ಬಿಎಸ್ಸಿ ಪದವೀಧರೆ ಎಂದು ಹೇಳಿದಾಗ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿದ್ದಾನೆ.

ಮರುದಿನವೇ ಕರೆ ಮಾಡಿದ ಆತ ನಿಮ್ಮ ಕೆಲಸಕ್ಕೆ ಸಂಬಂಧಪಟ್ಟಂತೆ ವಿಧಾನಸೌಧಕ್ಕೆ ಹೋಗುವುದಾಗಿ ತಿಳಿಸಿ, ಮೊದಲಿಗೆ 20 ಸಾವಿರ ಗೂಗಲ್ ಪೇ ಮೂಲಕ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ನಂತರ ಹಂತಹಂತವಾಗಿ ಕಳೆದ ಫೆ.12ರವರೆಗೆ ಒಟ್ಟು 4.13 ಲಕ್ಷ ವರ್ಗಾವಣೆ ಮಾಡಿಸಿಕೊಂಡ ಈತ, ಕೆಲಸವನ್ನೂ ಕೊಡಿಸದೇ, ಹಣವನ್ನೂ ಹಿಂತಿರುಗಿಸದೇ ವಂಚಿಸಿದ್ದಾನೆ ಎಂದು ಸೌಮ್ಯ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಪ್ರಧಾನಿಗಳಿಂದ ವಿಶ್ವಕರ್ಮ ಯೋಜನೆ ಘೋಷಣೆ ಹಿನ್ನೆಲೆ; ಸಂಸದ ಪ್ರತಾಪ್ ಸಿಂಹರಿಗೆ ಸನ್ಮಾನ



ಮೈಸೂರು,ಆ.16(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಸ್ವಾತಂತ್ರ್ಯ ದಿನಾಚರಣೆ ಭಾಷಣದಲ್ಲಿ 15 ಸಾವಿರ ಕೋಟಿ ವೆಚ್ಚದ 'ವಿಶ್ವಕರ್ಮ ಯೋಜನೆ' ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘದ ವತಿಯಿಂದ ಸಂಸದ ಪ್ರತಾಪ್‌ಸಿಂಹ ಅವರನ್ನು ಬುಧವಾರ ಸನ್ಮಾನಿಸಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿಗೃಹ ಆವರಣದ ತಮ್ಮ ಕಚೇರಿ ಎದುರು ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರತಾಪ್ ಸಿಂಹ, ವಿಶ್ವಕರ್ಮ ಜನಾಂಗದ ಶ್ರೇಯೋಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಬೃಹತ್ ಮೊತ್ತದ ಯೋಜನೆ ಘೋಷಣೆ ಮಾಡಿದ್ದಾರೆ. ಇದನ್ನು ಸ್ವಾಗತಿಸಿ ವಿಶ್ವಕರ್ಮ ಸಮುದಾಯದ ಮುಖಂಡರು ನನ್ನನ್ನು ಸನ್ಮಾನಿಸುವ ಮೂಲಕ ಪ್ರಧಾನಿಗಳಿಗೆ ಕೃತಜ್ಞತೆ ಅರ್ಪಿಸಿದ್ದು, ಇದನ್ನು ಪ್ರಧಾನಿಗಳಿಗೆ ತಿಳಿಸುತ್ತೇನೆ ಎಂದು ನುಡಿದರು.

ನರೇಂದ್ರ ಮೋದಿಯವರು ವಿಶ್ವಕರ್ಮ ಜನಾಂಗ ಸೇರಿದಂತೆ ಸಣ್ಣ ಸಣ್ಣ ನೂರಾರು ಶ್ರಮಿಕ ಸಮಾಜದ ಪಾರಂಪರಿಕ ಕುಲ ಕಸುಬುಗಳನ್ನು ಪ್ರೋತ್ಸಾಹಿಸಲು ಹಲವು ಯೋಜನೆಗಳನ್ನು ತಂದಿದ್ದು, ಅವುಗಳನ್ನು ಸದುಪಯೋಗ ಪಡಿಸಿಕೊಂಡು ಮುಖ್ಯವಾಹಿನಿಗೆ ಬರಬೇಕು ಎಂದು ಹೇಳಿದರು.

ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ರಿಷಿ ವಿಶ್ವಕರ್ಮ ಮಾತನಾಡಿ, ಸಾಂಪ್ರದಾಯಿಕ ಕೌಶಲ್ಯ ಹೊಂದಿರುವ ಸಮು ದಾಯಗಳಿಗೆ ಹೊಸ ಅವಕಾಶ ಕಲ್ಪಿಸುವ ವಿಶ್ವಕರ್ಮ ಯೋಜನೆಯನ್ನು ವಿಶ್ವಕರ್ಮ ಜಯಂತಿಯಂದು ಜಾರಿಗೆ ತರುವುದಾಗಿ ಪ್ರಧಾನಿಗಳು ಘೋಷಿಸಿರುವುದು ಸ್ವಾಗತಾರ್ಹ ಎಂದು ಹರ್ಷ ವ್ಯಕ್ತಪಡಿಸಿದರು. ವಿವಿಧ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ 13.5 ಕೋಟಿ ಇತರೆ ಹಿಂದುಳಿದ ವರ್ಗದ ಜನತೆಗೆ ಇನ್ನಷ್ಟು ಅವಕಾಶಗಳನ್ನು ಸೃಷ್ಟಿಸಿ ಅವರ ಜೀವನಕ್ಕೆ ಇನ್ನಷ್ಟು ಬಲ ತುಂಬುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಜಾರಿಗೊಳಿಸುವುದಾಗಿ ಪ್ರಧಾನಿಗಳು ತಮ್ಮ ಸ್ವಾತಂತ್ರ್ಯ ದಿನಾಚರಣೆ ಭಾಷಣದಲ್ಲಿ ತಿಳಿಸಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹ. ಅಲ್ಲದೆ, ತಮ್ಮ ಭಾಷಣದಲ್ಲಿ ಮೂರ್ನಾಲ್ಕು ಬಾರಿ ವಿಶ್ವಕರ್ಮ ಸಮುದಾಯದ ಹೆಸರನ್ನು ಪ್ರಸ್ತಾಪಿಸಿ, ವಿಶ್ವಕ್ಕೆ ವಿಶ್ವಕರ್ಮರ ಕೊಡುಗೆಗಳನ್ನು ಮತ್ತೊಮ್ಮೆ ಪರಿಚಯಿಸಿದ್ದಾರೆ ಎಂದು ಪ್ರಧಾನಿ ಗಳಿಗೆ ಸಮುದಾಯದ ಪರವಾಗಿ ಧನ್ಯವಾದ ಅರ್ಪಿಸಿದರು.

ಇದೇ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಿಸಲು ಒಂದು ಎಕರೆ ಭೂಮಿಯನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಡುವಂತೆ ಸಂಘದ ಪದಾಧಿಕಾರಿಗಳು ಸಂಸದರಲ್ಲಿ ಮನವಿ ಮಾಡಿದರು. ಸಂಘದ ಉಪಾಧ್ಯಕ್ಷರಾದ ಲೋಹಿತೇಶ್ ಆಚಾರ್, ಚೆಲುವರಾಜು, ಕಾರ್ಯದರ್ಶಿಗಳಾದ ಸಿ.ಟಿ. ಆಚಾರ್ಯ, ಈಶ್ವರಚಾರ್, ಖಜಾಂಚಿ ಲೋಕೇಶ್ ಆಚಾರ್, ಮುಖಂಡರಾದ ನಾಗಮ್ಮ, ಎಂ.ಎನ್.ಬಸವರಾಜ್, ಅರ್ಕೇಶ್ವರಚಾರ್, ಮಂಜು, ಸ್ವಾಮಿ, ರವಿ ಮತ್ತಿತರರು ಹಾಜರಿದ್ದರು.

ಬಯೋಮೆಟ್ರಿಕ್ ಅಥೆಂಟಿಕೇಷನ್ ಮಾಡಿಸಲು ಸೂಚನೆ

ಮೈಸೂರು,ಆ.16–2022–23ನೇ ಸಾಲಿನ ಅಲ್ಪಸಂಖ್ಯಾತರ ವಿದ್ಯಾರ್ಥಿವೇತನ ಕುರಿತಾಗಿ ಕೇಂದ್ರ ಅಲ್ಪಸಂಖ್ಯಾತರ ಮಂತ್ರಾಲಯದಿಂದ ಎನ್‌ಎಸ್‌ಪಿ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳು HOI, INO ಮತ್ತು ವಿದ್ಯಾರ್ಥಿಗಳ ಬಯೋಮೆಟ್ರಿಕ್ ಅಥೆಂಟಿಕೇಷನ್ ಮಾಡಿಸಲು ಸೂಚಿಸಲಾಗಿದೆ. ವಿದ್ಯಾರ್ಥಿಗಳ ಪಟ್ಟಿಯನ್ನು ಇಲಾಖೆ ಜಿಲ್ಲಾಧಿಕಾರಿ ಕಚೇರಿಯಿಂದ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳಿಗೆ ಇ–ಮೇಲ್ ಮೂಲಕ ತಲುಪಿಸಿದ್ದು, ಜಿಲ್ಲೆಯ ಶಿಕ್ಷಣ ಸಂಸ್ಥೆಗಳು ಬಯೋಮೆಟ್ರಿಕ್ ಅಥೆಂಟಿಕೇಷನ್ ಅನ್ನು ಆ.20ರೊಳಗಾಗಿ ಮಾಡಿಸಬೇಕಾಗಿದೆ. ಮಾಹಿತಿಗೆ ದೂ.ಸಂ: 0821– 2422088, 8951087207, 9739944171, 9620925247 ಸಂಪರ್ಕಿಸಿ.

ನಕ್ಕರೆ ಅದೇ ಸ್ವರ್ಗ

ಹುಡುಗಿ : ಒಂದು ಕವನ ಹೇಳು, ಪ್ಲೀಸ್...
ಹುಡುಗ : ನಿನ್ನ ನೋಡಿದಾಗ ನಾ ನನ್ನನ್ನೇ ಮರೆತೆ...
ಹುಡುಗಿ : ವಾಹ್... ಸೂಪರ್... ಆಮೇಲೆ?
ಹುಡುಗ : ನಿನ್ನ ಫ್ರೆಂಡ್ ನೋಡಿದ
ಮೇಲೆ ನಿನ್ನನ್ನೇ ಮರೆತೆ?

ಮೈಸೂರು ಮಿತ್ರ

ಗುರುವಾರ, 17 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮೌನ ನಿಮ್ಮ ನಿಜವಾದ ಗೆಳೆಯ. ಅದು ನಮಗೆ ಯಾವತ್ತೂ ಮೋಸ ಮಾಡುವುದಿಲ್ಲ. –ಕನ್ ಫ್ಯೂಸಿಯಸ್

ವೇದ ಸುಳ್ಳಾದರೂ { ಕುಂಟೆತ್ತಿಗೆ
ಗಾದೆ ಸುಳ್ಳಾಗದು { ಎಂಟೆಳೆ ಹಗ್ಗ

ನಿಮ್ಮ ಪತ್ರಗಳು

ಕೆಆರ್‌ಎಸ್ ರಸ್ತೆಗೆ ಕಪ್ಪುಚುಕ್ಕೆ...



ಮಾನ್ಯರೆ,

ಮೈಸೂರು ನಗರದ ಕೆಆರ್‌ಎಸ್ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ವಾಹನಗಳು, ಪ್ರವಾಸಿಗರು ಓಡಾಡುತ್ತಾರೆ. ಈ ಮಾರ್ಗದ ಚೆಲುವಾಂಬ ಉದ್ಯಾನವನದ ವಿವೇಕಾನಂದ ಪ್ರತಿಮೆ ಇರುವ ಜಾಗದಲ್ಲಿ ನೀರಿನ ಪೈಪ್ ಒಡೆದು ಹೋಗಿದ್ದು, ಅದನ್ನು ದುರಸ್ತಿ ಮಾಡಿ ಮಣ್ಣು ಮುಚ್ಚಿ ಮೇಲೆ ಬ್ಯಾರಿಕೇಡ್ ಹಾಕಿದ್ದಾರೆ. ಇದು ಇಡೀ ರಸ್ತೆಗೆ ಕಪ್ಪುಚುಕ್ಕೆಯಂತೆ ಕಾಣುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಬ್ಯಾರಿಕೇಡ್ ತೆರವುಗೊಳಿಸಿ, ಮಣ್ಣು ಹಾಕಿರುವ ಜಾಗಕ್ಕೆ ಡಾಂಬರ್ ಹಾಕಿ ಕೆಆರ್‌ಎಸ್ ರಸ್ತೆಯ ಅಂದವನ್ನು ಕಾಪಾಡಬೇಕಾಗಿದೆ.

–ಪಡುವಾರಹಳ್ಳಿ ಎಂ ರಾಮಕೃಷ್ಣ, ವಕೀಲರು, ಮೈಸೂರು.

ರೈಲುಗಳಲ್ಲಿ ನಕಲಿ ಮಂಗಳಮುಖಿಯರ ಕಾಟ ತಪ್ಪಿಸಿ !

ಮಾನ್ಯರೆ,

ಮೈಸೂರು – ಬೆಂಗಳೂರು, ಮೈಸೂರು – ಚೆನ್ನೈ, ಮೈಸೂರು – ಹಾಸನ–ಮಂಗಳೂರು, ಮೈಸೂರು – ಶಿವಮೊಗ್ಗ, ಮೈಸೂರು–ಚಾಮರಾಜನಗರ, ಮೈಸೂರು – ಕಾಚಿಗೂಡ, ಮೈಸೂರು – ಬಿಜಾಪುರ, ಬೆಂಗಳೂರು – ಚೆನ್ನೈ, ಬೆಂಗಳೂರು – ನಾಂದೇಡ್, ಬೆಂಗಳೂರು – ಮುಂಬೈ ಹಾಗೂ ಇನ್ನಿತರ ಪ್ರಮುಖ ನಗರಗಳಿಗೆ ತೆರಳುವ ರೈಲುಗಳಲ್ಲಿ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಎಲ್ಲಾ ವಯೋಮಾನದ ಮಹಿಳೆಯರು, ಪುರುಷರು, ಮಕ್ಕಳು ಹಾಗೂ ವೃದ್ಧರು ಸೇರಿ ಇತರ ಸಾರ್ವಜನಿಕರು ಪ್ರಯಾಣಿಸುತ್ತಾರೆ. ಈ ಸಂದರ್ಭಗಳಲ್ಲಿ ಕೆಲವು ವ್ಯಕ್ತಿಗಳು ಮಂಗಳಮುಖಿಯರಂತೆ ವಸ್ತ್ರ ಧರಿಸಿಕೊಂಡು ರೈಲಿನಲ್ಲಿ ಪ್ರಯಾಣಿಸುವವರಿಂದ ಹಣ ವಸೂಲಿ ಮಾಡುತ್ತಿದ್ದು, ಹಣ ನೀಡದ ಪ್ರಯಾಣಿಕರಿಗೆ ಬಾಯಿಗೆ ಬಂದಂತಹ ಅಶ್ಲೀಲ ಪದಗಳಲ್ಲಿ ಬೈಯುತ್ತಾರೆ. ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದ್ದು, ನೈಜ ಮಂಗಳಮುಖಿಯರ ಗೌರವಕ್ಕೂ ಧಕ್ಕೆಯಾಗುತ್ತಿದೆ. ಇಂತಹ ಘಟನೆಗಳಿಂದ ಮುಜುಗರ ಆಗುತ್ತಿದೆ. ಕೂಡಲೇ ರೈಲಿನಲ್ಲಿ ಇಂತಹ ಘಟನೆಗಳು ನಡೆಯದಿರಲು ರೈಲಿನ ಪ್ರತಿ ಬೋಗಿಗಳಿಗೆ ಭದ್ರತೆ ಒದಗಿಸಲು ರೈಲ್ವೆಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ದಾಖಲಾತಿಗಳು ಪಾಲಿಕೆಯಲ್ಲೇ ಇರುವಾಗ ಮಾಲೀಕರಿಗೆ ತೊಂದರೆ ಸಲ್ಲ

ಮಾನ್ಯರೆ,

ಮೈಸೂರು ನಗರಪಾಲಿಕೆಯವರು ಇ–ದಾಖಲೆ ಮಾಡುವ ಸಂಬಂಧ ಎಲ್ಲಾ ಮನೆಗಳಿಗೆ ನೋಟೀಸ್ ಕೊಟ್ಟು ಅದರಲ್ಲಿ ಕೇಳಿರುವ ದಾಖಲೆಗಳನ್ನು ನಗರಪಾಲಿಕೆಗೆ ತಂದು ಕೊಡುವಂತೆ ಸೂಚನೆ ನೀಡಿದ್ದಾರೆ. ಅವರು ಕೇಳಿರುವ ದಾಖಲೆಗಳನ್ನು ಈಗಾಗಲೇ ನಾನಾ ಹಂತಗಳಲ್ಲಿ ನಗರ ಪಾಲಿಕೆಗೆ ಒಪ್ಪಿಸಲಾಗಿದೆ. ಹೀಗಾಗಿ ಎಲ್ಲವೂ ಅಲ್ಲಿಯೇ ಸಿಗುತ್ತವೆ. ಅಲ್ಲಿರುವ ವಿಭಾಗಗಳಿಂದ ಪಡೆಯಬಹುದಾಗಿದೆ. ಅನೇಕ ಮನೆಗಳಲ್ಲಿ ಮಾಲೀಕರು ವಯಸ್ಸಾಗಿದ್ದು, ಅವನ್ನು ಕಾಪಿ ಮಾಡಿಸುವ ಸಲುವಾಗಿ ಓಡಾಡಲು ಆಗುವುದಿಲ್ಲ. ಕೆಲವರ ಬಳಿ ಕಳೆದುಹೋಗಿರುತ್ತವೆ. ಒಂದು ಸಿಕ್ಕಿದರೆ ಒಂದು ಸಿಗುವುದಿಲ್ಲ. ಅನೇಕರಿಗೆ ಹೇಗೆ ಭರ್ತಿ ಮಾಡುವುದು ಗೊತ್ತಿಲ್ಲ. ಹೀಗೆ ತೊಂದರೆಗಳಿವೆ. ಅಲ್ಲದೇ ಮಾಲೀಕರೇ ಪಾಲಿಕೆ ಕಚೇರಿಗೆ ಹೋಗಿ ಒಪ್ಪಿಸಬೇಕಂತೆ. ಹೀಗಾಗಿ ಅಂಕಿ ಅಂಶಗಳು ಪಾಲಿಕೆಯಲ್ಲೇ ಸಿಗುವಂತೆ ಇರುವಾಗ ಮಾಲೀಕರಿಗೆ ತೊಂದರೆ ಕೊಡುವುದು ಸಾಧುವಲ್ಲ. ಈ ಯೋಜನೆಯನ್ನು ಜಾರಿಗೆ ತರಲು ಮಾಲೀಕರನ್ನು ಆಶ್ರಯ ಮಾಡಬಾರದಾಗಿ ಮನವಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ಗ್ಯಾರಂಟಿಗಳಿಗೆ ಹಣ ಚೆಲ್ಲಿ ಕೈ ಬರಿದು ಮಾಡಿಕೊಂಡಿರುವ ಸಿದ್ದು ಸರ್ಕಾರ

ಮಾನ್ಯರೆ,

ಚೀಪ್ ಪಾಪ್ಯುಲಾರಿಟಿಯ ಆಸೆಯಿಂದ ಸರ್ಕಾರದ ಯೋಜನೆಯಾದ 'ಗ್ಯಾರಂಟಿ ಯೋಜನೆ'ಗೆ ಜನರ ಹಣವನ್ನು ಯದ್ವಾ–ತದ್ವಾ ನೀರಿನಂತೆ ಖರ್ಚು ಮಾಡಿ ಜನರಿಂದ ಶಹಬ್ಬಾಸ್‌ಗಿರಿ ಪಡೆಯಲು ಯೋಚಿಸಿತ್ತು ಸಿದ್ದು ಸರ್ಕಾರ. ಆದರೆ ಜನರ ಹಣವನ್ನು ನೀರಿನಂತೆ ಖರ್ಚು ಮಾಡಿ ತನ್ನ ಕೈ ಬರಿದು ಮಾಡಿಕೊಂಡು ಕೂತಿದೆಯಲ್ಲದೇ ಈಗ ಹಣಕ್ಕಾಗಿ ಕೇಂದ್ರದತ್ತ 'ಕೈ' ಚಾಚಿದೆ. ಈ ಯೋಜನೆಯನ್ನು ಘೋಷಣೆ ಮಾಡುವ ಮೊದಲು ಕೇಂದ್ರ ಸರ್ಕಾರದಿಂದ ಅನುಮತಿ ಪಡೆದಿತ್ತೆ ಎಂಬುದು ಜನಸಾಮಾನ್ಯರ ಪ್ರಶ್ನೆ. ಕೋತಿಯು ಮೊಸರು ತಿಂದು ಮೇಕೆ ಬಾಯಿಗೆ ಒರೆಸಿದ ಹಾಗಾಗಿದೆ ರಾಜ್ಯದ ಪರಿಸ್ಥಿತಿ. ಗ್ಯಾರಂಟಿ ಯೋಜನೆ ಜಾರಿ ಮಾಡಿ ಎಂದು ಯಾರಾದರೂ ಸರ್ಕಾರವನ್ನು ಕೇಳಿದ್ದರೇ? ಇಂತಹ ಪ್ರಯೋಜನಕ್ಕೆ ಬಾರದ ಆರ್ಥಿಕ ಯೋಜನೆಗಳನ್ನು ಜಾರಿಮಾಡಲು ಸಿದ್ಧರಾಮಯ್ಯ ಅವರಿಗೆ ಯಾರು ಕೇಳಿದ್ದರು?

ಹಲವಾರು ಶಾಸಕರು ಈ ಗ್ಯಾರಂಟಿ ಯೋಜನೆಯನ್ನು ಟೀಕಿಸುತ್ತಿದ್ದಾರೆ. ತನ್ನ ಹೈಕಮಾಂಡ್‌ನಿಂದ ತನ್ನ ಕಾರ್ಯವೈಖರಿಯ ಬಗ್ಗೆ ಬೆನ್ನು ತಟ್ಟಿಸಿಕೊಳ್ಳಲು ಹೋಗಿ ಈಗ ನಗೆಪಾಟಲಿಗೆ ಈಡಾಗಿದ್ದಾರೆ. ಇಂತಹ ಯೋಜನೆಗಳಿಗೆ ಬೇಕಾದರೆ ಅವರ ಸ್ವಂತ ಹಣ ಉಪಯೋಗಿಸಲಿ. –ಬೇಲೂರು ದ.ಶಂ. ಪ್ರಕಾಶ್, ಮೈಸೂರು

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ತೈತ್ತಿರೀಯೋಪನಿಷತ್ತಿನಲ್ಲಿ ಶಿಷ್ಯೋಪದೇಶ

ತೈತ್ತಿರೀಯೋಪನಿಷತ್ತಿನ ಮೊದಲನೆಯ ಅಧ್ಯಾಯವಾಗಿರುವ ಶಿಕ್ಷಾವಲ್ಲಿಯಲ್ಲಿ ಶಿಕ್ಷಣಕ್ಕೆ ಪ್ರಾಧಾನ್ಯ. ಶಿಕ್ಷಾ ಎಂದರೆ ಶಿಕ್ಷಣವೇ ವಿವಕ್ಷಿತ. ಇದರಲ್ಲಿ ಹನ್ನೆರಡು ಅನುವಾಕಗಳಿವೆ. ಮೊದಲನೆಯ ಮತ್ತು ಹನ್ನೆರಡನೆಯ ಅನುವಾಕಗಳು ಶಾಂತಿ ಮಂತ್ರಗಳು. ಒಂಭತ್ತನೆಯ ಅನುವಾಕದಲ್ಲಿ ಋತ, ಸ್ವಾಧ್ಯಾಯ, ಪ್ರವಚನ, ಸತ್ಯ, ತಪಸ್ಸು, ದಮ, ಶಮ, ಅಗ್ನಿ ಹೋತ್ರ, ಅತಿಥಿ ಸತ್ಕಾರ, ಮನುಷ್ಯ ಸೇವೆ, ವಂಶಾಭಿವೃದ್ಧಿ–ಇವುಗಳ ಮಹತ್ವವನ್ನು ಹೇಳಿದ್ದಾರೆ. ಸತ್ಯವೊಂದೇ ಸಾಕು, ಅದೇ ಸಕಲವನ್ನೂ ಸಾಧಿಸುತ್ತದೆ ಎಂದು ರಾಥೀತರ ಎಂಬ ಋಷಿಯ ಸಿದ್ಧಾಂತ. ತಪಸ್ಸೊಂದೇ ಮುಖ್ಯ. ಅದರಿಂದಲೇ ಸಕಲಾರ್ಥ ಸಿದ್ಧಿ ಎಂದು ಸದಾ ತಪಸ್ಸಿನಲ್ಲಿ ನಿರತನಾಗಿದ್ದ ಪೌರು ಶಿಷ್ಟಿಯ ಮತ. ಅಧ್ಯಯನ ಮತ್ತು ಪ್ರವಚನ ಪ್ರಧಾನವಾದುವು ಎಂದು ಮೌದ್ಗಲ್ಯ ನಾಕನ ಅಭಿಪ್ರಾಯ. ಸರಿಯಾದ ಅಧ್ಯಯನ ಮತ್ತು ಪ್ರವಚನವೇ ತಪಸ್ಸು ಎಂದು ಅವನು ಹೇಳುತ್ತಾನೆ.

ಹತ್ತನೆಯ ಅನುವಾಕ ಚಿಕ್ಕದು. ಇದರಲ್ಲಿ ಸಮಸ್ತ ಲೋಕದ ಬದುಕನ್ನು ವೃಕ್ಷಕ್ಕೆ ಹೋಲಿಸಿದ್ದಾರೆ. ಅದಕ್ಕೆ ಪ್ರೇರಕನಾಗಿರುವವನು ಅಂತರ್ಯಾಮಿಯಾದ ಪರಮಾತ್ಮ. ಆ ಪರಮಾತ್ಮನ ಮಹಿಮೆ ಜಗತ್ತನ್ನು ತುಂಬಿದೆ. ಬೆಟ್ಟದ ತಪ್ಪಲಿನಂತೆ ವಿಶಾಲವಾಗಿದೆ. ಆತ್ಮನು ಊರ್ಧ್ವಮುಖಿ ಚಿಂತನೆಯಿಂದ ಅಮೃತತ್ವವನ್ನು ಪಡೆಯಬೇಕು. ಸುಮೇಧಾ ಆಗಿರುವ ನನಗೆ ಮರಣವಿಲ್ಲ. ಇದು ತ್ರಿಶಂಕುವಿನ ವೇದಾನುವಚನ ಎಂದು ಇದರಲ್ಲಿ ಹೇಳಿದೆ.

ಹನ್ನೊಂದನೆಯ ಅನುವಾಕ ಅತ್ಯಂತ ಮುಖ್ಯವಾದುದು. ವೇದಪಾಠ ಸಂಪೂರ್ಣವಾದ ಮೇಲೆ ಶಿಷ್ಯನು ಗೃಹಸ್ಥನಾಗಲು ಅರ್ಹನಾಗಿದ್ದಾನೆ. ಅವನನ್ನು ಕುರಿತು ಗುರು ಮಾಡುವ ಉಪದೇಶವು ಇಲ್ಲಿದೆ. ಇದು ಸಾರ್ವಕಾಲಿಕ, ಸಾರ್ವದೇಶಿಕ ಉಪದೇಶವೆಂದು ಹೇಳಬಹುದು. ಆ ಉಪದೇಶ ಹೀಗಿದೆ:–

ಸತ್ಯಂ ವದ: ಸತ್ಯವನ್ನೇ ಹೇಳು. ಸತ್ಯವೆಂಬುದು ಅತ್ಯುನ್ನತ ಮೌಲ್ಯ. ಅದರ ಆಧಾರದಿಂದಲೇ ಉಳಿದುದೆಲ್ಲವೂ ಮೌಲ್ಯಯುತವಾಗುತ್ತದೆ.

ಧರ್ಮಂ ಚರ: ಧರ್ಮವನ್ನೇ ಪಾಲಿಸು. ಅಧರ್ಮವು ಎಷ್ಟು ಆಕರ್ಷಕವಾಗಿ ಕಾಣಿಸಿದರೂ ಅದನ್ನು ಆಶ್ರಯಿಸಬೇಡ.

ಸ್ವಾಧ್ಯಾಯಾನ್ಮಾ ಪ್ರಮದಃ: ನಿನ್ನ ಅಧ್ಯಯನದಲ್ಲಿ ಎಂದೂ ಪ್ರಮಾದ ಮಾಡಬೇಡ. ಪ್ರಮಾದ ಎಂದರೆ ಅನವಧಾನ. ಗುರುವು ಹೇಳಿದ್ದನ್ನು ಕೇಳದೆ ಮನಸ್ಸನ್ನು ಎಲ್ಲೋ ತಿರುಗಿಸಿದ್ದರೆ ಅದು ಪ್ರಮಾದ. ವ್ಯಕ್ತಿಯು ಕೊನೆಯವರೆಗೂ ಎಚ್ಚರಿಕೆಯಿಂದ ಏಕಾಗ್ರತೆಯಿಂದ ಅಧ್ಯಯನವನ್ನು ಮಾಡುತ್ತಿರಬೇಕು. ತಾನೇ ಆಚಾರ್ಯನಾದರೂ ವಿದ್ಯಾರ್ಥಿತ್ವವನ್ನು ಬಿಡಬಾರದು.

ಆಚಾರ್ಯಾಯ ಪ್ರಿಯಂ ಧನ ಮಾಹೃತ್ಯ ಪ್ರಜಾ ತಂತುಂ ಮಾ ವ್ಯವಚ್ಛೇ ತ್ಸೀಃ। ಗುರುವಿಗೆ ಇಷ್ಟವಾದುದನ್ನು ದಕ್ಷಿಣೆಯಾಗಿ ಸಲ್ಲಿಸು. ಗೃಹಸ್ಥನಾಗಿ ನಿನ್ನ ವಂಶದ ಅಭಿವೃದ್ಧಿಯನ್ನು ಮಾಡು. ಸಂತತಿ ವಿಚ್ಛಿನ್ನವಾಗುವಂತೆ ಮಾಡಬೇಡ.

ಸತ್ಯಾನ್ನ ಪ್ರಮದಿತವ್ಯಮ್। ಜೀವನದಲ್ಲಿ ಸತ್ಯದ ಬಗೆಗೆ ಪ್ರಮಾದವನ್ನು ಮಾಡಬಾರದು.

ಧರ್ಮಾನ್ನ ಪ್ರಮದಿತವ್ಯಮ್। ಧರ್ಮದ ಬಗೆಗೆ ಉಪೇಕ್ಷೆ ಮಾಡಬಾರದು.

ಕುಶಲಾನ್ನ ಪ್ರಮದಿತವ್ಯಮ್। ಎಲ್ಲರ ಒಳಿತನ್ನು ಸಾಧಿಸುವುದರಲ್ಲಿ ಪ್ರಮಾದವನ್ನೆಸಗಬೇಡ.

ಭೂತ್ಯೈ ನ ಪ್ರಮದಿತವ್ಯಮ್। ಐಶ್ವರ್ಯವು ಬರುವಾಗ ಎಚ್ಚರಿಕೆಯಿಲ್ಲದೆ ಇರುವುದು ಬೇಡ.

ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್। ಕಲಿಯುವುದರಲ್ಲೂ ಕಲಿಸಿಕೊಡುವುದರಲ್ಲೂ ಅಜಾಗರೂಕತೆ ಬೇಡ.

ದೇವಪಿತೃ ಕಾರ್ಯಾಭ್ಯಾಂ ನ ಪ್ರಮದಿತವ್ಯಮ್। ದೇವಕಾರ್ಯಗಳಲ್ಲಿ ಪಿತೃ ಕಾರ್ಯಗಳಲ್ಲಿ ಪ್ರಮಾದ ಮಾಡಬೇಡ.

ಮಾತೃ ದೇವೋ ಭವ। ತಾಯಿಯನ್ನು ದೇವರೆಂದು ಪರಿಗಣಿಸು.

ಪಿತೃ ದೇವೋ ಭವ। ತಂದೆಯನ್ನೂ ದೇವರೆಂದು ತಿಳಿದುಕೊ.

ಆಚಾರ್ಯ ದೇವೋ ಭವ। ಗುರುವನ್ನು ದೇವರೆಂದು ಭಾವಿಸು.

ಅತಿಥಿ ದೇವೋ ಭವ। ಅತಿಥಿಗಳನ್ನು ದೇವರೆಂದು ಸೇವಿಸು.

ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾ ನಿ, ನೋ ಇತರಾಣಿ। ಯಾವ ಕೆಲಸಗಳು ನಿರ್ದೋಷವೋ ಅವುಗಳನ್ನು ಮಾತ್ರ ಮಾಡು, ಬೇರೆಯವನ್ನು ಮಾಡಬೇಡ.

ಯಾನ್ಯಸ್ಮಾಕಂ ಸುಚರಿತಾನಿ। ತಾನಿ ತ್ವಯೋಪಾಸ್ಯಾನಿ, ನೋ ಇತರಾಣಿ। ನಮ್ಮ ಯಾವ ಒಳ್ಳೆಯ ನಡತೆಗಳಿವೆಯೋ ಅವನ್ನು ನೀನು ಅನುಸರಿಸು. ನಾವು ತಪ್ಪಾದುದನ್ನೇನಾದರೂ ಮಾಡುತ್ತಿದ್ದರೆ ಅದನ್ನು ನೀನು ಮಾಡುವುದು ಬೇಡ.

ಯೆ ಕೇ ಚಾ ಸ್ಮಚ್ಛ್ರೇಯಾಗ್ಂಸೋ ಬ್ರಾಹ್ಮಣಾಃ। ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಮ್। ನಮಗಿಂತಲೂ ಹೆಚ್ಚಾದ ಬ್ರಹ್ಮಜ್ಞಾನಿಗಳು ಕಂಡರೆ ಅವರಿಗೆ ನೀನು ಉನ್ನತವಾದ ಆಸನವನ್ನು ಕೊಟ್ಟು ಗೌರವಿಸತಕ್ಕದ್ದು.

ಶ್ರದ್ಧಯಾ ದೇಯಮ್। ದಾನವನ್ನು ಕೊಡುವಾಗ ಶ್ರದ್ಧೆಯಿಂದ ಕೊಡಬೇಕು.

ಅಶ್ರದ್ಧಯಾ ಅದೇಯಮ್। ಶ್ರದ್ಧೆಯಿಲ್ಲದೆ ಕೊಡುವುದು ಬೇಡ.

ಶ್ರಿಯಾ ದೇಯಮ್। ಹ್ರಿಯಾ ದೇಯಮ್। ಭಿಯಾ ದೇಯಮ್। ಸಂವಿದಾ ದೇಯಮ್। ನಿನ್ನ ಸಂಪತ್ತಿಗೆ ಅನುಗುಣವಾಗಿ ಕೊಡಬೇಕು. ನನಗೆ ಇಷ್ಟು ಮಾತ್ರ ಕೊಡುವುದಕ್ಕಾಗಿದೆ ಎಂದು ನಾಚಿಕೆಪಟ್ಟುಕೊಂಡು ಕೊಡಬೇಕು. ನಾನು ಕೊಟ್ಟದ್ದು ಸ್ವೀಕೃತವಾಗುವುದೋ ಇಲ್ಲವೋ ಎಂದು ಭಯಪಟ್ಟು ಕೊಡಬೇಕು. ಆತ್ಮಸಾಕ್ಷಿಗೆ ಅನುಗುಣವಾಗಿ ಕೊಡಬೇಕು.

ಅಥ ಯದಿ ತೇ ಕರ್ಮ ವಿಚಿಕಿತ್ಸಾ ವಾ ವೃತ್ತ ವಿಚಿಕಿತ್ಸಾ ವಾ ಸ್ಯಾತ್ ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ ಯುಕ್ತಾ ಅಯುಕ್ತಾಃ। ಅಲೂಕ್ಷಾ ಧರ್ಮ ಕಾಮಾಃ ಸ್ಯುಃ। ಯಥಾ ತೇ ತತ್ರ ವರ್ತೇರನ್। ತಥಾ ತತ್ರ ವರ್ತೇಥಾಃ। ಯಾವ ಕೆಲಸವನ್ನು ಹೇಗೆ ಎಲ್ಲಿ ಮಾಡಬೇಕು ಎಂದು ನಿನಗೆ ಕರ್ಮ ವಿಷಯದಲ್ಲಿ, ಅಥವಾ ಯಾವುದು ಸರಿ, ಯಾವುದು ತಪ್ಪು ಎಂದು ನಡತೆಯ ವಿಷಯದಲ್ಲಿ ಸಂಶಯ ಹುಟ್ಟಿದರೆ ಅಲ್ಲಿರುವ ವಿಮರ್ಶನ ಬುದ್ಧಿಯುಳ್ಳ, ಧರ್ಮಾಧರ್ಮಗಳನ್ನು ತಿಳಿದ, ಕ್ರೂರರಲ್ಲದ, ಧರ್ಮವನ್ನು ಮಾತ್ರ ಅಪೇಕ್ಷಿಸುವ ಬ್ರಹ್ಮಜ್ಞಾನಿಗಳು ಹೇಗೆ ನಡೆದುಕೊಳ್ಳುವರೋ ಹಾಗೆ ನೀನೂ ನಡೆದುಕೊಳ್ಳತಕ್ಕದ್ದು.

ಅಥಾಭ್ಯಾಖ್ಯಾತೇಷು। ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ। ಯುಕ್ತಾ ಅಯುಕ್ತಾಃ। ಅಲೂಕ್ಷಾ ಧರ್ಮ ಕಾಮಾಃ ಸ್ಯುಃ। ಯಥಾ ತೇ ತತ್ರ ವರ್ತೇರನ್। ತಥಾ ತೇಷು ವರ್ತೇಥಾಃ। ಇನ್ನು ಆಪಾದನೆಗೊಳಗಾದವರ ವಿಷಯದಲ್ಲೂ ಅಲ್ಲಿರುವ ವಿಮರ್ಶನಶೀಲರಾದ, ಧರ್ಮಾಧರ್ಮಗಳನ್ನು ತಿಳಿದ, ಕ್ರೂರರಲ್ಲದ ಧರ್ಮವನ್ನು ಮಾತ್ರ ಅಪೇಕ್ಷಿಸುವ ಬ್ರಹ್ಮಜ್ಞಾನಿಗಳು ಹೇಗೆ ನಡೆದುಕೊಳ್ಳುವರೋ ಹಾಗೆ ನೀನೂ ನಡೆದುಕೊಳ್ಳತಕ್ಕದ್ದು.

ಏಷ ಆದೇಶಃ। ಏಷ ಉಪದೇಶಃ। ಏಷಾ ವೇದೋಪನಿಷತ್। ಇದೇ ನನ್ನ ಆದೇಶ. ಇದೇ ನಿನಗೆ ಉಪದೇಶ. ಇದೇ ವೇದಗಳ ರಹಸ್ಯ.

ಈ ಉಪದೇಶದಲ್ಲಿರುವ ಒಂದೊಂದು ವಾಕ್ಯವೂ ಅರ್ಥವತ್ತಾಗಿದೆ. **ಸತ್ಯಂ ವದ** ಎಂಬ ವಾಕ್ಯವನ್ನೊಂದನ್ನು ಎಲ್ಲರೂ ಅನುಸರಿಸಿದರೆ ಸಾಕು. ಈ ಲೋಕ ನಂದನವನವಾಗುತ್ತದೆ. **ಸ್ವಾಧ್ಯಾಯಾ ನ್ಮಾ ಪ್ರಮದಃ** ಎಂಬ ವಾಕ್ಯವನ್ನು ಎಲ್ಲ ಶಿಕ್ಷಕರೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಉಪಾಧ್ಯಾಯನು ಕೊನೆಯವರೆಗೂ ತಾನೂ ವಿದ್ಯಾರ್ಥಿಯಾಗಿರಬೇಕು. ಕಲಿಕೆಗೆ ಕೊನೆಯೆಂಬುದಿಲ್ಲ. ಗುರುವಿಗೆ ತನ್ನ ಕೈಯಲ್ಲಾದ ಗುರುದಕ್ಷಿಣೆಯನ್ನು ಕೊಡುವುದು ಶಿಷ್ಯನ ಕರ್ತವ್ಯ. **ಪ್ರಜಾ ತಂತುಂ ಮಾ ವ್ಯವಚ್ಛೇತ್ಸೀಃ** ಎಂದರೆ ವಂಶವೂ ಸಂತಾನವೂ ಛಿನ್ನವಾಗುವಂತೆ ಮಾಡಬೇಡ ಎಂದು ಅರ್ಥ. **ಮಾತೃದೇವೋ ಭವ, ಪಿತೃದೇವೋ ಭವ** ಎಂಬ ಮಾತು ಇಂದು ಅತ್ಯಂತ ಪ್ರಸ್ತುತ. ವೃದ್ಧರಾದ ತಂದೆ–ತಾಯಿಗಳನ್ನು ಹೊರೆಯೆಂದು ಭಾವಿಸುವ ಮಕ್ಕಳು ಈ ವಾಕ್ಯಗಳ ಅನುಸಂಧಾನ ಮಾಡಬೇಕು. ಅಂತೆಯೇ **ಆಚಾರ್ಯ ದೇವೋ ಭವ, ಅತಿಥಿ ದೇವೋ ಭವ** ಎಂಬ ವಾಕ್ಯಗಳೂ ನಿತ್ಯ ಸ್ಮರಣೆಗೆ ಅರ್ಹವಾದ ವಾಕ್ಯಗಳು.

ಪ್ರತ್ಯಕ್ಷಂ ದೈವಮುತ್ಸೃಜ್ಯ ಪಿತರಂ ಮಾತರಂ ಗುರುಮ್।
ಅಪ್ರತ್ಯಕ್ಷಂ ಕಥಂ ದೈವಂ ಪ್ರಾಕಾರೈ ರಭಿರಾಧ್ಯತೇ ॥

ಎಂಬ ಸುಭಾಷಿತವು ಇದನ್ನೇ ಹೇಳಿದೆ. ತಾಯಿ, ತಂದೆ, ಗುರು ಎಂಬುವರೇ ಪ್ರತ್ಯಕ್ಷ ದೇವರು. ಅವರನ್ನು ಬಿಟ್ಟು ಕಣ್ಣಿಗೆ ಕಾಣದ ಯಾವುದೋ ದೇವತೆಗೆ ಪ್ರಾಕಾರ ಕಟ್ಟಿಸಿದರೆ ಪ್ರಯೋಜನವೇನು? ಅತಿಥಿಯನ್ನು ದೇವರೆಂದು ಭಾವಿಸಿ ಸತ್ಕರಿಸುವುದು ಭಾರತ ದೇಶದ ಸಂಸ್ಕೃತಿಯ ಹೆಗ್ಗುರುತು.

ಈ ಉಪದೇಶದಲ್ಲಿರುವ ವಿಶೇಷವೇನೆಂದರೆ ಗುರು ಶಿಷ್ಯನಿಗೆ 'ನಾನು ಮಾಡಿದ್ದನ್ನೆಲ್ಲ ಮಾಡು' ಎಂದು ಹೇಳುತ್ತಿಲ್ಲ. ನನ್ನ ನಡವಳಿಕೆಯಲ್ಲಿ ಏನು ಒಳ್ಳೆಯದಿದೆಯೋ ಅದನ್ನು ಮಾತ್ರ ಮಾಡು. ಬೇರೆಯದು ನನ್ನಲ್ಲಿ ಇದ್ದರೂ ನೀನು ಅದನ್ನು ಅನುಸರಿಸುವುದು ಬೇಡ – ಎಂದು ಹೇಳಿರುವುದು. ಈ ಪ್ರಾಮಾಣಿಕತೆ ಅತ್ಯಪೂರ್ವ.

ಅನೇಕ ಸಂದರ್ಭಗಳಲ್ಲಿ ಯಾವುದು ಧರ್ಮ, ಯಾವುದು ಅಧರ್ಮ ಎಂಬ ಸಂಶಯ ಬರಬಹುದು. ಆಗ ಆಲೋಚನಾಪರರಾದ ಜ್ಞಾನಿಗಳು ಹೇಗೆ ನಡೆದುಕೊಳ್ಳುವರೋ ಹಾಗೆ ನೀನೂ ನಡೆದುಕೊಳ್ಳತಕ್ಕದ್ದು ಎಂಬ ಉಪದೇಶವೂ ಅಮೂಲ್ಯವಾಗಿದೆ. ಅಂತಹ ಜ್ಞಾನಿಗಳು ದೊರಕಿದರೆ ಸಂಶಯ ಪರಿಹಾರವಾಗುವುದು. ಆರೋಪಕ್ಕೆ ಗುರಿಯಾದವರ ವಿಷಯದಲ್ಲೂ ಮನಸ್ಸಿಗೆ ಬಂದಂತೆ ಮಾತನಾಡಬಾರದು. ವ್ಯವಹರಿಸಬಾರದು. ಕ್ರೂರ ರಲ್ಲದ, ಧರ್ಮ ದೃಷ್ಟಿಯನ್ನುಳ್ಳ ಜ್ಞಾನಿಗಳು ಆ ಸನ್ನಿವೇಶದಲ್ಲಿ ಹೇಗೆ ನಡೆದುಕೊಳ್ಳುವರೋ ಹಾಗೆ ನೀನೂ ನಡೆದುಕೊಳ್ಳಬೇಕು ಎಂದು ಗುರು ಶಿಷ್ಯನಿಗೆ ಉಪದೇಶಿಸಿರುವುದು ಅತ್ಯಂತ ಸೂಕ್ತವಾಗಿದೆ. ಹೀಗೆ ತೈತ್ತಿರೀಯೋಪನಿಷತ್ತು ಆಧ್ಯಾತ್ಮಿಕ ಬದುಕಿನ ದಾರಿದೀಪವಾಗಿದೆ.

ಪ್ರತಿಭಾವಂತ ನಾಟ್ಯ ಪ್ರತಿಭೆ ಕು. ನಿನಾದ ಎಸ್.ಹೆಗ್ಡೆ

ಭಾನುವಾರ ಮೈಸೂರಲ್ಲಿ ರಂಗ ಪ್ರವೇಶ





ಭರತ ವರ್ಷದ ಮೂಲ ನೆಲೆಯಲ್ಲಿಯೇ ನಾಟ್ಯಶಾಸ್ತ್ರದ ಸೆಲೆಯಿದೆ. ಈ ಪುಣ್ಯ ಭೂಮಿಯ ಪ್ರತಿ ಕಣ–ಕಣದಲ್ಲಿಯೂ ಕಾವ್ಯ, ನಾಟಕ, ನೃತ್ಯ, ಸಂಗೀತಗಳ ಅನುಕರಣವಿದೆ. ಕೇವಲ ನೂರು ಸಾವಿರವಲ್ಲ, ಸಾವಿರ–ಸಾವಿರ ವರ್ಷಗಳ ಭರತನಾಟ್ಯದ ನಡಿಗೆಗೆ ಹನ್ನೊಂದರ ಈ ಪುಟ್ಟ ಬಾಲೆಯು ಹೆಜ್ಜೆ ಜೋಡಿಸುತ್ತಿದ್ದಾಳೆ. ನದಿ–ಸಾಗರ ಸೇರುವ ಸಣ್ಣ ತೊರೆಯಂತೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಂಸ್ಕೃತಿ ಸಂಕಥನದ ಭಾಗವಾಗುತ್ತಿದ್ದಾಳೆ. ಸಂಸ್ಕಾರ ವೆಂಬುದು ಹುಟ್ಟಿನಿಂದಲೇ ಜೊತೆ ಗೂಡುತ್ತದೆಂಬುದಕ್ಕೆ ನಿನಾದಳೇ ಸಾಕ್ಷಿ. ಸಿರಿ ಸೌಂದರ್ಯದ ನೆಲೆವೀಡಾದ ಮಲೆನಾಡು ಮೂಲದ ಈ ಎಳೆ ಪ್ರತಿಭೆಗೆ ವಿದ್ಯೆ–ಸಂಗೀತ ನಾಟ್ಯಗಳ ಅಧಿದೇವತೆ, ಕನ್ನಡಿಗರ ಕುಲ ದೇವತೆ ಶೃಂಗೇರಿಯ ತಾಯಿ ಶಾರದಾಂ ಬೆಯ ಕೃಪಾಶೀರ್ವಾದವಿದೆ. ಸದ್ಗೃಹಿಣಿ ಶ್ರೀಮತಿ ಕೆ.ದೀಪ್ತಿ ಹಾಗೂ ಪೊಲೀಸ್ ಇಲಾಖೆ ಹಿರಿಯ ಅಧಿಕಾರಿ ಎಸ್.ಎಸ್.ಸಂದೇಶ್‌ಕುಮಾರ್ ಅವರ ಎರಡನೆ ಪುತ್ರಿಯೇ ಈ ನಿನಾದ. ಮೈಸೂರಿನ ಆಚಾರ್ಯ ವಿದ್ಯಾಕುಲ ಶಾಲೆಯಲ್ಲಿ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಬಾಲ್ಯದಿಂದಲೂ ಬಲು ಚೂಟಿಯ ಇವಳು ಕ್ರೀಡೆ, ಯೋಗದೊಂದಿಗೆ ಎಳವೆಯಿಂದಲೇ ಸಂಗೀತ ಹಾಗೂ ನೃತ್ಯಾಭ್ಯಾಸದಲ್ಲೂ ತೀವ್ರಾಸಕ್ತಿ. ಹಿರಿಯ ಮಗಳು ಲಕ್ಷ್ಯ ಎಸ್ ಹೆಗಡೆ ಶಾಸ್ತ್ರೀಯ ಸಂಗೀತಾಭ್ಯಾಸಿ. ಶಾಸ್ತ್ರೀಯ ಸಂಗೀತದ ಜತಿ–ಸ್ವರಗಳ ಕಲಿಕೆಯೊಂದಿಗೆ ಭರತ ನಾಟ್ಯದ ಭಾವ–ಭಂಗಿ, ಮುದ್ರೆಗಳನ್ನು ಅರ್ಥೈಸಿ ಕೊಂಡು, ಗುರುಗಳ ಮುದ್ದಿನ ಶಿಷ್ಯೆಯಾಗಿ, ಈಗ ರಂಗಪ್ರವೇಶಕ್ಕೆ ಅಣಿಯಾಗಿರುವ ನಿನಾದ, ನಿಜಕ್ಕೂ ಭವಿಷ್ಯದ ಭರವಸೆ. ಅರಮನೆಗಳ ನಗರಿ ಮೈಸೂರಿನ ಸುಪ್ರಸಿದ್ಧ ನಾಟ್ಯ ಗುರು, ವಿದುಷಿ ಶ್ರೀಮತಿ **ಎಂ. ಪಂಕಜ ರಾಮಕೃಷ್ಣಯ್ಯ** ಅವರ ಬಳಿ ಭರತನಾಟ್ಯ ಅಭ್ಯಸಿ ಸುತ್ತಿರುವ ನಿನಾದ, ಈಗಾಗಲೇ ಮುಂಬಯಿಯ ಅಖಿಲ ಭಾರತೀಯ ಗಂಧರ್ವ ಮಹಾ ವಿದ್ಯಾಲಯ ಮಂಡಲದವರು 2018ರಲ್ಲಿ ನಡೆಸಿದ ಪ್ರಾರಂಭಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿ ಪ್ರತಿಭೆ ಮೆರೆದಿದ್ದಾಳೆ. 2019ರಲ್ಲಿ ನಡೆದ ಪ್ರವೇಶಿಕ ಪ್ರಥಮ್ ಪರೀಕ್ಷೆಯಲ್ಲಿಯೂ ಉನ್ನತ ಶ್ರೇಣಿಯ ಸಾಧನೆ ತೋರಿದ್ದಾಳೆ. ಇದರ ಜತೆಗೆ 2020ರ ಪ್ರವೇಶಿಕ ಪೂರ್ಣ ಪರೀಕ್ಷೆ ಹಾಗೂ 2021ರ ಮಧ್ಯಮ ಪ್ರಥಮ್ ಪರೀಕ್ಷೆಯಲ್ಲಿಯೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವ ಮೂಲಕ ತಾನೊಂದು ಭರವಸೆಯ ಮೊಳಕೆ ಎಂಬುದನ್ನು ಶ್ರುತಪಡಿಸಿದ್ದಾಳೆ. ಕೇವಲ ಐದರ ಪ್ರಾಯದಲ್ಲಿಯೇ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮುಂದೆ ನೃತ್ಯಸೇವೆ ಸಲ್ಲಿಸಿದ ಈ ಪುಟ್ಟ ಬಾಲೆ. ಭಾರತೀಯ ನೃತ್ಯ ಕಲಾ ಪರಿಷತ್ ನಡೆಸಿದ ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಸಂಸ್ಮರಣಾ ನೃತ್ಯೋತ್ಸವದಲ್ಲಿಯೂ ಶಹಬ್ಬಾಸ್‌ಗಿರಿ ಗಿಟ್ಟಿಸಿಕೊಂಡಿದ್ದಾಳೆ. ಮಾತ್ರವಲ್ಲ, ಜಗನ್ಮೋಹನ ಅರಮನೆಯಲ್ಲಿ ನಡೆಸಲಾದ ಶ್ರೀ ಸರ್ವೇಶ್ವರ ನೃತ್ಯಕಲಾ ಮಂದಿರದ ವಾರ್ಷಿಕೋತ್ಸವ ಹಾಗೂ ಒಕ್ಕಲಿಗ ಸೇವಾ ವೇದಿಕೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ, ಹಲವು ಜಾನಪದ ಹಾಗೂ ಭರತನಾಟ್ಯ ಕಾರ್ಯಕ್ರಮಗಳಲ್ಲಿಯೂ ತನ್ನ ನಾಟ್ಯ ಪ್ರತಿಭೆ ಮೆರೆದು ಸೈ ಎನಿಸಿಕೊಂಡಿದ್ದಾಳೆ. ಇದಿಷ್ಟೇ ಅಲ್ಲದೆ ವಿಶ್ವವಿಖ್ಯಾತ ದಸರೆಯ ಶ್ರೀರಂಗಪಟ್ಟಣದ ಕಾರ್ಯಕ್ರಮದಲ್ಲಿಯೂ ನೃತ್ಯ ಪ್ರದರ್ಶನ ನೀಡಿ, ಹಿರಿ–ಕಿರಿಯರ ಪ್ರಶಂಸೆಗೆ ಪಾತ್ರಳಾಗಿದ್ದಾಳೆ. ಪ್ರತಿಭೆ ಎಂಬುದು ಕೇವಲ ಒಂದು ಕುಟುಂಬ ಮತ್ತು ಒಂದು ಗುರುಕುಲ ಕ್ಕಷ್ಟೇ ಸೀಮಿತವಲ್ಲ. ಅದು ಸಮಾಜಕ್ಕೂ, ಹೆತ್ತವರಿಗೂ, ಹೆತ್ತೂರಿಗೂ ಸಲ್ಲಿಸುವ ಗೌರವಾಭಿನಂದನೆ. ಆ ಹಾದಿಯಲ್ಲೇ ನಿನಾದ ಸಾಗುತ್ತಿದ್ದಾಳೆ. ಸಾಂಸ್ಕೃತಿಕ ನಗರಿಯಲ್ಲಿ ಪ್ರತಿಭಾವಂತ ನೃತ್ಯಗಾರ್ತಿಯಾಗಿ ತಮ್ಮದೇ ಛಾಪು ಮೂಡಿಸಿರುವ ಶ್ರೀಮತಿ ಪಂಕಜ ಎಂ.ರಾಮಕೃಷ್ಣಯ್ಯನವರ ಗರಡಿಯಲ್ಲಿ ನಮ್ಮ ಈ ಬಾಲ ಪ್ರತಿಭೆಯು ಅರಳಿ ನಳ–ನಳಸುತ್ತಿದೆ. ರಂಗ ಪ್ರವೇಶದ ಮೂಲಕ ಕಂಗೊಳಿಸಲು ಅಣಿಗೊಳ್ಳುತ್ತಿದೆ. ಶ್ರೀಮತಿ ಎಂ.ಪಂಕಜ ರಾಮಕೃಷ್ಣಯ್ಯನವರು, ವಿದ್ವಾನ್ ಶ್ರೀ ಎಂ.ವಿಷ್ಣುದಾಸ್ ಅವರ ಪರಮ ಶಿಷ್ಯರು. ಅವರಿಂದಲೇ ಭಾರತೀಯ ನೃತ್ಯ ಕಲಾ ಪರಿಷತ್ ನೀಡುವ 'ನೃತ್ಯ ಕಲಾ ಸಿಂಧು' ಪ್ರಶಸ್ತಿ ಸ್ವೀಕರಿಸಿದವರು. ಇವರಿಗೆ ಕರ್ನಾಟಕ ರಾಜ್ಯ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ'ಯೂ (2014) ಸಂದಿದೆ. ಪಂಕಜ ರಾಮಕೃಷ್ಣಯ್ಯನವರು, ದಸರಾ ಉತ್ಸವ ಸಮಿತಿ, ಜವಾಹರ್ ಬಾಲಭವನ, ಮೈಸೂರು ಕಥಕ್ ಕೇಂದ್ರ, ದುರ್ಗಾ ಪರಮೇಶ್ವರಿ ನೃತ್ಯ ನಿಕೇತನ ಮಲೆ ಮಹದೇಶ್ವರ ಸಿಲ್ವರ್ ಜ್ಯೂಬಿಲಿ ಕಮಿಟಿಯಂತಹ ಅನೇಕಾನೇಕ ಸಂಘ–ಸಂಸ್ಥೆಗಳಿಂದ ಗೌರವಿಸಲ್ಪಟ್ಟಿದ್ದಾರೆ. ಮೈಸೂರು ನಗರದ ಶ್ರೀ ಸರ್ವೇಶ್ವರ ನೃತ್ಯ ಕಲಾಮಂದಿರದ ಸಂಸ್ಥಾಪಕ ಕಾರ್ಯದರ್ಶಿಗಳೂ ಆದ ಇವರು, ಪಂಕಜ ಪ್ರದರ್ಶಕ ಕಲೆಗಳ ಕೇಂದ್ರದ ಮುಖ್ಯಸ್ಥರೂ ಆಗಿದ್ದಾರೆ.



ಮೈಸೂರು,ಆ.17–ಮೈಸೂರಿನ ಶ್ರೀ ಸರ್ವೇಶ್ವರ ನೃತ್ಯ ಕಲಾಮಂದಿರ ಮತ್ತು ಪಂಕಜ ಪ್ರದರ್ಶಕ ಕಲೆಗಳ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಆ.20 (ಭಾನುವಾರ)ರಂದು ಸಂಜೆ 6 ಗಂಟೆಗೆ ನಾಟ್ಯ ವಿದುಷಿ ಶ್ರೀಮತಿ ಎಂ.ಪಂಕಜ ರಾಮಕೃಷ್ಣಯ್ಯನವರ ಶಿಷ್ಯೆ ಹಾಗೂ ಮೈಸೂರು ನಗರ ಅಪರಾಧ ದಳ(ಸಿಸಿಬಿ)ದ ಅಸಿಸ್ಟೆಂಟ್ ಕಮಿಷನರ್ ಆಫ್ ಪೊಲೀಸ್ (ಎಸಿಪಿ) ಎಸ್.ಎಸ್.ಸಂದೇಶ್ ಕುಮಾರ್ ಮತ್ತು ಶ್ರೀಮತಿ ಕೆ.ದೀಪ್ತಿ ದಂಪತಿ ಪುತ್ರಿ ಕು. ನಿನಾದ ಎಸ್.ಹೆಗ್ಡೆ ಅವರ ಭರತನಾಟ್ಯ ರಂಗ ಪ್ರವೇಶ ಕಾರ್ಯ ಕ್ರಮವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಜವಂಶಸ್ಥ ಶ್ರೀ ಯದು ವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ರಾಚಯ್ಯ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಆರಗ ಜ್ಞಾನೇಂದ್ರ, ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ, ಸಂಸದ ಪ್ರತಾಪ್ ಸಿಂಹ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಭಾಗವಹಿಸುವರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಜಾನಪದ ಕಲಾವಿದೆ ಡಾ.ಮಾತಾ ಬಿ.ಮಂಜಮ್ಮ ಜೋಗತಿ ಕಾರ್ಯಕ್ರಮ ಉದ್ಘಾಟಿಸುವರು. ಇದೇ ವೇಳೆ ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಚಂಬಿ ಪುರಾಣಿಕ್, ಧೀಮಹಿ ಸೆಂಟರ್ ಆಫ್ ಆರ್ಟ್ಸ್ ನಿರ್ದೇಶಕರಾದ ಡಾ.ಶ್ರೀಮತಿ ಸೀತಾ ಕೋಟೆ, ಬೆಂಗಳೂರಿನ ಲಹರಿ ಮ್ಯೂಸಿಕ್‌ನ ನಿರ್ದೇಶಕರಾದ ಲಹರಿ ವೇಲು ಅವರನ್ನು ಸನ್ಮಾನಿಸಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಉಪಸ್ಥಿತರಿರುವರು.



ಕು.ನಿನಾದ ಅವರೊಂದಿಗೆ ತಾಯಿ ಶ್ರೀಮತಿ ಕೆ.ದೀಪ್ತಿ ಹಾಗೂ ತಂದೆ ಪೊಲೀಸ್ ಇಲಾಖೆ ಹಿರಿಯ ಅಧಿಕಾರಿ ಎಸ್.ಎಸ್. ಸಂದೇಶ್‌ಕುಮಾರ್ ಮತ್ತು ಸಹೋದರಿ ಲಕ್ಷ್ಯ ಎಸ್ ಹೆಗಡೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ರೈಲು ನಿಲ್ದಾಣದಲ್ಲಿ ಸೆಲ್ಫಿ ಬೂತ್ ಉದ್ಘಾಟನೆ



ಮೈಸೂರು,ಆ.16(ಆರ್‌ಕೆ)– ವಾರ್ತಾ ಮತ್ತು ಪ್ರಚಾರ ಸಚಿವಾಲಯದ ಕೇಂದ್ರ ಸಂವಹನ ಇಲಾಖೆಯು ಮೈಸೂರಿನ ಪ್ರಧಾನ ರೈಲು ನಿಲ್ದಾಣದ 6ನೇ ಪ್ಲಾಟ್ ಫಾರಂ (ಸಿಎಫ್‌ಟಿಆರ್‌ಐ ಕಡೆಯ ದ್ವಾರ)ನಲ್ಲಿ ಸೆಲ್ಫಿ ಬೂತ್ ಅನ್ನು ಸ್ಥಾಪಿಸಲಾಗಿದೆ.

'ನವ ಭಾರತ–ಸ್ವಚ್ಛ ಭಾರತ' (New India-Clean India) ಎಂಬ ಪರಿಕಲ್ಪನೆಯಲ್ಲಿ ಆರಂಭಿಸಿರುವ ಸೆಲ್ಫಿ ಫೋಟೋ ಬೂತ್ ಅನ್ನು ಸಂಸದ ಪ್ರತಾಪ್ ಸಿಂಹ ಮಂಗಳವಾರ ಮಧ್ಯಾಹ್ನ ಉದ್ಘಾಟಿಸಿದ್ದು, ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ಸೀನಿಯರ್ ಡಿವಿಷನಲ್ ಕಮರ್ಷಿಯಲ್ ಮ್ಯಾನೇಜರ್ ಲೋಹಿತೇಶ್ವರ ಸೇರಿದಂತೆ ಹಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ಸಂದರ್ಭ ಪಾಲ್ಗೊಂಡಿದ್ದರು.

ರೈಲು ನಿಲ್ದಾಣದ ಪಶ್ಚಿಮ ದ್ವಾರದ ಟಿಕೆಟ್ ಕೌಂಟರ್ ಬಳಿಯಲ್ಲಿ ಸ್ಥಾಪಿಸಿರುವ ಫೋಟೋ ಬೂತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪೊರಕೆ ಹಿಡಿದು ಕಸ ಗುಡಿಸುತ್ತಿರುವ ಚಿತ್ರದ ಬಿಂಬ ಅಳವಡಿಸಲಾಗಿದ್ದು, ಮತ್ತೊಂದು ಬದಿಯಲ್ಲಿ ಸಾರ್ವಜನಿಕರು ಪೊರಕೆ ಪಕ್ಕದಲ್ಲಿ ನಿಂತು ಫೋಟೋ ಕ್ಲಿಕ್ಕಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಸ್ವಚ್ಛತೆ ಕಾಪಾಡುವ ಮೂಲಕ ನವ ಭಾರತ ನಿರ್ಮಾಣ ಮಾಡಬೇಕೆಂಬ ಸಂದೇಶ ಸಾರುವ ಈ ಸೆಲ್ಫಿ ಬೂತ್‌ನಲ್ಲಿ ಪ್ರಯಾಣಿಕರು ನಿಂತು ತಮ್ಮ ಮೊಬೈಲ್‌ಗಳಲ್ಲಿ ಫೋಟೋ ತೆಗೆದುಕೊಳ್ಳುತ್ತಿದ್ದಾರೆ.



ಮೈಸೂರಿನ ಶಕ್ತಿಧಾಮಕ್ಕೆ ಭೇಟಿ ನೀಡಿದ್ದ ಕನ್ನಡ ಚಿತ್ರರಂಗದ ಖ್ಯಾತ ನಾಯಕ ನಟ ಡಾ.ಶಿವರಾಜ್‌ಕುಮಾರ್ ಅವರನ್ನು ಅಂಬಾರಿ ಅಭ್ಯುದಯ ಪ್ರಾಜೆಕ್ಟ್ ವ್ಯವಸ್ಥಾಪಕ ನಿರ್ದೇಶಕ ಸ್ವೀಟ್ ಮಹೇಶ್, ನಿರ್ದೇಶಕ ಪ್ರದೀಪ್, ಸಂಸದ ಪ್ರತಾಪ್ ಸಿಂಹ ಹಾಗೂ ಮುಖಂಡ ಹರೀಶ್ ಅಭಿನಂದಿಸಿದರು.

ತ.ನಾಡಿಗೆ ಬಿಟ್ಟಿರುವ ನೀರು ನಿಲ್ಲಿಸಿ; 'ಸುಪ್ರೀಂ'ಗೆ ವಾಸ್ತವ ಸ್ಥಿತಿ ವಿವರಿಸಿ



ಬೆಂಗಳೂರು, ಆ. 16(ಕೆಎಂಶಿ)–ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ತಕ್ಷಣ ನಿಲ್ಲಿಸಿ, ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ವಾಸ್ತವ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಬೇಕು. ಈ ವಿಚಾರದಲ್ಲಿ ರಾಜ್ಯದ ರೈತರ ಹಿತ ಕಾಯಬೇಕು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ. ತಮಿಳುನಾಡು ಕುರುವೈ ಬೆಳೆಗೆ ಎರಡು ಪಟ್ಟು ನೀರು ಬಳಕೆ ಮಾಡಿದೆಯಲ್ಲದೆ, ನಾಲ್ಕು ಪಟ್ಟು ಕುರುವೈ ಬೆಳೆ ಕ್ಷೇತ್ರ ವಿಸ್ತರಿಸಿದೆ. ಕರ್ನಾಟಕ ಸರ್ಕಾರ ಇದನ್ನು ಸಿಡಬ್ಲ್ಯುಎಂಎದಲ್ಲಿ ಪ್ರತಿಭಟಿಸದೇ ಮತ್ತು ಅವರು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಹಾಕಿದ ತಕ್ಷಣ ನೀರು ಬಿಟ್ಟಿರುವುದು ಅಕ್ಷಮ್ಯ ಅಪರಾಧ ಎಂದು ತಿಳಿಸಿದ್ದಾರೆ.

ರಾಜ್ಯದ ರೈತರಿಗೆ ಈ ಮೊದಲು ನೀರು ಬಿಡದೇ ನಮ್ಮ ರಾಜ್ಯದ ರೈತರ ಪಾಲನ್ನು ಡ್ಯಾಂನಲ್ಲಿ ಸ್ಟೋರೇಜ್ ಮಾಡಿ, ರಾಜ್ಯದ ರೈತರಿಗೆ ನೀರು ಕೊಡುವ ತೀರ್ಮಾನ ವಿಳಂಬ ಮಾಡಿ ಈಗ ನಮ್ಮ ರೈತರ ಪಾಲಿನ ನೀರನ್ನು ತಮಿಳುನಾಡಿಗೆ ಹರಿಸುವ ಸ್ಥಿತಿ ನೀವು ತಂದೊಡ್ಡಿದ್ದೀರಿ ಎಂದು ಅವರು ಪ್ರಕಟಣೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಾವೇರಿ ನೀರನ್ನು ಬಿಡಲು ಸಾಧ್ಯವಿಲ್ಲ ಎಂಬ ಹೇಳಿಕೆ ಕೊಟ್ಟ ಮರುದಿನವೇ ಡಿಸಿಎಂ ನೇತೃತ್ವದಲ್ಲಿ ನೀರಾವರಿ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ತಮಿಳುನಾಡಿಗೆ ನೀರು ಬಿಡಲಾಗಿದೆ. ರಾಜ್ಯದಲ್ಲಿ ಕಾವೇರಿ ನೀರು ನಿರ್ವಹಣೆಯಲ್ಲಿ ಒಮ್ಮತ ಇಲ್ಲ ಹಾಗೂ ನಮ್ಮ ರಾಜ್ಯದ ನೀರಿನ ಪಾಲನ್ನು ರಕ್ಷಣೆ ಮಾಡುವಂತಹ ಛಲವೂ ಕಾಣಿಸುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಆ.31ರಂದು ಮೈಸೂರಿಗೆ ಶಿರಡಿಯ ಪ್ರಧಾನ ಅರ್ಚಕ ಸುಲಾಖೆ ಮಹಾರಾಜರು



ಮೈಸೂರು,ಆ.16–ಮಹಾರಾಷ್ಟ್ರದ ಶ್ರೀ ಶಿರಡಿ ಸಾಯಿ ಸಂಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಸುಲಾಖೆ ಮಹಾರಾಜ್ ಆ.31ರಂದು ಮೈಸೂರಿಗೆ ಆಗಮಿಸಲಿದ್ದಾರೆ. ಮೈಸೂರಿನ ರಾಮಕೃಷ್ಣನಗರದಲ್ಲಿರುವ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ ವತಿಯಿಂದ ಆ.31ರಂದು ನಡೆಯುವ ಶ್ರೀ ಶಿರಡಿ ಸಾಯಿ ಗುರುಸ್ಥಾನದ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಪಾಲ್ಗೊಳ್ಳುವರು. ಶ್ರೀ ಕ್ಷೇತ್ರ ಶಿರಡಿಯ ಗ್ರಾಮದೇವತೆ ಖಂಡೋಬಾ ಮಂದಿರ, ಮಾರುತಿ ಮಂದಿರ, ಚಾವಡಿ ಗುರುಸ್ಥಾನ ಹಾಗೂ ಬಾಬಾರವರ ಮಹಾ ಸಮಾಧಿ ಮಂದಿರದಲ್ಲಿ ಪೂಜಿಸಲ್ಪಟ್ಟ ಚರಣ ಪಾದುಕೆಗಳನ್ನು ರಾಮಕೃಷ್ಣನಗರದ ಬಾಬಾ ಮಂದಿರದ ನಿಂಬುವೃತ್ತದ ಬುಡದಲ್ಲಿ ಸುಲಾಖೆ ಮಹಾರಾಜರು ಪ್ರತಿಷ್ಠಾಪಿಸುವರು.

ಗ್ರಂಥಾಲಯದಲ್ಲಿ ತಾತ್ಕಾಲಿಕ ಪುಸ್ತಕ ಎರವಲು ಸೇವೆ



ಮೈಸೂರು,ಆ.16– ಬಸವೇಶ್ವರ ರಸ್ತೆ ಶಾಖಾ ಗ್ರಂಥಾಲಯದ ಕಟ್ಟಡದ ಕಾಮಗಾರಿಯನ್ನು ಮೈಸೂರು ಮಹಾನಗರ ಪಾಲಿಕೆ ಕೈಗೊಂಡಿರುವುದರಿಂದ ಬಸವೇಶ್ವರ ರಸ್ತೆ ಶಾಖಾ ಗ್ರಂಥಾಲಯದಲ್ಲಿ ಸದಸ್ಯತ್ವ ಹೊಂದಿರುವ ಸಾರ್ವಜನಿಕ ಓದುಗರು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಹಾಗೂ ತಮ್ಮ ಸದಸ್ಯತ್ವ ಕಾರ್ಡ್ ಅನ್ನು ಸಲ್ಲಿಸಿ ಚಾಮುಂಡಿಪುರಂ ಶಾಖಾ ಗ್ರಂಥಾಲಯದಲ್ಲಿ ತಾತ್ಕಾಲಿಕವಾಗಿ ಪುಸ್ತಕ ಎರವಲು ಸೇವೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ತಿಳಿಸಿದ್ದಾರೆ.

ಸ್ವಾತಂತ್ರ್ಯಕ್ಕೆ ಹೋರಾಡಿದವರಿಗೆ ವೀರ ನಮನ



ಮೈಸೂರು, ಆ.16–ನಾಟ್ಯ ರಿ. ಸಂಸ್ಥೆ ಮತ್ತು ಮೈಸೂರು ಬಿ.ಎಂ.ಹ್ಯಾಬಿಟ್ಯಾಟ್ ಮಾಲ್ ಸಹಯೋಗದಲ್ಲಿ 77ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ನಾಗವಾಲ ಗ್ರಾಪಂ ಮಾಜಿ ಸದಸ್ಯ ಹಾಗೂ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿ, ಶೋಷಣೆ ಇಲ್ಲದ, ಜಾತಿ–ಅಸ್ಪೃಶ್ಯತೆ ಇಲ್ಲದ ಭಾರತ ದೇಶವನ್ನು ನಿರ್ಮಾಣ ಮಾಡಲು ಬಯಸಿದ ಮಹಾತ್ಮ ಗಾಂಧಿ, ಸುಭಾಷ್ ಚಂದ್ರ ಬೋಸ್, ಸರ್ದಾರ್ ವಲ್ಲಭ ಭಾಯಿ ಪಟೇಲ್, ಭಗತ್ ಸಿಂಗ್ ಅವರು ಅಜರಾಮರ. ಇವರುಗಳ ತ್ಯಾಗ, ಬಲಿದಾನಕ್ಕೆ ನಾವು ವೀರ ವಂದನೆಯನ್ನು ಸಲ್ಲಿಸಬೇಕು. ನಮ್ಮ ತಾಯಿನಾಡನ್ನು ಗುಲಾಮಗಿರಿಗೆ ಒಳಪಡಿಸಿದ ಬ್ರಿಟಿಷರನ್ನು ಓಡಿಸಲು ಹಲವಾರು ಜನರು ತಮ್ಮ ಅಂಗಾಂಗಗಳನ್ನು ಕಳೆದುಕೊಂಡರು. ಪ್ರಾಣವನ್ನೇ ತ್ಯಾಗ ಮಾಡಿದರೂ ಸ್ವಾತಂತ್ರ್ಯ ಸಂಗ್ರಾಮದ ಛಲ ಬಿಡಲಿಲ್ಲ ಎಂದು ಸ್ಮರಿಸಿದರು.

ರಾಷ್ಟ್ರದ ಎಲ್ಲಾ ಜನರಿಗೂ ಶಿಕ್ಷಣ ಕೊಡಿ. ದೇಶದ ಚರಿತ್ರೆಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಮ್ಮದೇ ನಾಡಿನಲ್ಲಿ ಹುಟ್ಟಿದವರನ್ನು ಜಾತೀಯ ಅಸ್ಪೃಶ್ಯತೆಯ ಹೆಸರಿನಲ್ಲಿ ಅವಮಾನಿಸುವುದು ದೇಶ ದ್ರೋಹ ಎಂದು ಘೋಷಿಸಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಪ್ರಖ್ಯಾತ ಗಾಯಕರಾದ ಲಕ್ಷ್ಮೀರಾಮ್, ಕವಿ ಮತ್ತು ರಂಗಕರ್ಮಿ ಎಸ್.ಶಿಶಿ ರಂಜನ್, ಭರತನಾಟ್ಯ ಕಲಾವಿದ ವಿದುಷಿ ಮಹೇಶ್ವರಿ, ನಾಟ್ಯ ಸಂಸ್ಥೆಯ ಅಧ್ಯಕ್ಷರಾದ ಪವಿತ್ರ ಸಂತೋಷ್ ಇತರರು ಉಪಸ್ಥಿತರಿದ್ದರು.

ಮೈಸೂರು ರಿಂಗ್ ರಸ್ತೆಯಲ್ಲಿ ಅವ್ಯವಸ್ಥಿತ ಯೂ ಟರ್ನ್...

ಸಂಚಾರ ನಿಯಮ ಧಿಕ್ಕರಿಸಿ ಸಂಚರಿಸುತ್ತಿರುವ ವಾಹನಗಳು; ಭಾರಿ ಅನಾಹುತದ ಆತಂಕ

ಮೈಸೂರು,ಆ.16(ಜಿಎ)–ಮೈಸೂರು ರಿಂಗ್ ರಸ್ತೆಯಲ್ಲಿ ಭಾರಿ ಸರಕು ವಾಹನಗಳು ಅಡ್ಡಾದಿಡ್ಡಿಯಾಗಿ ಸಂಚರಿಸುತ್ತಿದ್ದು, ಸಾರ್ವಜನಿಕರು ಜೀವವನ್ನು ಕೈಯ್ಯಲ್ಲಿ ಹಿಡಿದು ರಸ್ತೆ ದಾಟುವ ಸ್ಥಿತಿ ನಿರ್ಮಾಣವಾಗುತ್ತಿದೆ.

ಮೈಸೂರಿನ ರಿಂಗ್ ರಸ್ತೆಯಲ್ಲಿ ನಿತ್ಯವೂ ಸಾವಿರಾರು ವಾಹನಗಳು ಸಂಚರಿಸುತ್ತವೆ. ಅದರಲ್ಲೂ ಹೆಬ್ಬಾಳು, ಮೇಟಗಳ್ಳಿ ಮತ್ತು ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ತೆರಳುವ ಸರಕು ವಾಹನಗಳು ಪ್ರಮುಖವಾಗಿ ಈ ರಸ್ತೆಯನ್ನು ಅವಲಂಬಿಸಿದ್ದು, ಸಂಚಾರ ನಿಯಮವನ್ನು ಗಾಳಿಗೆ ತೂರಿ, ಅಮಾಯಕರ ಪ್ರಾಣಕ್ಕೆ ಸಂಚಕಾರ ತರುವ ರೀತಿ ಅಡ್ಡಾದಿಡ್ಡಿಯಾಗಿ ಸಂಚರಿಸುತ್ತಿವೆ.

ರಿಂಗ್ ರಸ್ತೆಯ ಅನೇಕ ಸ್ಥಳಗಳಲ್ಲಿ ಯೂಟರ್ನ್ ತೆಗೆದುಕೊಂಡು ಸರ್ವಿಸ್ ರಸ್ತೆಯಲ್ಲಿ ಸಂಚರಿಸಬೇಕಿರುವ ಸರಕು ವಾಹನಗಳು ಯೂ ಟರ್ನ್ ತೆಗೆದುಕೊಂಡು ಮುಖ್ಯ ಪಥದಲ್ಲೇ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿವೆ. ಇದರಿಂದ ಸಂಚಾರಿ ನಿಯಮಾನುಸಾರ ಮುಖ್ಯ ರಸ್ತೆಯಲ್ಲಿ ವೇಗವಾಗಿ ಚಲಿಸುವ ದ್ವಿಚಕ್ರ, ಕಾರು, ಸೈಕಲ್ ಸವಾರರು ವಿಚಲಿತರಾಗಿ ಅಪಘಾತ ಸಂಭವಿಸಿರುವ ನಿದರ್ಶನ ಸಾಕಷ್ಟಿವೆ.

ಪೊಲೀಸ್ ಬ್ಯಾರಿಕೇಡ್ ಲೆಕ್ಕಕ್ಕಿಲ್ಲ : ನಾಡಪ್ರಭು ಕೆಂಪೇಗೌಡ ಸರ್ಕಲ್(ಮಣಿಪಾಲ್ ಆಸ್ಪತ್ರೆ ಜಂಕ್ಷನ್)ನಿಂದ ರಿಂಗ್ ರಸ್ತೆ ಮಾರ್ಗವಾಗಿ ನಗರದ ಕೈಗಾರಿಕಾ ಪ್ರದೇಶಗಳಿಗೆ ಸಾಗುವ ಸರಕು ವಾಹನಗಳು ಲೋಕನಾಯಕ ನಗರ ಮತ್ತು ಜಯದೇವನಗರ(ಶ್ರೀ ಸಾಯಿ ಎಕ್ಸ್‌ಪೋರ್ಟ್) ಸೇರುವಲ್ಲಿ ಯೂ ಟರ್ನ್ ತೆಗೆದುಕೊಂಡು ಸರ್ವಿಸ್ ರಸ್ತೆಯಲ್ಲಿ ಹೋಗಬೇಕಿರುವ ಈ ವಾಹನಗಳು ಬ್ಯಾರಿಕೇಡ್ ತಳ್ಳಿ ಮುಖ್ಯ ನಾಲ್ಕು ಪಥದಲ್ಲಿ ಮುಖ್ಯ ಪಥದಲ್ಲೇ ವಿರುದ್ಧ ದಿಕ್ಕಿನಲ್ಲಿ ಸಾಗಿ ಸಿಪೆಟ್ ಬಳಿ ತಿರುವು ತೆಗೆದುಕೊಳ್ಳುತ್ತಿವೆ.

ಸರ್ವಿಸ್ ರಸ್ತೆ ದುರಸ್ತಿ: ಮೈಸೂರಿನ ರಿಂಗ್ ರಸ್ತೆಯಲ್ಲಿ ಬಹುತೇಕ ಕಡೆ ನಿರ್ಮಿಸಿರುವ ಯೂ ಟರ್ನ್‌ಗಳು ಅವೈಜ್ಞಾನಿಕವಾಗಿವೆ. ಸರ್ವಿಸ್ ರಸ್ತೆ, ಮುಖ್ಯ ರಸ್ತೆ ಹಾಗೂ ಯೂ ಟರ್ನ್‌ಗೆ ಅಜಗಜಾಂತರ ವ್ಯತ್ಯಾಸವಿದ್ದು, ಈ ಸಮಸ್ಯೆಗೆ ಮುಖ್ಯ ಕಾರಣ ಎಂದು ಕೆಲವರು ದೂರಿದ್ದಾರೆ. ಮತ್ತೊಂದೆಡೆ ಸರ್ವಿಸ್ ರಸ್ತೆಯಲ್ಲಿ ಗ್ಯಾಸ್ ಪೈಪ್‌ಲೈನ್ ಕಾಮಗಾರಿ ಆಮೆ ಗತಿಯಲ್ಲಿ ಸಾಗುತ್ತಿರುವುದರಿಂದ ಸರ್ವಿಸ್ ರಸ್ತೆ ಕೆಲವೆಡೆ ಹದಗೆಟ್ಟಿದೆ ಮತ್ತು ಕಾಮಗಾರಿ ನಡೆಯುತ್ತಿರುವ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿರುವುದರಿಂದ ಅನಿವಾರ್ಯವಾಗಿ ಸರ್ವಿಸ್ ರಸ್ತೆ ಬಿಟ್ಟು ಮುಖ್ಯ ಪಥದಲ್ಲೇ ವಿರುದ್ಧ ದಿಕ್ಕಿನಲ್ಲಿ ಎಲ್ಲಾ ಮಾದರಿಯ ವಾಹನಗಳು ಚಲಿಸುತ್ತಿವೆ. ಅನೇಕ ಸಮಸ್ಯೆಗಳಿಂದ ಕೂಡಿರುವ ರಿಂಗ್ ರಸ್ತೆಯಲ್ಲಿ ಸಾರ್ವಜನಿಕರು ಸಂಚರಿಸುವುದೇ ಕಷ್ಟಕರವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ, ರಿಂಗ್ ರಸ್ತೆ ಅಪಘಾತಗಳ ತಾಣವಾಗಲಿದೆ ಎಂದು ಜನರು ಆತಂಕ ವ್ಯಕ್ತಪಡಿಸಿದ್ದಾರೆ.



> "ರಿಂಗ್ ರಸ್ತೆಯಲ್ಲಿ ಸಂಚಾರಿ ನಿಯಮ ಉಲ್ಲಂಘಿಸುತ್ತಿರುವ ಸ್ಥಳಗಳನ್ನು ಗುರುತಿಸಿ ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು.
> –ಎಸ್.ಜಾಹ್ನವಿ, ಡಿಸಿಪಿ, ಸಂಚಾರ ವಿಭಾಗ

ದಾರಿ ತಪ್ಪಿದ ಚಾಲಕರು

ಭಾರಿ ಸರಕು ವಾಹನಗಳು ವಿರುದ್ಧ ದಿಕ್ಕಿನಲ್ಲಿ ಸಂಚರಿಸುತ್ತಿರುವುದನ್ನು ನೋಡಿ, ದ್ವಿಚಕ್ರ, ಕಾರು ಇನ್ನಿತರೆ ವಾಹನಗಳ ಚಾಲಕರು ಸಹ ಇದೇ ಮಾರ್ಗವನ್ನು ಅನುಸರಿಸುತ್ತಿದ್ದು, ಇದರಿಂದ ವಾಹನಗಳು ಹೆಚ್ಚು ಸಂಚರಿಸುವ ಪ್ರಮುಖ ಸಮಯವಾದ ಬೆಳಗ್ಗೆ ಹಾಗೂ ಸಂಜೆ ಕೆಲಸಕ್ಕೆ ತೆರಳುವ ಮತ್ತು ಕೆಲಸದಿಂದ ಮನೆಗೆ ಹಿಂದಿರುಗುವಾಗ ಯೂ ಟರ್ನ್‌ಗಳ ಬಳಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿದೆ.

ಪ್ರಸಿದ್ಧ ಛಾಯಾಗ್ರಾಹಕ ಪತ್ರಕರ್ತ ಟಿ.ಎಸ್. ಸತ್ಯನ್ ಸ್ಮರಣೆ...

ಬೆಂಗಳೂರಲ್ಲಿ ಅವರ ಶ್ರೇಷ್ಠ ಛಾಯಾಚಿತ್ರಗಳ ಪ್ರದರ್ಶನ




ಮೈಸೂರು: ಭಾರತದ ಅಗ್ರಗಣ್ಯ ಫೋಟೋ–ಜರ್ನಲಿಸ್ಟ್‌ಗಳಲ್ಲಿ ಒಬ್ಬರಾದ ಟಿ.ಎಸ್.ಸತ್ಯನ್ ಅವರ ಜನ್ಮ ಶತಮಾನೋತ್ಸವದ ಹಿನ್ನೆಲೆಯಲ್ಲಿ ಬೆಂಗಳೂರಿನ ಮ್ಯೂಸಿಯಂ ಆಫ್ ಆರ್ಟ್ ಅಂಡ್ ಫೋಟೋಗ್ರಫಿ ವತಿಯಿಂದ (MAP - #22, ಕಸ್ತೂರ ಬಾ ರಸ್ತೆ, ಬೆಂಗಳೂರು) ಅವರ ಕೆಲವು ಶ್ರೇಷ್ಠ ಛಾಯಾಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ಪ್ರದರ್ಶನಕ್ಕೆ ಅತ್ಯಂತ ಸೂಕ್ತವಾದ ಶೀರ್ಷಿಕೆಯನ್ನೇ ನೀಡಲಾಗಿದೆ. "With Great Ease- The Photography of T.S. satyan (ಬಹಳ ಸುಲಭ: ಟಿ.ಎಸ್.ಸತ್ಯನ್ ಛಾಯಾಗ್ರಹಣ) ಛಾಯಾಚಿತ್ರ ಪ್ರದರ್ಶನ ಆಗಸ್ಟ್ 12ರಿಂದ ಆರಂಭವಾಗಿದೆ.

ಡಿಸೆಂಬರ್ 18, 1923ರಂದು ಟಿ.ಎಸ್. ಸತ್ಯನ್ ಮೈಸೂರಿನಲ್ಲಿ ಜನಿಸಿದರು. ತಮ್ಮ ಜೀವಿತಾವಧಿಯಲ್ಲೇ ದಂತಕಥೆಯಾಗಿದ್ದ ಅವರು ತಮ್ಮ ಸಂಧ್ಯಾಕಾಲದಲ್ಲಿ ಮೈಸೂರಿಗೆ ವಾಪಸಾಗಿ, ಇಲ್ಲಿಯೇ ವಾಸ್ತವ್ಯ ಹೂಡಿದ್ದರು. ಮತ್ತು ತಮ್ಮ ಅಚ್ಚುಮೆಚ್ಚಿನ ನಗರದಲ್ಲೇ ಡಿಸೆಂಬರ್ 13, 2009ರಂದು ನಿಧನರಾದರು.

"ಸ್ಟಾರ್ ಆಫ್ ಮೈಸೂರ್" ಮತ್ತು "ಮೈಸೂರು ಮಿತ್ರ" ಟಿ.ಎಸ್. ಸತ್ಯನ್ ಅವರನ್ನು ಸದಾ ನೆನಪಿಸಿಕೊಳ್ಳುತ್ತವೆ. ಸತ್ಯನ್ ಅವರ ಸಾಧನೆಗಳು ಮತ್ತು ಮೈಸೂರಿನಲ್ಲಿ ಅವರ ಕೊನೆಯ ದಿನಗಳ ಕುರಿತು "ಸ್ಟಾರ್ ಆಫ್ ಮೈಸೂರು" ಮತ್ತು "ಮೈಸೂರು ಮಿತ್ರ" ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ ಮತ್ತು ಇವುಗಳ ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ ಅವರ ಲೇಖನಗಳನ್ನು ಪ್ರಕಟಿಸಿದ್ದವು.

ಕೆ.ಬಿ.ಗಣಪತಿ ಮತ್ತು ವಿಕ್ರಮ್ ಮುತ್ತಣ್ಣ ಅವರು ಆಗಸ್ಟ್ 12 ರಂದು ಸಂಜೆ 5.30ಕ್ಕೆ ಬೆಂಗಳೂರಿನ MAPನಲ್ಲಿ ನಡೆದ ಸತ್ಯನ್ ಅವರ ಛಾಯಾಚಿತ್ರಗಳ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಹಾಜರಿದ್ದರು. ಈ ವೇಳೆ ಟಿ.ಎಸ್. ಸತ್ಯನ್ ಅವರ ಹಲವಾರು ಸ್ನೇಹಿತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು. ಈ ವಿಶೇಷ ಎಕ್ಸ್‌ಪೋ ನವೆಂಬರ್ 20ರವರೆಗೆ ಇರುತ್ತದೆ.



ಟಿ.ಎಸ್.ಸತ್ಯನ್

ಉದ್ಘಾಟನೆ ಸಂದರ್ಭದಲ್ಲಿ ನೆರೆದಿದ್ದ ಸಭಿಕರನ್ನು ಉದ್ದೇಶಿಸಿ ಮಾತನಾಡಿದ MAP ನಲ್ಲಿನ ಪ್ರದರ್ಶನಗಳ ಮುಖ್ಯಸ್ಥರಾದ ಅರ್ನಿಕಾ ಅಲ್ಲಾಗ್, ನಾನು ಟಿ.ಎಸ್.ಸತ್ಯನ್ ಅವರಿಂದ ತುಂಬಾ ಪ್ರಭಾವಿತನಾಗಿದ್ದೇನೆ. ಸತ್ಯನ್ ಅವರ ಛಾಯಾಚಿತ್ರಗಳು ಮತ್ತು ಅವರು ಛಾಯಾಗ್ರಾಹಕರಾಗಿ ಸಾಕಷ್ಟು ಸಹಾನುಭೂತಿ ಹೊಂದಿದ್ದರು. ಅವರ ಚಿತ್ರಗಳಲ್ಲಿ ಜೀವ ಮತ್ತು ಪ್ರೀತಿ ತುಂಬಿವೆ. ಅವರು ಸಂಕಷ್ಟಗಳ ಗೊಂದಲದಲ್ಲಿಯೂ ಆ ಸಂತೋಷದ ಸಣ್ಣ ಕ್ಷಣಗಳನ್ನು ಹುಡುಕುತ್ತಿದ್ದರು. ನಾವು ನಿರೀಕ್ಷೆ ಮಾಡದಿರುವುದನ್ನು ನಮಗೆ ತೋರಿಸಲು ಅವರು ಹೇಗಾದರೂ ಪ್ರಯತ್ನಿಸುತ್ತಿರುತ್ತಿದ್ದರು ಎಂದರು.

ಆಹ್ವಾನಿತರನ್ನು ಸ್ವಾಗತಿಸಿದ MAPನ ನಿರ್ದೇಶಕರಾದ ಕಾಮಿನಿ ಸಾಹ್ನಿ, "ಟಿ.ಎಸ್.ಸತ್ಯನ್ ಅವರ ಛಾಯಾಚಿತ್ರಗಳು ಸಣ್ಣ ಕ್ಷಣಗಳಿಗೂ ಜೀವ ತುಂಬುತ್ತವೆ. ಮಾನವೀಯ ಸಂಬಂಧಗಳ ಸೂಕ್ಷ್ಮ ವಿಚಾರಗಳಲ್ಲೂ ಪ್ರಾವೀಣ್ಯತೆವುಳ್ಳವರಾಗಿದ್ದರು. ಫೋಟೋ–ಜರ್ನಲಿಸ್ಟ್ ಎಂದೇ ಹೆಸರುವಾಸಿಯಾಗಿದ್ದು, ಅವರ ಶತಮಾನೋತ್ಸವವನ್ನು ಆಚರಿಸಲು, ಈ ಪ್ರದರ್ಶನವು ಸತ್ಯನ್ ಅವರ ವಿಭಿನ್ನ ಮುಖವನ್ನು ಬಿಂಬಿಸುತ್ತದೆ. ಅವರು ಒಂದು ಅನನ್ಯ ದೃಷ್ಟಿಕೋನ ಮತ್ತು ಕರ್ತೃತ್ವವನ್ನು ಹೊಂದಿರುವ ಛಾಯಾಗ್ರಾಹಕರು ಎಂದು ಸ್ಮರಿಸಿದರು.

ಮೈಸೂರಲ್ಲಿ ಇಂದಿನಿಂದ 3 ದಿನ ಬೃಹತ್ ರಕ್ತದಾನ ಶಿಬಿರ



ಮೈಸೂರು,ಆ.16(ಎಂಟಿವೈ)– ಸ್ವಾತಂತ್ರ್ಯೋತ್ಸವದ ಅಂಗವಾಗಿ ಆ.17ರಿಂದ 19ರವರೆಗೆ ಮೈಸೂರಿನ ವಿವಿಧೆಡೆ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ರೋಟರಿ ಸಂಸ್ಥೆಯ ಯೂತ್ ಸರ್ವಿಸ್ ಘಟಕ ಸಮೀರ್ ಕಶ್ಯಪ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ರೋಟರಿ ಸಂಸ್ಥೆ ಹಾಗೂ ಜಿಎಸ್‌ಎಸ್ ಯೋಗ ಸಂಸ್ಥೆ, ಬ್ಲಡ್ ಆನ್ ಕಾಲ್ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆ.17ರಿಂದ 19ರವರೆಗೆ ಬೃಹತ್ ರಕ್ತದಾನ ಶಿಬಿರ ನಡೆಸಲಾಗುತ್ತಿದೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದಾಖಲಾಗಿರುವ ರೋಗಿಗಳಿಗೆ ರಕ್ತದ ಕೊರತೆ ಉಂಟಾಗಿದೆ. ಅಗತ್ಯಕ್ಕೆ ಅನುಗುಣವಾಗಿ ರಕ್ತದಾನ ಮಾಡಲು ದಾನಿಗಳು ಮುಂದೆ ಬರುತ್ತಿಲ್ಲ. ಇದರಿಂದ ತುರ್ತು ಪರಿಸ್ಥಿತಿಯಲ್ಲಿ ಚಿಕಿತ್ಸೆ ಕೊಡಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಮೂರು ದಿನಗಳ ರಕ್ತದಾನದ ಶಿಬಿರ ನಡೆಸಲಾಗುತ್ತಿದೆ ಎಂದರು.

ಆ.17ರಂದು ಬೆಳಗ್ಗೆ 8ರಿಂದ ಮಧ್ಯಾಹ್ನ 2 ಗಂಟೆವರೆಗೆ ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ರಕ್ತದಾನ ಶಿಬಿರ ನಡೆಯಲಿದೆ. ಆ.18ರಂದು ಮೈಸೂರು ವಿವಿಯ ಪತ್ರಿಕೋದ್ಯಮ ವಿಭಾಗದ ಸಭಾಂಗಣ ಹಾಗೂ ಎಟಿಎಂಇ ಕಾಲೇಜು ಸಭಾಂಗಣದಲ್ಲಿ, ಆ.19ರಂದು ಐಡಿಯಲ್ ಜಾವಾ ರೋಟರಿ ಶಾಲೆ, ಎನ್‌ಪಿಎಸ್ ಸಂಸ್ಥೆ, ಯೂತ್ ಹಾಸ್ಟೆಲ್, ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಆವರಣ, ಮುಕ್ತ ವಿವಿಯಲ್ಲಿನ ಪ್ಲಾಂಟ್ ಪ್ಲಾನೆಟ್ ಕ್ಲಬ್, ಜಿಎಸ್‌ಎಸ್ ಕಚೇರಿ, ಬಿಲ್ಡರ್‌ಗಳ ಸಂಸ್ಥೆ, ಸಿಪಿಸಿ ಪಾಲಿಟೆಕ್ನಿಕ್, ಎಸ್‌ಡಿಎಂಐಎಂಡಿ ಶಿಕ್ಷಣ ಸಂಸ್ಥೆಗಳಲ್ಲಿ ರಕ್ತದಾನ ಶಿಬಿರ ನಡೆಯಲಿದೆ. 3 ದಿನಗಳಲ್ಲಿ 12 ಸ್ಥಳಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಜಿಎಸ್‌ಎಸ್ ಸಂಸ್ಥೆಯ ಶ್ರೀಹರಿ, ಮುರಳೀಧರ್, ಎಂ.ಎಸ್.ಹರೀಶ್, ಅರುಣ್ ಬೆಳವಾಡಿ, ದೇವೇಂದ್ರಕುಮಾರ್ ಇದ್ದರು.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸ್ಥಗಿತಗೊಳಿಸಲ್ಲ



ಬೆಂಗಳೂರು: ರಾಜ್ಯ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ಶಕ್ತಿ ಯೋಜನೆಯನ್ನು ಸ್ಥಗಿತಗೊಳಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆ ಸ್ಥಗಿತಗೊಳಿಸಲಾಗುತ್ತಿದೆ ಎಂಬ ಊಹಾಪೋಹಗಳು ಕೇಳಿಬರುತ್ತಿದ್ದು, ಈ ಬಗ್ಗೆ ಪ್ರತಿಕ್ರಿಯಿಸಿದ ರಾಮಲಿಂಗಾ ರೆಡ್ಡಿ, ಯೋಜನೆ ನಿಂತು ಹೋಗುತ್ತದೆ ಅಂತ ಊಹಾಪೋಹಗಳು ಕೇಳಿ ಬರುತ್ತಿವೆ. ಒಂದು ಪಕ್ಷದವರು ಈ ಊಹಾಪೋಹಗಳನ್ನು ಹರಡುತ್ತಿದ್ದಾರೆ. ಆದರೆ ಇನ್ನು 10 ವರ್ಷ ಈ ಶಕ್ತಿ ಯೋಜನೆ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ.

ಇನ್ನು ಕೆಎಸ್‌ಆರ್‌ಟಿಸಿ ಸಹ ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಯೋಜನೆ ಸ್ಥಗಿತಗೊಳ್ಳಲ್ಲ ಎಂದು ಮಾಧ್ಯಮ ಪ್ರಕಟಣೆ ಹೊರಡಿಸಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಯೋಜನೆ ಮುಂದುವರಿಯುತ್ತೆ ಯಾವುದೇ ಗೊಂದಲದ ಸಂದೇಶಗಳನ್ನು ಸಾರ್ವಜನಿಕರು ನಂಬಬಾರದು. ಮಹಿಳೆಯರ ಉಚಿತ ಪ್ರಯಾಣ ಸ್ಥಗಿತಗೊಳ್ಳಲ್ಲ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಕೆ.ಜಿ.ಕೊಪ್ಪಲಿನ ಪೈಲ್ವಾನ್ ಬಸವಯ್ಯ ವೃತ್ತದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಚಿತ್ರದಲ್ಲಿ ದೇವಸ್ಥಾನದ ಸಮಿತಿ ಸದಸ್ಯರನ್ನು ಕಾಣಬಹುದು.


ಆ.22ರಂದು ಸಾಮಾನ್ಯ ಕೌನ್ಸಿಲ್ ಸಭೆ

ಮೈಸೂರು, ಆ.16– ಆಗಸ್ಟ್ 22ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರು ಮಹಾನಗರ ಪಾಲಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ 2023ನೇ ಆಗಸ್ಟ್ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆ ಏರ್ಪಡಿಸಲಾಗಿದೆ ಎಂದು ಮಹಾನಗರಪಾಲಿಕೆಯ ಕೌನ್ಸಿಲ್ ಕಾರ್ಯದರ್ಶಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣೆ–2024: ಆ.21ರವರೆಗೆ ಮತಗಟ್ಟೆ ಅಧಿಕಾರಿಗಳ ಮನೆ–ಮನೆ ಭೇಟಿ, ಪರಿಶೀಲನೆ

ಮೈಸೂರು,ಆ.16– ಮತದಾರರ ಪಟ್ಟಿ ಪರಿಷ್ಕರಣೆ–2024ರ ಸಂಬಂಧ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ–ಮನೆ ಭೇಟಿ, ಪರಿಶೀಲನೆ ಕಾರ್ಯವು ಜುಲೈ 21ರಿಂದ ಈಗಾಗಲೇ ಪ್ರಾರಂಭಗೊಂಡಿದ್ದು, ಆ.21ರವರೆಗೆ ನಡೆಯಲಿದೆ. ಸದರಿ ಮನೆ–ಮನೆ ಭೇಟಿಯ ಸಂದರ್ಭದಲ್ಲಿ ಸಂಬಂಧಪಟ್ಟ ಮತಗಟ್ಟೆಗೆ ನೇಮಕವಾಗಿರುವ ಬಿ.ಎಲ್.ಒ (ಮತಗಟ್ಟೆ ಮಟ್ಟದ ಅಧಿಕಾರಿಗಳು) ಅವರ ಮತಗಟ್ಟೆ ವ್ಯಾಪ್ತಿಯ ಪ್ರತಿ ಮನೆಗಳಿಗೂ ಭೇಟಿ ನೀಡಿ ಮಾಹಿತಿಗಳನ್ನು ಪಡೆಯಲಿದ್ದು, ಸದರಿ ಮಾಹಿತಿಯನ್ನು ಸಾರ್ವಜನಿಕರು ಬಿ.ಎಲ್.ಒ ಅಧಿಕಾರಿ)ಗಳಿಗೆ ನೀಡಿ ಸಹಕರಿಸುವುದು.

ಪ್ರಸ್ತುತ ಮತದಾರರ ಪಟ್ಟಿಗೆ ನೋಂದಣಿಯಾಗಿರುವ ಮತದಾರರ ವಿವರ ನೀಡುವುದು. ವರ್ಷದಲ್ಲಿನ 04 ಅರ್ಹತಾ ದಿನಾಂಕಗಳಿಗೆ ಅಂದರೆ 01.04. 2023, 01.07.2023, 01.10.2023 ಮತ್ತು 01.01. 2024 18 ವರ್ಷಗಳನ್ನು ಪೂರ್ಣಗೊಳಿಸುವವರ ವಿವರಗಳನ್ನು ನೀಡುವುದು. ಪ್ರಸ್ತುತ ಮನೆಯಲ್ಲಿರುವ ಎಲ್ಲಾ ಸದಸ್ಯರ (18 ವರ್ಷದ ಒಳಗಿರುವವರು ಹಾಗೂ ಮತದಾರರ ಪಟ್ಟಿಗೆ ಸೇರ್ಪಡೆಗೊಂಡಿಲ್ಲದಿರುವವರ ವಿವರಗಳನ್ನೂ ಸೇರಿದಂತೆ) ವಿವರಗಳನ್ನು ನೀಡುವುದು. ವಿಶೇಷಚೇತನ ಮತದಾರರ ವಿವರಗಳನ್ನು ನೀಡುವುದು. ಮೃತರಾಗಿರುವ, ಸ್ಥಳಾಂತರವಾಗಿರುವ ಮತದಾರರ ವಿವರ ನೀಡುವುದು. ಮನೆಯಲ್ಲಿನ ಎಲ್ಲಾ ಮತದಾರರು ಮತದಾರರ ಪಟ್ಟಿಯ ಒಂದೇ ಭಾಗ ಮತ್ತು ವಿಭಾಗದಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳುವುದು. ಮತದಾರರ ಪಟ್ಟಿಯಲ್ಲಿನ ನಮೂದುಗಳಲ್ಲಿ ಯಾವುದೇ ತಿದ್ದುಪಡಿಗಳು ಅವಶ್ಯವಿದ್ದಲ್ಲಿ, ಅದಕ್ಕೆ ಸೂಕ್ತ ದಾಖಲೆಗಳನ್ನು ತಿದ್ದುಪಡಿ ಮಾಡಿಸಿಕೊಳ್ಳುವುದು. ಕಟ್ಟಡ, ಮನೆಯ ಸಂಖ್ಯೆಯ ವಿವರಗಳನ್ನು ನೀಡುವುದು. ದಿನಾಂಕಕ್ಕೆ 18 ವರ್ಷ ಪೂರೈಸುವ ಹಾಗೂ ಮತದಾರರ ಪಟ್ಟಿಗಳಲ್ಲಿ ಈವರೆಗೂ ಹೆಸರನ್ನು ನೋಂದಾಯಿಸದೆ ಇರುವ ಅರ್ಹ ಮತದಾರರ ಹೆಸರುಗಳನ್ನು ಸೇರಿಸಲು ಅರ್ಜಿಗಳನ್ನು ಮೇಲ್ಕಂಡ ವೇಳಾಪಟ್ಟಿಯನ್ವಯ (Voter Helpline Application, NVSP Website) ಮೂಲಕ ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ನೀಡುವುದು. ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಹೆಚ್ಚಿನ ಆದ್ಯತೆ ನೀಡುವುದು. ಈ ಸಂಬಂಧ ಯಾವುದೇ ಮಾಹಿತಿ ಅವಶ್ಯಕತೆ ಇದ್ದಲ್ಲಿ ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ಅಥವಾ ಮತದಾರರ ನೋಂದಣಿ ಅಧಿಕಾರಿ, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಅರ್ಹತಾ ಉಪ ವಿಭಾಗಾಧಿಕಾರಿಗಳು, ಮೈಸೂರು ಮತ್ತು ಹುಣಸೂರು ಉಪವಿಭಾಗ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳಾದ ಜಿಲ್ಲೆಯ ಎಲ್ಲಾ ತಾಲೂಕು ತಹಸೀಲ್ದಾರ್ ಕಚೇರಿಗಳಲ್ಲಿ ಹಾಗೂ ತಾಲೂಕು ಪಂಚಾಯಿತಿಗಳಲ್ಲಿ ಮಾಹಿತಿ ಪಡೆಯಬಹುದಾಗಿದೆ. ಅರ್ಹ ಮತದಾರರುಗಳು ಮತದಾರರ ಪಟ್ಟಿಗೆ ಅವರ ಹೆಸರನ್ನು ಚುನಾವಣಾ ಆಯೋಗವು ನಿಗದಿಪಡಿಸುವ ದಿನಾಂಕದವರೆಗೂ ಸೇರ್ಪಡೆಗೊಳ್ಳಲು ಅವಕಾಶವಿರುತ್ತದೆ ಎಂದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.



ಸಂಬಂಧಪಟ್ಟ ನಮೂನೆಗಳ ವಿವರ

ನಮೂನೆ–6 ಸೇರ್ಪಡೆ, ನಮೂನೆ–6ಎ ಅನಿವಾಸಿ ಭಾರತೀಯರು ಅವರ ಹೆಸರನ್ನು ನೋಂದಾಯಿಸಿಕೊಳ್ಳಲು, ನಮೂನೆ–6ಬಿ ಮತದಾರರ ಪಟ್ಟಿಯೊಂದಿಗೆ ಆಧಾರ್ ಜೋಡಣೆ ಮಾಡಿಕೊಳ್ಳಲು, ನಮೂನೆ–7 ತೆಗೆದುಹಾಕುವುದು (ಮರಣ, ಸ್ಥಳಾಂತರ, ಪುನರಾವರ್ತನೆ), ನಮೂನೆ–8 ಮತದಾರರ ಹೆಸರು, ವಿಳಾಸ ಮತ್ತು ಭಾವಚಿತ್ರಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ, ಒಂದು ವಿಧಾನಸಭಾ ಕ್ಷೇತ್ರದಿಂದ ಬೇರೆ ಕ್ಷೇತ್ರಕ್ಕೆ ವರ್ಗಾವಣೆ, ಒಂದು ಕ್ಷೇತ್ರದಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ವರ್ಗಾವಣೆ, ಬದಲಿ ಎಪಿಕ್‌ಗಾಗಿ ಮನವಿ ಹಾಗೂ ಅಂಗವೈಕಲ್ಯ ಹೊಂದಿರುವ ಮತದಾರರ ಅವರ ಅಂಗವೈಕಲ್ಯ ದಾಖಲಿಸಲು ಅವಕಾಶ ಕಲ್ಪಿಸಿದ್ದು, ಸಾರ್ವಜನಿಕರು ಸಹಕರಿಸಬೇಕು. ವಿಧಾನಸಭಾ ಕ್ಷೇತ್ರವಾರು ಪ್ರತಿ ಮತಗಟ್ಟೆಗಳಿಗೆ ನೇಮಕ ಮಾಡಿರುವ ಬಿ.ಎಲ್.ಒ (ಮತಗಟ್ಟೆ ಮಟ್ಟದ ಅಧಿಕಾರಿ)ಗಳ ಮಾಹಿತಿಯು https://mysore.nic.in/ ನಲ್ಲಿ ಲಭ್ಯವಿದ್ದು ಸದರಿ ಮಾಹಿತಿಯ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬಹುದಾಗಿದೆ.

ನಶೆಯಲ್ಲಿದ್ದ ಗುಮಾಸ್ತ ಅಮಾನತಿಗೆ ಶಿಫಾರಸ್ಸು

ನಾಗಮಂಗಲ, ಆ.16– ಮದ್ಯಪಾನ ಮಾಡಿ ಕರ್ತವ್ಯ ನಿರ್ವಹಿಸುತ್ತಿದ್ದ ಕಂದಾಯ ಇಲಾಖೆಯ ಎರಡನೇ ದರ್ಜೆ ಗುಮಾಸ್ತನನ್ನು ಅಮಾನತು ಪಡಿಸಲು ತಾಲೂಕು ತಹಸೀಲ್ದಾರ್ ಶಿಫಾರಸು ಮಾಡಿರುವ ಘಟನೆ ತಾಲೂಕಿನ ಬೆಳ್ಳೂರಿನ ನಾಡಕಚೇರಿಯಲ್ಲಿ ನಡೆದಿದೆ.



ಕಂದಾಯ ಇಲಾಖೆಯ ಸಿಬ್ಬಂದಿ ಪರಶಿವಮೂರ್ತಿ ಎಂಬಾತ ಪ್ರತಿದಿನ ಮದ್ಯಪಾನ ಮಾಡಿ ಕೆಲಸಕ್ಕೆ ಹಾಜರಾಗುತ್ತಿದ್ದಾನೆಂದು ಸಾರ್ವಜನಿಕರಿಂದ ಬಂದ ದೂರಿನ ಹಿನ್ನೆಲೆಯಲ್ಲಿ ತಾಲೂಕು ತಹಸೀಲ್ದಾರ್ ನಯೀಮುನ್ನೀಸಾ ಬುಧವಾರ ಬೆಳ್ಳೂರಿನ ನಾಡ ಕಚೇರಿಗೆ ದಿಢೀರ್ ಭೇಟಿ ನೀಡಿದ್ದು, ಈ ವೇಳೆ ಪರಶಿವಮೂರ್ತಿ ಮದ್ಯಪಾನ ಮಾಡಿರುವ ಬಗ್ಗೆ ವೈದ್ಯಕೀಯ ಪರೀಕ್ಷೆಗೊಳಪಡಿಸಿದಾಗ ದೃಢೀಕೃತವಾದ ಹಿನ್ನೆಲೆಯಲ್ಲಿ ಆತನನ್ನು ಕೆಸಿಎಸ್‌ಆರ್ ನಿಯಮದ ಪ್ರಕಾರ ಅಮಾನತುಪಡಿಸಲು ಶಿಫಾರಸು ಮಾಡಿ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದಾರೆ.

ಗಾಂಜಾ ಮಾರಾಟಗಾರನ ಬಂಧನ

ಶ್ರೀರಂಗಪಟ್ಟಣ, ಆ.16– ತಾಲೂಕಿನ ಕೆ.ಆರ್.ಸಾಗರದ ರೈಲ್ವೇ ನಿಲ್ದಾಣ ರಸ್ತೆಯಲ್ಲಿ ಗಾಂಜಾ ಮಾರಲು ನಿಂತಿದ್ದ ಕೆ.ಆರ್.ಸಾಗರ ನಿವಾಸಿ ಗೋವಿಂದ ಶಂಭು ಎಂಬಾತನನ್ನು ಪೊಲೀಸರು ಬಂಧಿಸಿದ್ದು, ಈತನ ಜೊತೆಗಿದ್ದ ತಾಯಿ ಲೀಲಾ ಪರಾರಿಯಾಗಿರುವ ಘಟನೆ ನಡೆದಿದೆ. ಬುಧವಾರ ಮಧ್ಯಾಹ್ನ ಖಚಿತ ಮಾಹಿತಿ ಮೇರೆಗೆ ಕೆ.ಆರ್.ಸಾಗರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಬಸವರಾಜು ನೇತೃತ್ವದಲ್ಲಿ ಸಿಬ್ಬಂದಿಗಳು ದಾಳಿ ನಡೆಸಿ, ಗೋವಿಂದ ಶಂಭುವನ್ನು ಬಂಧಿಸಿ, ಆತನ ಬಳಿಯಿದ್ದ ಸುಮಾರು 250 ಗ್ರಾಂ ಗಾಂಜಾ ವಶಪಡಿಕೊಂಡಿದ್ದು, ಶ್ರೀರಂಗಪಟ್ಟಣ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಈ ಕಾರ್ಯಚರಣೆಯಲ್ಲಿ ಸಿಬ್ಬಂದಿಗಳಾದ ಮಂಜುನಾಥ, ಪ್ರಭು, ಯದುರಾಜ್, ಸತೀಶ, ರೇಣು ಭಾಗವಹಿಸಿದ್ದರು.

ಮಂಡ್ಯವನ್ನು ಕೃಷಿ ಸ್ನೇಹಿ ಜಿಲ್ಲೆ ಮಾಡುವುದೇ ನನ್ನ ಗುರಿ

ಸ್ವಾತಂತ್ರ್ಯೋತ್ಸವದಲ್ಲಿ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ

ಮಂಡ್ಯ, ಆ.16– ಮಂಡ್ಯ ಜಿಲ್ಲೆಯನ್ನು ಕೃಷಿಸ್ನೇಹಿ ಜಿಲ್ಲೆಯನ್ನಾಗಿಸಲು ಕೃಷಿ ಸಚಿವನಾಗಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಜಿಲ್ಲಾಡಳಿತ ವತಿಯಿಂದ ಆಯೋಜಿಸಲಾಗಿದ್ದ 77ನೇ ಭಾರತ ಸ್ವಾತಂತ್ರ್ಯೋವದ ಅಂಗವಾಗಿ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ವಿವಿಧ ಪಡೆಗಳ ಗೌರವ ವಂದನೆ ಸ್ವೀಕರಿಸಿ ಸ್ವಾತಂತ್ರ್ಯೋತ್ಸವದ ಸಂದೇಶ ನೀಡಿ ಮಾತನಾಡಿದರು. ಜಿಲ್ಲೆಯ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರನ್ನು ಪೂರೈಸುವ ದೃಷ್ಠಿಯಿಂದ ರೂ.1,828 ಕೋಟಿ ವೆಚ್ಚದಲ್ಲಿ ಜಲಧಾರೆ ಯೋಜನೆಯಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಯೋಜನೆ ರೂಪಿಸಲಾಗಿದೆ. ವಿಶ್ವೇಶ್ವರಯ್ಯ ನಾಲೆಯ 45 ಕಿಮೀ ಆಧುನೀಕರಣಕ್ಕೆ ಈಗಾಗಲೇ 300 ಕೋಟಿ ರೂ. ವೆಚ್ಚದಲ್ಲಿ ಯೋಜನೆಯನ್ನು ರೂಪಿಸಲಾಗಿದೆ. ರೈತಬಾಂಧವರು ಸಹಕಾರ ನೀಡಿದರೆ ಮುಂದಿನ ದಿನಗಳಲ್ಲಿ ನಾಲೆಯ ಆಧುನೀಕರಣವನ್ನು ಕೈಗೆತ್ತಿಕೊಳ್ಳಲಾಗುವುದು



ಎಂದು ತಿಳಿಸಿದರು. ರಾಜರ್ಷಿ ಮೈಸೂರು ಸಂಸ್ಥಾನದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿರುವುದನ್ನು ಸ್ಮರಿಸಿಕೊಳ್ಳಬೇಕಿದೆ. ಮೈಷುಗರ್ ಸಕ್ಕರೆ ಕಾರ್ಖಾನೆ ವಿವಿಧ ಕಾರಣಗಳಿಂದ ಈ ಹಿಂದೆ ಸ್ಥಗಿತಗೊಂಡಿತ್ತು. ಆದರೆ ನಾವು ಕೊಟ್ಟ ಭರವಸೆಯಂತೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಕೂಡಲೇ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ರೂ.50 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿ ಕಾರ್ಖಾನೆಯನ್ನು ಮರು ಚಾಲನೆ ಮಾಡಲಾಗಿದ್ದು, ಜುಲೈ 7 ರಿಂದ ಪ್ರಾರಂಭವಾಗಿ ಈ ದಿನದವರೆಗೆ 86000 ಮೆಟ್ರಿಕ್ ಟನ್ ಕಬ್ಬು ಅರೆದು 4956 ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಲಾಗಿದೆ ಎಂದು ವಿವರಿಸಿದರು.

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಒಂದಾದ ಗೃಹಜ್ಯೋತಿ ಯೋಜನೆಗೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 4,33,266 ವಿದ್ಯುತ್ ಗ್ರಾಹಕರು ಹೆಸರು ನೊಂದಾಯಿಸಿಕೊಂಡಿದ್ದಾರೆ. ಈ ತಿಂಗಳಲ್ಲಿ ಇದುವರೆಗೂ ನಮ್ಮ ಜಿಲ್ಲೆಯಿಂದ 2,12,000 ಗ್ರಾಹಕರಿಗೆ ರೂ.30 ಕೋಟಿ ಮೊತ್ತದ ವಿದ್ಯುತ್ ಬಿಲ್ಲನ್ನು ಉಚಿತವಾಗಿ ನೀಡಲಾಗಿದೆ. ಜೊತೆಗೆ ಗೃಹಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗೆ ಸದ್ಯದಲ್ಲೇ ಚಾಲನೆ ನೀಡಲಾಗುವುದು. ಮಂಡ್ಯ ಜಿಲ್ಲೆಯಲ್ಲಿ 4,77,561 ಅರ್ಹ ಕುಟುಂಬಗಳ ಪೈಕಿ 4,10,000 ಕುಟುಂಬದ ಯಜಮಾನಿಯರು ಹೆಸರು ನೊಂದಾಯಿಸಿಕೊಂಡಿದ್ದು, ಶೇ.87 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದರು.

ವೇದಿಕೆಯಲ್ಲಿ ಶಾಸಕ ಗಣಿಗ ರವಿಕುಮಾರ್, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್, ಎಸ್ಪಿ ಎನ್.ಯತೀಶ್, ಎಡಿಸಿ ಎಚ್.ಎಲ್.ನಾಗರಾಜ್, ಉಪವಿಭಾಗಾಧಿಕಾರಿ ಶಿವಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪತ್ನಿ ಕೊಂದು ಮಗನೊಂದಿಗೆ ಪರಾರಿಯಾದ ಪತಿರಾಯ

ನಾಗಮಂಗಲ, ಆ.16–ಪತಿರಾಯನೋರ್ವ ಪತ್ನಿಯನ್ನು ಕೊಂದು ಮಗುವಿನೊಂದಿಗೆ ಪರಾರಿಯಾದ ಘಟನೆ ನಾಗಮಂಗಲದ ಟಿ.ಬಿ.ಬಡಾವಣೆಯ ಮುಳುಕಟ್ಟೆ ರಸ್ತೆಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಮಧುಶ್ರೀ (24) ಪತಿಯಿಂದ ಹತ್ಯೆಯಾದ ವಳಾಗಿದ್ದು, ಈಕೆಯ ಪತಿ ಮಂಜುನಾಥ್ 4 ವರ್ಷದ ಮಗನೊಂದಿಗೆ ಪರಾರಿಯಾಗಿದ್ದಾನೆ.

ವಿವರ: ಇಲ್ಲಿನ ಗಿರಿಜ ಎಂಬುವರ ಪುತ್ರಿ ಮಧುಶ್ರೀ ಮತ್ತು ದೇವಲಾಪುರ ಹೋಬಳಿ ಕರಡಹಳ್ಳಿ ಗ್ರಾಮದ ಮಂಜುನಾಥ್ ಅವರ ಮದುವೆ 5 ವರ್ಷದ ಹಿಂದೆ ನಡೆದಿತ್ತು. ಈ ದಂಪತಿಗೆ 4 ವರ್ಷದ ಮಗನಿದ್ದಾನೆ. ದಂಪತಿಯು ಮುಳುಕಟ್ಟೆ ರಸ್ತೆಯಲ್ಲಿ ಮನೆ ಮಾಡಿಕೊಂಡಿದ್ದು, ಮಂಜುನಾಥ್ ಬೆಂಗಳೂರಿನಲ್ಲಿ ಫೋಟೋ ಎಡಿಟಿಂಗ್ ಕೆಲಸ ಮಾಡುತ್ತಾ, ವಾರಕ್ಕೊಮ್ಮೆ ಊರಿಗೆ ಬಂದು–ಹೋಗುತ್ತಿದ್ದ. ಇತ್ತೀಚೆಗೆ ಪತ್ನಿಯ ಮೇಲೆ ಅನುಮಾನಗೊಂಡಿದ್ದ ಈತ ಪದೇ ಪದೆ ಜಗಳವಾಡುತ್ತಿದ್ದ ಎನ್ನಲಾಗಿದ್ದು, ಒಮ್ಮೆ ಮಗ ಮನ್ವಿತ್‌ನನ್ನು ತನ್ನೊಂದಿಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿಬಿಟ್ಟಿದ್ದ. ಆ ವೇಳೆ ಮಧುಶ್ರೀ ಅವರು ಪೊಲೀಸರ ಮೊರೆ ಹೋಗಿದ್ದು, ಮಗು ತಾಯಿ ಜೊತೆಯಲ್ಲೇ ಇರಬೇಕು ಎಂದು ಪೊಲೀಸರು ಬುದ್ಧಿವಾದ ಹೇಳಿ ಮಗುವನ್ನು ಮಧುಶ್ರೀಯೊಂದಿಗೆ ಕಳುಹಿಸಿದ್ದರು.



ದಂಪತಿ ನಡುವೆ ಪದೇ ಪದೆ ಗಲಾಟೆ ಆಗುತ್ತಿದ್ದರೂ ಮಂಜುನಾಥ್ ವಾರಕ್ಕೊಮ್ಮೆ ಬರುತ್ತಿದ್ದ ಎಂದು ಹೇಳಲಾಗಿದ್ದು, ನಿನ್ನೆ ಊರಿಗೆ ಬಂದಿದ್ದ ಮಂಜುನಾಥ್, ಕಳೆದ ರಾತ್ರಿ ಪತ್ನಿಯನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿ ಮಗನೊಂದಿಗೆ ಪರಾರಿಯಾಗಿದ್ದಾನೆ. ಬುಧವಾರ ಮುಂಜಾನೆ ಮಧು ಎಂಬ ಯುವಕ ಮಧುಶ್ರೀ ಮನೆಗೆ ಹೋದಾಗ ಆಕೆ ರಕ್ತದ ಮಡುವಿನಲ್ಲಿ ಸತ್ತು ಬಿದ್ದಿರುವುದು ಕಂಡು ಬಂದಿದೆ. ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಮಧುಶ್ರೀಯ ಎದೆ, ಹೊಟ್ಟೆ ಹಾಗೂ ಪಕ್ಕೆ ಭಾಗಗಳಲ್ಲಿ ಚಾಕುವಿನಿಂದ ಇರಿದ ಗಾಯಗಳು ಕಂಡು ಬಂದಿವೆ.

ಘಟನಾ ಸ್ಥಳಕ್ಕೆ ಜಿಲ್ಲಾ ಎಸ್ಪಿ ಯತೀಶ್, ಡಿವೈಎಸ್‌ಪಿ ಲಕ್ಷ್ಮೀನಾರಾಯಣ ಪ್ರಸಾದ್, ಸರ್ಕಲ್ ಇನ್ಸ್‌ಪೆಕ್ಟರ್ ನಿರಂಜನ್, ಸಬ್ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಹಾಗೂ ಸಿಬ್ಬಂದಿ ವರ್ಗ ಭೇಟಿ ನೀಡಿದ್ದರು. ಈ ಸಂಬಂಧ ಮಂಜುನಾಥ್ ವಿರುದ್ಧ ನಾಗಮಂಗಲ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಜುಳಾ ನಿಧನ



ಪಾಂಡವಪುರ, ಆ.16– ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಹರಳಹಳ್ಳಿ ಕುಮಾರಸ್ವಾಮಿ ಅವರ ತಂಗಿ, ಶ್ರೀರಂಗಪಟ್ಟಣ ತಾಲೂಕಿನ ಕಡತನಾಳು ಗ್ರಾಮದ ನಿವಾಸಿ ಮಧು ಅವರ ಪತ್ನಿ ಮಂಜುಳ(45) ಮಂಗಳವಾರ ನಿಧನರಾದರು. ಬುಧವಾರ ಕಡತನಾಳು ಗ್ರಾಮದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಶಾಸಕ ರಮೇಶ್‌ಬಾಬು ಬಂಡೀಸಿದ್ದೇಗೌಡ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಹಲವು ಗಣ್ಯರು ಅಂತಿಮ ದರ್ಶನ ಪಡೆದರು.

ಮೃತರು ಪತಿ ಮಧು, ಸಹೋದರ ಪತ್ರಕರ್ತರ ಕುಮಾರಸ್ವಾಮಿ ಸೇರಿದಂತೆ ಹಲವು ಬಂಧುಗಳನ್ನು ಅಗಲಿದ್ದಾರೆ. ಬುಧವಾರ ಮಧ್ಯಾಹ್ನ ಗ್ರಾಮದ ಹೊರವಲಾಯದ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಯಿತು.



ಪಾಂಡವಪುರದ ಐಡಿಎಫ್‌ಸಿ ಭಾರತ್ ಲಿಮಿಟೆಡ್ ಕಾರ್ಖಾನೆಯ ಸಿಬ್ಬಂದಿ ಜಿ. ಕಾವ್ಯ ಅವರು ಸ್ವಾತಂತ್ರ್ಯೋತ್ಸವದ ಅಂಗವಾಗಿ ತ್ರಿವರ್ಣ ಧ್ವಜದೊಂದಿಗೆ ಕೊಠಡಿಯನ್ನು ಸಿಂಗರಿಸಿರುವುದು.

ಸ್ವಾತಂತ್ರ್ಯೋತ್ಸವಕ್ಕೆ ಶಾಸಕ ದರ್ಶನ್ ಗೈರು

ಸಾರ್ವಜನಿಕರ ಆಕ್ರೋಶ

ಪಾಂಡವಪುರ, ಆ.16– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ, ನಾಡಹಬ್ಬಗಳ ಆಚರಣ ಸಮಿತಿ ವತಿಯಿಂದ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಗೈರು ಹಾಜರಿಯಲ್ಲಿ ಮಂಗಳವಾರ ನಡೆಯಿತು. ಶಾಸಕರ ಗೈರು ಹಾಜರಿಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.



ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕಾಗಿತ್ತು. ಆದರೆ ಅವರು ಗೈರಾದ ಕಾರಣ ಉಪವಿಭಾಗಾಧಿಕಾರಿ ನಂದೀಶ್ ಅಧ್ಯಕ್ಷತೆ ವಹಿಸಿ, ರಾಷ್ಟ್ರಧ್ವಜಾರೋಹಣ ನೆರವೇರಿಸಿದರು.

ಶಾಸಕ ವಿರುದ್ಧ ಜನಾಕ್ರೋಶ: 77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸದೆ ಅಮೆರಿಕದಲ್ಲಿದ್ದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ನಡೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಮೇಲುಕೋಟೆ ಕ್ಷೇತ್ರದ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ಶಾಸಕರೊಬ್ಬರು ರಾಷ್ಟ್ರೀಯ ಹಬ್ಬವಾದ ಸ್ವಾತಂತ್ರ್ಯ ದಿನಾಚರಣೆಗೆ ಗೈರು ಹಾಜರಾಗುವ ಮೂಲಕ ನಾಡಹಬ್ಬಕ್ಕೆ ಅಗೌರವ ತೋರಿದ್ದಾರೆ. ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕರು ಭಾಗವಹಿಸಿ ದೇಶದ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುವುದು ಅವರ ಜವಾಬ್ದಾರಿಯಾಗಿದೆ. ರೈತರ ಹೆಸರಿನಲ್ಲಿ ಗೆದ್ದು ಬಂದಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಗೈರು ಹಾಜರಾಗುವ ಮೂಲಕ ರಾಷ್ಟ್ರೀಯ ಹಬ್ಬಕ್ಕೆ ಹಾಗೂ ಕ್ಷೇತ್ರದ ಜನರಿಗೆ ಅವಮಾನ ಮಾಡಿದ್ದಾರೆ ಎಂಬ ಚರ್ಚೆಗಳು ಸಾಮಾಜಿಕ ಜಾಲ ತಾಣದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದ್ದು ಶಾಸಕರ ವಿರುದ್ಧ ಜನರು ಆಕ್ರೋಶ ಹೊರಹಾಕಿದ್ದಾರೆ.

ಕ್ಷಮೆಯಾಚಿಸಿದ ದರ್ಶನ್ ಪುಟ್ಟಣ್ಣಯ್ಯ: ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮಾಚರಣೆಯಲ್ಲಿ ಭಾಗವಹಿಸಲು ಸಾಧ್ಯವಾಗದಕ್ಕಾಗಿ ಕ್ಷೇತ್ರದ ಜನತೆಯಲ್ಲಿ ಕ್ಷಮೆ ಕೋರುತ್ತೇನೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಕ್ಷಮೆಯಾಚಿಸಿದ್ದಾರೆ.

ಪಟ್ಟಣದ ಶಾಸಕ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಳ್ಳಬಾರದು ಎಂಬ ಉದ್ದೇಶ ನನ್ನದಲ್ಲ. ಅಮೆರಿಕದಲ್ಲಿದ್ದ ನಾನು ಬರಲು ಕೆಲವು ಗಂಟೆಗಳು ತಡವಾದ ಹಿನ್ನೆಲೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಶಾಸಕನಾಗಿ ನನ್ನ ಜವಾಬ್ದಾರಿಯಾಗಿದೆ. ಭಾಗವಹಿಸದಿರುವುದು ನನ್ನಿಂದ ತಪ್ಪಾಗಿದೆ ಅದಕ್ಕಾಗಿ ನಾನು ಕ್ಷೇತ್ರದ ಎಲ್ಲಾ ಜನತೆಯಲ್ಲಿ ಕ್ಷಮೆಕೋರುತ್ತೇನೆ, ಮುಂದೆ ಇಂತಹ ತಪ್ಪುಗಳು ನಡೆಯದಂತೆ ನೋಡಿಕೊಳ್ಳುತ್ತೇನೆ ಎಂದರು.

ಶ್ರೀ ಕಾಳಮ್ಮ ದೇವಾಲಯದಲ್ಲಿ ಹುಂಡಿ ಕಳವು

ಮಂಡ್ಯ, ಆ.16– ದೇವಾಲಯದ ಬೀಗ ಮುರಿದು ಒಳ ನುಗ್ಗಿ ಹುಂಡಿಯಲ್ಲಿದ್ದ ಲಕ್ಷಾಂತರ ರೂ ಹಣವನ್ನು ಕಳ್ಳರು ದೋಚಿರುವ ಘಟನೆ ಮಂಡ್ಯದ ಗಾಂಧಿನಗರದಲ್ಲಿರುವ ಶ್ರೀ ಕಾಳಮ್ಮ ದೇಗುಲದಲ್ಲಿ ಕಳೆದ ರಾತ್ರಿ ನಡೆದಿದೆ.

ನಗರದ ಗಾಂಧಿನಗರ 6ನೇ ಕ್ರಾಸ್‌ನಲ್ಲಿರುವ ಶ್ರೀ ಕಾಳಮ್ಮ ದೇವಾಲಯಕ್ಕೆ ಮಧ್ಯರಾತ್ರಿ ವೇಳೆ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ದೇವಾಲಯದ ಪ್ರಾಂಗಣದಲ್ಲಿದ್ದ ಹುಂಡಿ ಯನ್ನು ಪಕ್ಕಕ್ಕೆ ಹೊತ್ತೊಯ್ದು ಹೊಡೆದು ಹಾಕಿ ಅದರಲ್ಲಿದ್ದ ಹಣವನ್ನು ದೋಚಿದ್ದಾರೆ. ಹುಂಡಿಯಲ್ಲಿದ್ದ ನಾಣ್ಯಗಳನ್ನು ಅಲ್ಲೇ ಬಿಟ್ಟಿದ್ದು, ನೋಟುಗಳನ್ನೆಲ್ಲ ದೋಚಲಾಗಿದೆ. ಬುಧವಾರ ಬೆಳಗ್ಗೆ ಭಕ್ತರು ಹೋದ ವೇಳೆ ದೇವಾಲಯದ ಬಾಗಿಲ ಬೀಗ ಮುರಿದಿರುವುದು ಕಂಡುಬಂದಿದ್ದು, ಪರಿಶೀಲಿಸಿದಾಗ ಹುಂಡಿ ದೋಚಿರುವುದು ಬೆಳಕಿಗೆ ಬಂದಿದೆ. ದೇವಾಲಯದ ಉಸ್ತುವಾರಿ ಮುಖಂಡರ ಅಂದಾಜಿನಂತೆ 1.50 ಲಕ್ಷಕ್ಕೂ ಹೆಚ್ಚು ಹಣ ಹುಂಡಿಯಲ್ಲಿತ್ತು ಎನ್ನಲಾಗಿದ್ದು, ಈ ಸಂಬಂಧ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಗೆ ದೂರು ದಾಖಲಾಗಿದೆ.

ಒಂದನೇ ಪುಟದಿಂದ

ಆಪರೇಷನ್ ಹಸ್ತ!

ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಮುನಿರತ್ನ ಸೇರ್ಪಡೆಗೆ ಅಧ್ಯಕ್ಷರ ಸಹೋದರ ಹಾಗೂ ಸಂಸದ ಡಿ.ಕೆ.ಸುರೇಶ್ ಅವರ ವಿರೋಧವಿದೆ.

ಇವರೆಲ್ಲರ ಜತೆ ಸೌಹಾರ್ದಯುತವಾಗಿ ಮಾತುಕತೆ ನಡೆಸಿರುವ ಶಿವಕುಮಾರ್ ನಾವು ಮುಂದೆ ನೀಡುವ ಸೂಚನೆಯಂತೆ ನಡೆದುಕೊಳ್ಳಿ ಎಂದು ಹೇಳಿ ಕಳುಹಿಸಿದ್ದಾರಂತೆ.

ಬಿ.ಎಸ್.ಯಡಿಯೂರಪ್ಪ ಹಾಗೂ ಬೊಮ್ಮಾಯಿ ಆಡಳಿತದಲ್ಲಿ ಕೋಟ್ಯಾಂತರ ರೂ.ಗುತ್ತಿಗೆ ಪಡೆದು ಭಾರೀ ಅವ್ಯವಹಾರ ನಡೆದಿರುವುದನ್ನು ಸಿದ್ದರಾಮಯ್ಯ ಸರ್ಕಾರ ಪತ್ತೆ ಹಚ್ಚಿದೆ. ಇದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಮಾರಕವಾಗುವಂತೆ ಕೆಪಿಸಿಸಿ ಅಧ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಲೆ ಬೀಸಿದ್ದಾರೆ. ಕಳೆದ ಒಂದು ತಿಂಗಳಿನಿಂದ ಭ್ರಷ್ಟಾಚಾರ ಹಗರಣಗಳಿಗೆ ಸಂಬಂಧಿಸಿದ ಕಡತ ಪರಿಶೀಲಿಸಿ ಅದರಲ್ಲಿ ನಡೆದಿರುವ ಅವ್ಯವಹಾರ ಹಾಗೂ ಅದರ ರೂವಾರಿಗಳ ಜಾತಕ ತೆಗೆದಿದ್ದಾರೆ. ಕಡತ ತಮ್ಮ ಕೈ ಸೇರುತ್ತಿದ್ದಂತೆ ಬಿಜೆಪಿ ಆಡಳಿತದಲ್ಲಿ ನಡೆದಿರುವ ಕರ್ಮ ಕಾಂಡಗಳು ಹಾಗೂ ಅದರ ರೂವಾರಿಗಳನ್ನು ಸ್ವಾತಂತ್ರ್ಯ ದಿನಾಚರಣೆ ನಂತರ ಬಯಲು ಮಾಡುವುದಾಗಿ ಪದೇ ಪದೆ ಎಚ್ಚರಿಕೆ ನೀಡುತ್ತಾ ಬಂದಿದ್ದಾರೆ. ಅಷ್ಟೇ ಅಲ್ಲ, ಭ್ರಷ್ಟಾಚಾರದ ಕೆಲವು ತುಣುಕುಗಳನ್ನು ಮಾಧ್ಯಮಗಳ ಮುಂದೆ ಬಹಿರಂಗಪಡಿಸಿ, ರೂವಾರಿಗಳಿಗೆ ಸಂದೇಶ ತಲುಪುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಭ್ರಷ್ಟಾಚಾರ ಪ್ರಕರಣಗಳನ್ನು ಬಯಲಿಗೆಳೆದು ಪ್ರತಿಪಕ್ಷ ಬಿಜೆಪಿ ಬಣ್ಣ ಬಯಲು ಮಾಡುವಂತೆ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪೂರ್ಣ ಅಧಿಕಾರ ನೀಡಿದ್ದಾರೆ. ಇದಕ್ಕೆ ರಾಜ್ಯ ಉಸ್ತುವಾರಿ ನೋಡಿಕೊಳ್ಳುವ ಎಐಸಿಸಿಯ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ ಕೂಡ ಕೆಪಿಸಿಸಿ ಅಧ್ಯಕ್ಷರ ಬೆಂಬಲಕ್ಕೆ ನಿಂತಿದ್ದಾರೆ. ಕರ್ನಾಟಕದಿಂದ 20 ಲೋಕಸಭಾ ಸ್ಥಾನಗಳನ್ನು ಗೆಲ್ಲಲೇಬೇಕು ಎಂದು ಪಕ್ಷದ ಅಧಿನಾಯಕ ರಾಹುಲ್‌ಗಾಂಧಿ ಅವರು, ಸುರ್ಜೇವಾಲ, ಸಿದ್ದರಾಮಯ್ಯ ಹಾಗೂ ಶಿವಕುಮಾರ್‌ಗೆ ಟಾರ್ಗೆಟ್ ನೀಡಿದ್ದಾರೆ. ಈ ಗುರಿ ಮುಟ್ಟಲು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗಳಿಸಿದ ಮತಗಳು ಸಾಲದಾಗಿದೆ. ಚುನಾವಣೆಯಲ್ಲಿ ಗಳಿಸಿದ ಶೇಕಡವಾರು ಮತ ಪ್ರಮಾಣವನ್ನು ಶೇಕಡ ಮೂರರಿಂದ ನಾಲ್ಕರಷ್ಟು ಹೆಚ್ಚಿಸಿಕೊಳ್ಳುವ ಅಗತ್ಯವಿದೆ. ಇದಕ್ಕಾಗಿಯೇ ಬಿಜೆಪಿ ವರಿಷ್ಠರು ಅನುಸರಿಸುವ ಅಸ್ತ್ರಗಳನ್ನು ಶಿವಕುಮಾರ್ ಪ್ರತ್ಯಸ್ತ್ರವಾಗಿ ಬಳಸಿಕೊಂಡು ಯಶಸ್ವಿ ಹೆಜ್ಜೆ ಇಡುತ್ತಿದ್ದಾರೆ.

ಅನ್ನಭಾಗ್ಯಕ್ಕೆ ಆಂಧ್ರ, ತೆಲಂಗಾಣದ ಅಕ್ಕಿ

ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು,ಅರ್ಜಿ ಹಾಕಿದವರಿಗೆ ಆದ್ಯತೆ ಮೇಲೆ ಕೊಡಲಾಗುವುದು. ಪರಿಶೀಲನೆ ಮಾಡಿ ಕೊಡಲಾಗುವುದು. ಆರೋಗ್ಯ, ವೈದ್ಯಕೀಯ ವೆಚ್ಚ ಭರಿಸುವ ವಿಚಾರವಾಗಿ ಹೆಚ್ಚು ಅರ್ಜಿ ಸಲ್ಲಿಸುತ್ತಿದ್ದಾರೆ.

ಅಧಿಕಾರ ಬಿಡಬೇಕು ಎಂಬುದು ವೈಯಕ್ತಿಕ ಅಭಿಪ್ರಾಯ: ಲೋಕಸಭಾ ಚುನಾವಣೆಯಲ್ಲಿ ಯುವಕರಿಗೆ ಆದ್ಯತೆ ಕೊಡಬೇಕು. ಯುವಕರು ರಾಜಕೀಯದಲ್ಲಿ ಬೆಳೆಯಬೇಕು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಹೈಕಮಾಂಡ್ ಯಾವ ನಿರ್ಧಾರ ತೆಗೆದುಕೊಳ್ಳಲಿದೆ ನೋಡಬೇಕು. ಎರಡೂವರೆ ವರ್ಷ ಆದ ಮೇಲೆ ಮಂತ್ರಿಗಳ ಸ್ಥಾನ ಬಿಡಬೇಕು ಎಂಬ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಮ್ಮ ಮನೆಯಲ್ಲಿ ನಾವು ವಿಚಾರ ಮಾಡಿದ್ದೇವೆ. ಇದು ಕೂಡ ನನ್ನ ವೈಯಕ್ತಿಕ ವಿಚಾರ ಎಂದರು.

ರಾಜಕೀಯವಾಗಿ ಪಕ್ಷ ಬಲಪಡಿಸಬೇಕಾದರೆ ಎಲ್ಲರಿಗೂ ಅವಕಾಶ ಕೊಡಬೇಕು. ನಾನು ಬೇಕಾದರೆ ಬಿಟ್ಟುಕೊಡುತ್ತೇನೆ. ನನಗೇನು ಅಭ್ಯಂತರ ಇಲ್ಲ. 4–5 ಬಾರಿ ಶಾಸಕರಾದವರಿಗೂ ಇನ್ನೂ ಸಚಿವ ಸ್ಥಾನ ಸಿಕ್ಕಿಲ್ಲ. ಅಂತಹವರಿಗೂ ಅವಕಾಶ ಕೊಡಬೇಕು. ನಾನು ಕೇಂದ್ರದಲ್ಲಿ ಎರಡು ಬಾರಿ ಮಂತ್ರಿ ಆಗಿದ್ದೆ. ಕಾಂಗ್ರೆಸ್ ಸಭೆಯಲ್ಲಿ ನನ್ನ ಅಭಿಪ್ರಾಯ ಹೇಳಿದ್ದೆ ಎಂದು ಹೇಳಿದರು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಮುಂದಿನ ತೀರ್ಮಾನ ಹೈಕಮಾಂಡ್ ಮಾಡುತ್ತದೆ. ಸಿಎಂ,ಡಿಸಿಎಂ ವಿಚಾರವನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಅದರ ಬಗ್ಗೆ ನಾನು ಮಾತನಾಡಲ್ಲ. ಸಚಿವರು ಸ್ಥಾನ ಬಿಡಬೇಕು ಅನ್ನೋದು ನನ್ನ ಅಭಿಪ್ರಾಯ ಎಂದರು.

ವಿದ್ಯಾರ್ಥಿಗಳಿಗೆ ಮೊಟ್ಟೆ, ಬಾಳೆಹಣ್ಣು ವಿತರಣೆ

ಉದ್ಘಾಟನೆಯಾಗಲಿದೆ ಎಂದರು. ಈ ಹಿಂದೆ, ಯೋಜನೆಯನ್ನು 8ನೇ ತರಗತಿಯವರೆಗೆ ವಿಸ್ತರಿಸಲು ಯೋಜಿಸಲಾಗಿತ್ತು. ಇದೀಗ ಈ ಯೋಜನೆಯನ್ನು 10ನೇ ತರಗತಿವರೆಗೆ ವಿಸ್ತರಿಸುವ ನಿರ್ಧಾರ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ ಒದಗಿಸುವ ನಿಟ್ಟಿನಲ್ಲಿ ಈ ಯೋಜನೆ ಜಾರಿಗೊಳಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ. ಮಧ್ಯಾಹ್ನದ ಊಟದ ಜತೆಗೆ ಮೊಟ್ಟೆ, ಬಾಳೆಹಣ್ಣು ನೀಡಲಾಗುವುದು ಎಂದು ಮಧು ಬಂಗಾರಪ್ಪ ಅವರು ಹೇಳಿದ್ದಾರೆ.

ಈ ಹಿಂದೆ ರಾಜ್ಯ ಸರ್ಕಾರದ ಈ ನಿರ್ಧಾರ ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಈ ನಿರ್ಧಾರವು ಸಮಾಜದ ಒಂದು ವರ್ಗವನ್ನು ಕೆರಳಿಸಿತ್ತು. ಈ ಯೋಜನೆ ಶಾಲೆಗೆ ಹೋಗುವ ಮಕ್ಕಳಲ್ಲಿ ತಾರತಮ್ಯವನ್ನು ಉಂಟು ಮಾಡುತ್ತದೆ. ಹೀಗಾಗಿ ಶಾಲಾ ಆವರಣದಲ್ಲಿ ಮೊಟ್ಟೆಗಳನ್ನು ವಿತರಿಸಬಾರದು ಎಂದು ಒತ್ತಾಯಿಸಲಾಗಿತ್ತು.

ಮನೆ ಗೃಹ ಪ್ರವೇಶದ ಆಹ್ವಾನ ಪತ್ರಿಕೆ ನೀಡುವ ನೆಪದಲ್ಲಿ ಬಂದು ಚಿನ್ನಾಭರಣ ವ್ಯಾಪಾರಿಗೆ ಇರಿತ

● ಇಬ್ಬರು ದುಷ್ಕರ್ಮಿಗಳಿಂದ ದುಷ್ಕೃತ್ಯ ● ಆಭರಣದ ಅಂಗಡಿ ಮಾಲೀಕ, ಪತ್ನಿಗೆ ಗಾಯ ● ದಂಪತಿಯ ಮಗನ ಹತ್ಯೆಗೆ ಸಂಚು ಸಾಧ್ಯತೆ; ಶಂಕೆ

ಮೈಸೂರು, ಆ.16(ಸಿಎನ್)– ಗೃಹ ಪ್ರವೇಶಕ್ಕೆ ಆಹ್ವಾನ ಪತ್ರಿಕೆ ನೀಡುವ ನೆಪದಲ್ಲಿ ಬಂದು, ಚಿನ್ನದ ಅಂಗಡಿ ಮಾಲೀಕನನ್ನು ಚಾಕುವಿನಿಂದ ಇರಿದು ಗಾಯಗೊಳಿಸಿದ ಘಟನೆ ಹಾಡುಹಗಲೇ ಮೈಸೂರು ಹೊರವಲಯದ ಹೂಟಗಳ್ಳಿ ಕೆಹೆಚ್‌ಬಿ ಬಡಾವಣೆಯಲ್ಲಿ ನಡೆದಿದೆ.

ಹೂಟಗಳ್ಳಿಯಲ್ಲಿ ಜ್ಯುವೆಲರಿ ಶಾಪ್ ನಡೆಸುತ್ತಿರುವ ಬಾಬುರಾವ್(57) ಮತ್ತು ಅವರ ಪತ್ನಿ ಕಮಲಾಬಾಯಿ(52) ಇರಿತಕ್ಕೊಳಗಾದವರಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ಇಂದು ಮಧ್ಯಾಹ್ನ 12.30ರ ಸುಮಾರಿನಲ್ಲಿ ಓರ್ವ ಪುರುಷ ಹಾಗೂ ಮಹಿಳೆ ಇವರ ಮನೆಗೆ ಬಂದು ಕಾಲಿಂಗ್ ಬೆಲ್ ಮಾಡಿದ್ದಾರೆ. ಬಾಬುರಾವ್ ಬಾಗಿಲು ತೆರೆದಾಗ 'ನಿಮ್ಮ ಮಗ ಹರೀಶನಿಗೆ ಗೃಹ ಪ್ರವೇಶದ ಆಹ್ವಾನ ಪತ್ರಿಕೆ ಕೊಡಬೇಕು, ಅವನನ್ನು ಕರೆಯಿರಿ' ಎಂದು ಕೇಳಿದ್ದಾರೆ. ಮಗ ಮನೆಯಲ್ಲಿಲ್ಲ ಎಂದಾಗ ಕುಡಿಯಲು ನೀರು ಕೇಳಿದ್ದಾರೆ. ಬಾಬುರಾವ್ ನೀರು ತರಲು ಒಳಗೆ ಹೋದಾಗ, ದುಷ್ಕರ್ಮಿಗಳು ಕೂಡ ಮನೆಯೊಳಗೆ ಪ್ರವೇಶಿಸಿ, ಹರೀಶ ಎಲ್ಲಿ ಎಂದು ಮತ್ತೆ ಮತ್ತೆ ಕೇಳಿದ್ದಾರೆ. ಆತ ಮನೆಯಲ್ಲಿಲ್ಲ, ಆಹ್ವಾನ ಪತ್ರಿಕೆ ನಮಗೆ ಕೊಡಿ, ಅವನು ಬಂದಾಗ ಕೊಡುತ್ತೇವೆ ಎಂದು ಬಾಬುರಾವ್ ಹೇಳುತ್ತಿದ್ದಂತೆಯೇ ಕೆರಳಿದ ವ್ಯಕ್ತಿ, ನಮಗೆ ನೀವು ಬೇಡ, ನಿಮ್ಮ ಮಗ ಬೇಕು ಎಂದು ಅರಚುತ್ತಾ ಚಾಕು ತೆಗೆದು ಬಾಬುರಾವ್ ಹೊಟ್ಟೆ ಮತ್ತು ಕೈಗೆ ಇರಿದಿದ್ದಾನೆ. ಈ ವೇಳೆ ಬಿಡಿಸಲು ಬಂದ ಕಮಲಾಬಾಯಿ ಅವರ ಕೈಗೂ ಇರಿಯಲಾಗಿದೆ. ಈ ವೇಳೆ ಕಮಲಾಬಾಯಿ ಸಹಾಯಕ್ಕಾಗಿ ಕೂಗಾಡುತ್ತಾ ಮನೆಯಿಂದ ಹೊರ ಬಂದಾಗ ಜನರು ಜಮಾಯಿಸಬಹುದು ಎಂದು ಹೆದರಿದ ದುಷ್ಕರ್ಮಿಗಳು ಪಲಾಯನಗೈದಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ವಿಜಯನಗರ ಠಾಣೆಯ ಇನ್ಸ್‌ಪೆಕ್ಟರ್ ರವಿಶಂಕರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಮಾಹಿತಿ ಸಂಗ್ರಹಿಸಿದ್ದಾರೆ. ದುಷ್ಕರ್ಮಿಗಳು ಯಾರು ಎಂಬುದು ತಮಗೆ ಗೊತ್ತಿಲ್ಲ ಎಂದು ಬಾಬುರಾವ್ ಮತ್ತು ಅವರ ಪತ್ನಿ ಪೊಲೀಸರಿಗೆ ತಿಳಿಸಿದ್ದಾರೆ, ಆದರೆ, ನಾಲ್ಕೈದು ಬಾರಿ ನಮ್ಮ ಮಗ ಹರೀಶನನ್ನು ಕೇಳಿದರು. ಅವನು ಇಲ್ಲ ಎಂದಾಗ ಹಠಾತ್ತನೇ ಚಾಕುವಿನಿಂದ ಇರಿದರು ಎಂದು ದಂಪತಿ ಪೊಲೀಸರಿಗೆ ತಿಳಿಸಿದ್ದಾರೆ. ಇವರ ಅಂಗಡಿಯಿಂದ ಮೂರನೇ ಮನೆಯಲ್ಲೇ ಬಾಬುರಾವ್ ಕುಟುಂಬ ವಾಸಿಸುತ್ತಿದೆ. ಇವರ ಪುತ್ರ ಹರೀಶ್ ಕೂಡ ಅಂಗಡಿಯಲ್ಲಿ ತಂದೆಗೆ ಸಹಕರಿಸುತ್ತಿದ್ದ. ದುಷ್ಕರ್ಮಿಗಳು ಹರೀಶನನ್ನು ಕೊಲೆ ಮಾಡುವ ಉದ್ದೇಶದಿಂದ ಬಂದಿದ್ದು, ಆತ ಸಿಗದ ಕಾರಣ ಬಾಬುರಾವ್ ದಂಪತಿಗೆ ಇರಿದಿದ್ದಾರೆ. ಕಮಲಾಬಾಯಿ ಅವರು ಕೂಗಾಡುತ್ತಾ ಮನೆಯಿಂದ ಹೊರಗೆ ಬಂದಿದ್ದರಿಂದ ಬಾಬುರಾವ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ದುಷ್ಕರ್ಮಿಗಳು ದ್ವಿಚಕ್ರ ವಾಹನದಲ್ಲಿ ಬಂದಿದ್ದರು ಎಂದು ಹೇಳಲಾಗಿದ್ದು, ವಾಹನ ಯಾವುದು ಎಂಬುದು ಗೊತ್ತಾಗಿಲ್ಲ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಕೊಲೆಯತ್ನ ಪ್ರಕರಣ ದಾಖಲಾಗಿದ್ದು, ಬಾಬುರಾವ್ ಮನೆ ಸಂಪರ್ಕಿಸುವ ರಸ್ತೆಗಳಲ್ಲಿರುವ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸುತ್ತಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಸದ್ಯದಲ್ಲೇ 'ದಂಡಾಸ್ತ್ರ'

ರಸ್ತೆಯಲ್ಲಿ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡಿದರೆ 1000 ರೂ., ರಸ್ತೆಯುದ್ದಕ್ಕೂ ಆಹಾರ ಪೊಟ್ಟಣ, ಪ್ಲಾಸ್ಟಿಕ್ ಕವರ್, ನೀರಿನ ಬಾಟಲಿ ಸೇರಿದಂತೆ ಇನ್ನಿತರ ತ್ಯಾಜ್ಯ ಎಸೆದರೆ 500 ರೂ., ಬೆಟ್ಟದ ಮೇಲಿನ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಮಾರಾಟ ಮಾಡಿ ಮೊದಲ ಬಾರಿಗೆ ಸಿಕ್ಕಿ ಬಿದ್ದರೆ 2500 ರೂ, ಎರಡನೇ ಬಾರಿ ಸಿಕ್ಕಿ ಬಿದ್ದರೆ 5 ಸಾವಿರ, ಮೂರನೇ ಬಾರಿ ಸಿಕ್ಕಿ ಬಿದ್ದರೆ 10 ಸಾವಿರ ದಂಡ ವಿಧಿಸಿ, ಲೈಸನ್ಸ್ ರದ್ದು ಮಾಡಲು ಶಿಫಾರಸ್ಸು ಮಾಡಲು ನಿರ್ಧರಿಸಲಾಗಿದೆ.


ಬೆಟ್ಟದ ನಿವಾಸಿಗಳನ್ನು ಹೊರತುಪಡಿಸಿ, ರಾತ್ರಿ 10ರಿಂದ ಬೆಳಗ್ಗೆ 6 ಗಂಟೆವರೆಗೆ ಅನಧಿಕೃತವಾಗಿ ಪ್ರವೇಶಿಸುವ ಹೊರಗಿನ ಜನರಿಗೆ 2500 ರೂ., ಈ ವೇಳೆ ಮದ್ಯಪಾನ, ಧೂಮಪಾನ ಸೇರಿದಂತೆ ಇನ್ನಿತರ ಹಾನಿಕಾರಕ ವಸ್ತುಗಳನ್ನು ಹೊಂದಿದ್ದರೆ 5 ಸಾವಿರ ರೂ. ದಂಡ, ವನ್ಯಪ್ರಾಣಿಗಳಿಗೆ ಆಹಾರ ನೀಡುವುದು, ಉಪಟಳ ನೀಡುವವರಿಗೆ 1 ಸಾವಿರ ರೂ, ಇನ್ನಿತರ ವಿಧದಲ್ಲಿ ಅರಣ್ಯ ಸಂಪತ್ತಿಗೆ ಹಾನಿಯುಂಟು ಮಾಡುವವರಿಗೂ 1 ಸಾವಿರ ರೂ. ದಂಡ ವಿಧಿಸಲು ನಿರ್ಧರಿಸಲಾಗಿದೆ.

ಅರಣ್ಯ ಇಲಾಖೆಯ ಈ ನಿರ್ಧಾರದ ಆದೇಶದ ಪ್ರತಿಯನ್ನು ಅರಣ್ಯ ಇಲಾಖೆ ಮೈಸೂರು ವೃತ್ತದ ಸಿಎಫ್, ಪೊಲೀಸ್ ಆಯುಕ್ತರು, ಜಿ.ಪಂ ಸಿಇಓ, ಪಾಲಿಕೆ ಹಾಗೂ ಮುಡಾ ಆಯುಕ್ತರು, ತಾ.ಪಂ ಇಓ, ಚಾಮುಂಡೇಶ್ವರಿ ದೇವಾಲಯದ ಇಓ, ಬೆಟ್ಟದ ಗ್ರಾ.ಪಂ ಪಿಡಿಓ ಸೇರಿದಂತೆ ಇನ್ನಿತರರಿಗೆ ರವಾನಿಸಲಾಗಿದ್ದು, ದಂಡ ವಿಧಿಸಲು ಕಾರ್ಯಪಡೆ ಸಜ್ಜುಗೊಳಿಸಲು ಅರಣ್ಯ ಇಲಾಖೆ ಮುಂದಾಗಿದೆ.


ಸಂದೇಶ್‌ರಿಗೆ ಹುಟ್ಟುಹಬ್ಬದ ಸಂಭ್ರಮ...



ನೂರಾರು ಜನರಿಗೆ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು, ಸ್ವತಃ ಸಂದೇಶ್ ನಾಗರಾಜ್ ಅವರೇ ಅಭಿಮಾನಿಗಳಿಗೆ ಹಾಗೂ ಹಿತೈಷಿಗಳಿಗೆ ಊಟ ಬಡಿಸಿದರು. ಅವರಿಗೆ ಪುತ್ರ ಸಂದೇಶ್ ಎನ್. ಸಾಥ್ ನೀಡಿದರು.



ಸಂದೇಶ್ ನಾಗರಾಜ್ ಅವರನ್ನು ಅವರ ಪುತ್ರ ಸಂದೇಶ್ ಎನ್., ಪುತ್ರಿ ಶ್ರೀಮತಿ ಬೃಂದಾ ಜಯರಾಂ, ಸಂದೇಶ್‌ಸ್ವಾಮಿ ಅವರ ಪುತ್ರರಾದ ಸಾತ್ವಿಕ್, ಸಮಸ್ತ್ ಅಭಿನಂದಿಸಿ, ಶುಭಾಶಯ ಕೋರಿದರು.



ಸಂದೇಶ್ ನಾಗರಾಜ್ ಅವರ ಹೆಚ್.ಡಿ.ಕೋಟೆಯ ಅಭಿಮಾನಿಗಳು ಹಾಗೂ ಹಿತೈಷಿಗಳು, ಕಾಂಗ್ರೆಸ್ ಮುಖಂಡರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಇಂದು ಇಡೀ ದಿನ ಸಾವಿರಾರು ಮಂದಿ ಸಂದೇಶ್ ನಾಗರಾಜ್ ಅವರನ್ನು ಭೇಟಿಯಾಗಿ ಅಭಿನಂದಿಸಿದರು. ಅವರ ಮನೆ ಹಾಗೂ ಹೋಟೇಲ್ ಬಳಿ ಭಾರೀ ಸಂಖ್ಯೆಯಲ್ಲಿ ಅಭಿಮಾನಿಗಳು ಹಾಗೂ ಹಿತೈಷಿಗಳು ನೆರೆದಿದ್ದು, ನೆಚ್ಚಿನ ನಾಯಕನಿಗೆ ಶುಭ ಕೋರಿದರು.







ಅಹಿಂಸಾತ್ಮಕ ಹೋರಾಟ ವಿಶ್ವದ ಇತಿಹಾಸದಲ್ಲೇ ಮಾದರಿ

ಮೈಸೂರಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ; ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಧ್ವಜಾರೋಹಣ



ಮೈಸೂರು, ಆ.16(ಎಂಟಿವೈ)- ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಜಿಲ್ಲಾಡಳಿತ ವತಿಯಿಂದ ಆಯೋಜಿಸಿದ್ದ 77ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಸಡಗರ, ಸಂಭ್ರಮದೊಂದಿಗೆ ಆಚರಿಸಲಾಯಿತು.

ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ ನಡೆದ ಅಹಿಂಸಾತ್ಮಕ ಹೋರಾಟ ವಿಶ್ವದ ಇತಿಹಾಸದಲ್ಲೇ ಮಾದರಿಯಾಗಿದೆ. ಯಾವುದೇ ರಕ್ತಪಾತವಿಲ್ಲದೆ, ಮದ್ದುಗುಂಡುಗಳ ಕಾಳಗವಿಲ್ಲದೆ ಸತ್ಯ, ಅಹಿಂಸೆ, ಸತ್ಯಾಗ್ರಹದಂತಹ ಅಸ್ತ್ರಗಳ ಮೂಲಕ ಬ್ರಿಟಿಷರನ್ನು ದೇಶ ಬಿಟ್ಟು ಹೋಗುವಂತೆ ಮಾಡಿದ ವಿನೂತನ ಹೋರಾಟವಿದು. ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನಗೈದವರನ್ನು ನಾವು ಸ್ಮರಿಸಿಕೊಳ್ಳಬೇಕು. ದೇಶಪ್ರೇಮ ಕೇವಲ ಸ್ವಾತಂತ್ರ್ಯ ದಿನಾಚರಣೆಗಷ್ಟೇ ಸೀಮಿತಗೊಳ್ಳಬಾರದು. ಪ್ರತಿದಿನ, ಪ್ರತಿಕ್ಷಣವೂ ದೇಶಭಕ್ತಿ ಎಂಬುದು ನಮ್ಮಲ್ಲಿ ರಕ್ತಗತವಾಗಿರಬೇಕು. ಭಾಷೆ, ಧರ್ಮ, ಸಂಸ್ಕೃತಿಯನ್ನು ಮೀರಿ ಮನುಷ್ಯರೆಲ್ಲ ಒಂದೇ ಎಂಬ ಭಾವದಲ್ಲಿ ನಾವೆಲ್ಲ ಒಂದಾಗಬೇಕು. ಆ ಮೂಲಕ ದೇಶದ ಏಳಿಗೆಗೆ ಶ್ರಮಿಸಬೇಕು ಎಂದರು. ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾತ್ರ ಅಭೂತಪೂರ್ವವಾದುದು. ಬ್ರಿಟಿಷರ ಕಾನೂನುಗಳ ವಿರುದ್ಧ ಹೋರಾಡಿದ ಹಲಗಲಿಯ ಬೇಡವೀರರು, ಬೈಲಹೊಂಗಲದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ವೀರರಾಣಿ ಕಿತ್ತೂರು ಚೆನ್ನಮ್ಮ, ಬೂದಿ ಬಸಪ್ಪ ನಾಯಕ, ಸುರಪುರದ ವೆಂಕಟಪ್ಪ ನಾಯಕ, 'ಕರ್ನಾಟಕದ ಸಿಂಹ' ಗಂಗಾಧರರಾವ್ ದೇಶಪಾಂಡೆ ಸೇರಿದಂತೆ ಅನೇಕ ಧೀರ ಹೋರಾಟಗಾರರ ಬಲಿದಾನವನ್ನು ನಾವು ಸ್ಮರಿಸಬೇಕು ಎಂದರು. ನಮ್ಮದು ಜನಪರ ಸರ್ಕಾರ, ನಾಡಿನ ಜನತೆಯ ಶ್ರೇಯೋಭಿವೃದ್ಧಿಯೇ ನಮ್ಮ ಆದ್ಯ ಕರ್ತವ್ಯ. ಚುನಾವಣಾ ಪ್ರಣಾಳಿಕೆಯಲ್ಲಿ ನಾಡಿನ ಜನತೆಗೆ ನೀಡಿರುವ ವಚನದಂತೆ ಸಮೃದ್ಧ ಕರ್ನಾಟಕವನ್ನು ನಿರ್ಮಿಸಲು ಬದ್ಧರಾಗಿದ್ದೇವೆ. ಹಲವು ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದಿದ್ದೇವೆ. ಈಗಾಗಲೇ ಶಕ್ತಿ ಯೋಜನೆ, ಅನ್ನಭಾಗ್ಯ ಹಾಗೂ ಗೃಹಜ್ಯೋತಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಪ್ರಕ್ರಿಯೆ ನಡೆಯುತ್ತಿದ್ದು, ಯುವ ನಿಧಿ ಯೋಜನೆಯನ್ನೂ ಶೀಘ್ರದಲ್ಲೇ ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಮೈಸೂರು ಮಲ್ಲಿಗೆ, ನಂಜನಗೂಡು ರಸಬಾಳೆ ಹಾಗೂ ಮೈಸೂರು ವೀಳ್ಯದೆಲೆಗಳು ವಿಶೇಷ ಮಾನ್ಯತೆ ಪಡೆದಿವೆ. ಇವುಗಳ ಉತ್ಪಾದನೆ, ಸಂಶೋಧನೆ, ಮಾರುಕಟ್ಟೆ ಮತ್ತು ಬ್ರಾಂಡಿಂಗ್ ಉತ್ತೇಜಿಸಲು ನೂತನ ಕಾರ್ಯಕ್ರಮಗಳನ್ನು ರೂಪಿಸುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಜಿಲ್ಲೆಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಚಿತ್ರನಗರಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು. ಮೈಸೂರಲ್ಲಿ ಗುಂಪು ವಸತಿ ಯೋಜನೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದ್ದು, ವಿಜಯನಗರ 4ನೇ ಹಂತದ 2ನೇ ಘಟ್ಟದಲ್ಲಿ ಮೊದಲ ಹಂತದಲ್ಲಿ 12 ಬಹುಮಹಡಿ ಕಟ್ಟಡದಲ್ಲಿ 560 ಮನೆಗಳನ್ನು ನಿರ್ಮಿಸಲಾಗುವುದು. ನಗರದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಹೊರ ಪರಿಧಿ ರಸ್ತೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಒಟ್ಟು 73.25 ಕಿ.ಮೀ. ಉದ್ದದ ಹೊರ ಪರಿಧಿ ರಸ್ತೆ ನಿರ್ಮಿಸಲಾಗುವುದು ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ: ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತದ ವತಿಯಿಂದ ಹೋರಾಟಗಾರರಾದ ವೈ.ಸಿ.ರೇವಣ್ಣ, ಎಂ.ಬಿ. ಹಾಲೇಗೌಡ, ಸಿ.ಆರ್.ರಂಗಶೆಟ್ಟಿ, ಡಾ. ಎಂ.ಸೋಮಶೇಖರಯ್ಯ, ಸ್ವಾತಂತ್ರ್ಯ ಹೋರಾಟಗಾರರ ಪತ್ನಿಯರಾದ ವೇದಾಂಬ, ಗಿರಿಜಾ, ನಾಗರತ್ನಮ್ಮ, ವಿಮಲಮ್ಮ, ಎಂ. ಪ್ರೇಮಾವತಿ ಹಾಗೂ ಮಾಣಿಕ್ಯ ಅವರನ್ನು ಸನ್ಮಾನಿಸಲಾಯಿತು.

ಗಮನ ಸೆಳೆದ ಆಕರ್ಷಕ ಪಥ ಸಂಚಲನ: ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಆಕರ್ಷಕ ಪಥಸಂಚಲನ ಜರುಗಿತು. ನಗರ ಪೊಲೀಸ್, ಸಶಸ್ತ್ರ ಮೀಸಲು ಪಡೆ, ಜಿಲ್ಲಾ ಪೊಲೀಸ್, ಸಂಚಾರ ಪೊಲೀಸ್, ಮಹಿಳಾ ಪೊಲೀಸ್, ಕೆಎಸ್ಆರ್‌ಪಿ, ಅಬಕಾರಿ, ಅಗ್ನಿಶಾಮಕ ದಳ, ಎನ್‌ಸಿಸಿ, ಸ್ಕೌಟ್ ಅಂಡ್ ಗೈಡ್ಸ್, ಸೇವಾದಳ, ಶಾಲಾ ವಿದ್ಯಾರ್ಥಿಗಳು ಸೇರಿದಂತೆ 23 ತಂಡಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು. ಪೊಲೀಸ್ ಬ್ಯಾಂಡ್ ವಾದನಕ್ಕೆ ಅನುಗುಣವಾಗಿ ಹೆಜ್ಜೆ ಹಾಕಿ ಗಮನ ಸೆಳೆದರು. ಪಥ ಸಂಚಲನದಲ್ಲಿ ಪಾಲ್ಗೊಂಡ ತಂಡಗಳಿಗೆ ಮೂರು ವಿಭಾಗದಲ್ಲಿ ಬಹುಮಾನ ವಿತರಿಸಲಾಯಿತು. ಸಶಸ್ತ್ರ ವಿಭಾಗದಲ್ಲಿ ನಗರ ಸಶಸ್ತ್ರ ಮೀಸಲು ಪಡೆ ಪ್ರಥಮ, ಕೆಎಸ್ಆರ್‌ಪಿ ದ್ವಿತೀಯ ನಗರ ನಾಗರಿಕ ಪೊಲೀಸ್ ತೃತೀಯ, ಶಸ್ತ್ರರಹಿತ ವಿಭಾಗದಲ್ಲಿ ಎನ್‌ಸಿಸಿ ಪ್ರಥಮ, ಅಬಕಾರಿ ದ್ವಿತೀಯ, ಅಗ್ನಿಶಾಮಕ ದಳ ತೃತೀಯ, ಶಾಲಾ ವಿಭಾಗದಲ್ಲಿ ಪೊಲೀಸ್ ಪಬ್ಲಿಕ್ ಸ್ಕೂಲ್ ಬಾಲಕಿಯರ ತಂಡ ಪ್ರಥಮ, ಪೊಲೀಸ್ ಪಬ್ಲಿಕ್ ಸ್ಕೂಲ್ ಬಾಲಕರ ತಂಡ ದ್ವಿತೀಯ, ಭಾರತ ಸೇವಾದಳ ಬಾಲಕರ ತಂಡ ತೃತೀಯ ಬಹುಮಾನ ಪಡೆಯಿತು.

ದೇಶಭಕ್ತಿ ಮೂಡಿಸಿದ ಸಾಂಸ್ಕೃತಿಕ ಕಾರ್ಯಕ್ರಮ: ಧ್ವಜಾರೋಹಣ ಹಾಗೂ ಪಥ ಸಂಚಲನ ನೆರವೇರಿದ ಬಳಿಕ ವಿವಿಧ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಈ ಬಾರಿ 1700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೂರು ಗೀತೆಗಳಿಗೆ ಪ್ರತ್ಯೇಕವಾಗಿ ನೃತ್ಯ ಪ್ರದರ್ಶಿಸುವ ಮೂಲಕ ಗಮನ ಸೆಳೆದರು. ಸೇಂಟ್ ಆನ್ಸ್ ಶಾಲೆಯ 700 ಮಕ್ಕಳು ಹಾಗೂ ಸೇಂಟ್ ಮಥಾಯಿಸ್ ಶಾಲೆಯ 500 ಮಕ್ಕಳು ದೇಶಭಕ್ತಿ ಗೀತೆಗೆ ಪ್ರತ್ಯೇಕವಾಗಿ ನೃತ್ಯ ಪ್ರದರ್ಶಿಸಿದರು. ಬಳಿಕ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಶಾಲೆಯ 300 ವಿದ್ಯಾರ್ಥಿಗಳು ಹಾಗೂ ಕೆಪಿ ಕಾನ್ವೆಂಟ್‌ನ 200 ವಿದ್ಯಾರ್ಥಿಗಳು ಒಂದುಗೂಡಿ ಸಂಗೊಳ್ಳಿ ರಾಯಣ್ಣನ ಗೀತೆಗೆ ನೃತ್ಯ ಪ್ರದರ್ಶಿಸಿದರಲ್ಲದೆ, ಸಂಗೊಳ್ಳಿ ರಾಯಣ್ಣನ ಪರಾಕ್ರಮದ ಬಗ್ಗೆ ಕೂಡ ಬೆಳಕು ಚೆಲ್ಲುವಂತಹ ಪ್ರಯತ್ನ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹಾಗೂ ಇತರರು ಇದ್ದರು.

ಬಿಸಿಲಿನ ತಾಪಕ್ಕೆ ಸಚಿವರಿಗೆ ತಲೆಸುತ್ತು



ಧ್ವಜಾರೋಹಣ ನೆರವೇರಿಸಿದ ಬಳಿಕ ಸುದೀರ್ಘ ಭಾಷಣ ಮಾಡುತ್ತಿದ್ದ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಸಿಲಿನ ತಾಪಕ್ಕೆ ಜರ್ಜರಿತರಾಗಿ ಅಸ್ವಸ್ಥಗೊಂಡರು. 26 ಪುಟಗಳ ಭಾಷಣ ಓದುತ್ತಿದ್ದ ಸಚಿವರು ಭಾಷಣ ಮಾಡುತ್ತಿದ್ದ ವೇಳೆಯೇ ಬಳಲಿ, ಕುಸಿದು ಬೀಳುವ ಹಂತಕ್ಕೆ ತಲುಪಿಸಿದರು. ಲಿಖಿತ ಭಾಷಣ ಓದುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಸುಸ್ತಾಗಿ ಬೀಳುವುದರಿಂದ ತಪ್ಪಿಸಿಕೊಳ್ಳಲು ಪೋಡಿಯಂ ಅನ್ನು ಗಟ್ಟಿಯಾಗಿ ಹಿಡಿದುಕೊಂಡರು. ಪಕ್ಕದಲ್ಲೇ ನಿಂತಿದ್ದ ಡಾ.ಕೆ.ವಿ.ರಾಜೇಂದ್ರ, ಪೊಲೀಸ್ ಆಯುಕ್ತ ರಮೇಶ್, ಡಿಸಿಪಿ ಮುತ್ತುರಾಜ್ ತಕ್ಷಣವೇ ಸಚಿವರ ತೋಳು ಹಿಡಿದುಕೊಂಡು ಕುರ್ಚಿಯಲ್ಲಿ ಕೂರಿಸಿ ಉಪಚರಿಸಿದರು. ಬಳಿಕ ಸಹಾಯಕರು ಸಚಿವರಿಗೆ ಚಾಕಲೇಟ್‌ವೊಂದನ್ನು ನೀಡಿದರು. ಕೆಲ ಸಮಯದ ನಂತರ ಸುಧಾರಿಸಿಕೊಂಡ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕೊನೆಯ ಪುಟವನ್ನು ಓದಿ ಭಾಷಣ ಮುಕ್ತಾಯಗೊಳಿಸಿದರು. ಬಳಿಕ ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಿದರು. ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮಹದೇವಪ್ಪ, ಭಾಷಣ ಓದುವಾಗ ಸ್ವಲ್ಪ ಸುಸ್ತಾಯ್ತು, ಬಿಸಿಲು ಹೆಚ್ಚಿದ್ದ ಹಿನ್ನೆಲೆಯಲ್ಲಿ ಕಣ್ಣು ಮಂಜು ಬಂದ ರೀತಿ ಆಯಿತು. ಯಾರೂ ಭಯ ಪಡುವ ಅಗತ್ಯವಿಲ್ಲ. ನನಗೆ ಈ ಹಿಂದೆ ಈ ರೀತಿ ಆಗಿರಲಿಲ್ಲ. ನಾನು ಸ್ವಾಭಾವಿಕವಾಗಿ ಭಾಷಣ ಮಾಡುತ್ತೇನೆ. ಆದರೆ, ಸ್ವಾತಂತ್ರ್ಯ ದಿನಾಚರಣೆಯಾದ ಹಿನ್ನೆಲೆಯಲ್ಲಿ ಬರೆದು ಕೊಟ್ಟ ಭಾಷಣವನ್ನು ಓದಬೇಕಾಯಿತು. ಈಗ ನಾರ್ಮಲ್ ಆಗಿ ಇದ್ದೇನೆ. ನನಗೆ ಮಧುಮೇಹ, ರಕ್ತದೊತ್ತಡದಂತಹ ಸಮಸ್ಯೆಗಳು ಇಲ್ಲ ಎಂದು ಸ್ಪಷ್ಟನೆ ನೀಡಿದರು.

ಮನುಷ್ಯನ ದೇಹ ಚೆನ್ನಾಗಿದ್ದರೆ ದೇಶ ಚೆನ್ನಾಗಿರುತ್ತೆ

ಎಂಎಲ್‌ಸಿ ಮಂಜೇಗೌಡ ಅಭಿಮತ



ಮೈಸೂರು:ದೇಶದ ಪ್ರತಿಯೊಬ್ಬರ ಆರೋಗ್ಯ ಚೆನ್ನಾಗಿದ್ದರೆ ದೇಶವು ಚೆನ್ನಾಗಿ ಸುಭದ್ರವಾಗಿರುತ್ತದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ನಗರದ ದಿ ಕಾಸ್ಮೋಪಾಲಿಟನ್ ಕ್ಲಬ್ ವತಿಯಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ 'ವಾಕಥಾನ್' ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ಕಲುಷಿತ ವಾತಾವರಣದಲ್ಲಿ ಮನುಷ್ಯ ಆರೋಗ್ಯವಾಗಿರಬೇಕಾದರೆ ಪ್ರತಿನಿತ್ಯ 1 ಗಂಟೆಯಾದರು ನಡೆಯಬೇಕು. ಮಿತ ಆಹಾರ ಬಳಸಿದರೆ ದೇಹಕ್ಕೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು ಎಂದ ಅವರು, ನಮಗೆ ಸ್ವಾತಂತ್ರ್ಯಬಂದು 77 ವರ್ಷವಾಗಿದೆ. ಬ್ರಿಟಿಷರ ಕಪಿಮುಷ್ಠಿಯಿಂದ ನಮ್ಮನ್ನು ಬಿಡುಗಡೆಗೊಳಿಸಲು ಹೋರಾಟ, ಬಲಿದಾನ, ತ್ಯಾಗ, ಸತ್ಯಾಗ್ರಹ, ಧರಣಿ ಮಾಡಿರುವ ಹಿರಿಯರನ್ನು ನಾವು ಇಂದು ಸ್ಮರಿಸಬೇಕಾಗಿದೆ. ಸ್ವಾತಂತ್ರ್ಯದ ನಂತರದಲ್ಲಿ ಹಸಿವು, ಬಡತನ, ನಿರುದ್ಯೋಗ, ಭ್ರಷ್ಟಾಚಾರವನ್ನು ತೊಲಗಿಸಲು ಸಂಕಲ್ಪ ಮಾಡಬೇಕಾಗಿದೆ. ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ ಸ್ವಾವಲಂಬಿ ಭಾರತವನ್ನು ಮಾಡಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಕ್ಲಬ್‌ನ ಅಧ್ಯಕ್ಷರು ವಿ.ಗಿರೀಶ್‌ಗೌಡ, ಉಪಾಧ್ಯಕ್ಷ ಹೆಚ್.ಎನ್. ಜಯಪಾಲ್, ಕಾರ್ಯದರ್ಶಿ ವಿ.ಟಿ. ಶೆಟ್ಟಿ, ಖಜಾಂಚಿ ಜಿ. ಸಂಜಯ್ ಹಾಗೂ ಕ್ಲಬ್ಬಿನ ಸದಸ್ಯರು ಹಾಜರಿದ್ದರು.



ಮೈಸೂರಿನ ಶ್ರೀನಗರದಲ್ಲಿ ಸ್ವಾತಂತ್ರ್ಯ ದಿನವನ್ನು ಸ್ಥಳೀಯ ನಿವಾಸಿಗಳು ಸಂಭ್ರಮದಿಂದ ಆಚರಿಸಿದರು. ನಿವೃತ್ತ ಯೋಧ ನವೀನ್ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸವರಾಜ್, ಕಾರ್ಯದರ್ಶಿ ನಿರ್ಮಲ ವಿಶ್ವೇಶ್ವರಯ್ಯ, ಸ್ಥಳೀಯರಾದ ಹೇಮಾ ಶಿವಕುಮಾರ್, ಶೈಲಜಾ ನಾಗೇಂದ್ರಪ್ಪ, ಬೇಕರಿ ಮಂಜುನಾಥ, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಬಿ.ಎನ್.ವೆಂಕಟಕೃಷ್ಣ ಹಾಗೂ ಶ್ರೀನಗರದ ನಿವಾಸಿಗಳು ಪಾಲ್ಗೊಂಡಿದ್ದರು.

ತುಮಕೂರು ವಿದ್ಯಾರ್ಥಿ ಸಮ್ಮೇಳನಕ್ಕೆ ಸಿದ್ಧತೆ

ಮೈಸೂರು,ಆ.16(ಎಂಟಿವೈ)- ತುಮಕೂರಿನಲ್ಲಿ ಸೆ.1ರಿಂದ 3ರವರೆಗೆ ನಡೆಯಲಿರುವ ಎಐಡಿಎಸ್‌ಓ ಸಂಘಟನೆಯ 8ನೇ ರಾಜ್ಯಮಟ್ಟದ ವಿದ್ಯಾರ್ಥಿ ಸಮ್ಮೇಳನದಲ್ಲಿ 10 ಸಾವಿರ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದು, ವಿದ್ಯಾರ್ಥಿಗಳ ಸಮಸ್ಯೆ ಈಡೇರಿಕೆ ಬಗ್ಗೆ ಸರ್ಕಾರಕ್ಕೆ ಆಗ್ರಹಿಸಲಾಗುತ್ತದೆ. ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಬಿ.ಜೆ.ಸುಭಾಷ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ಸಂಘಟನೆ ಕಳೆದ ಐದು ದಶಕಗಳಿಂದಲೂ ಚಳವಳಿಗಳನ್ನು ಬೆಳೆಸುತ್ತ ಬಂದಿದೆ. ಶುಲ್ಕ ವಿರೋಧಿ ಚಳವಳಿ, ಹಾಸ್ಟೆಲ್ ಚಳವಳಿ, ಸರ್ಕಾರಿ ಶಾಲೆಗಳ ಉಳಿವಿಗಾಗಿ ಹೋರಾಟ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಚರ್ಚಿಸಲಾಗುತ್ತದೆ ಎಂದರು. ಇದೇ ವೇಳೆ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ಬಸ್‌ಪಾಸ್ ನೀಡಬೇಕು. ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ಬೆಳೆಸಬೇಕು. ಪಠ್ಯಕ್ರಮದ ಮೂಲಕ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮ ನಿರಪೇಕ್ಷಿತ ವಾತಾವರಣ ರಕ್ಷಿಸಬೇಕು. ವಿದ್ಯಾರ್ಥಿವೇತನ ಮತ್ತು ಹಾಸ್ಟೆಲ್ ಸೌಲಭ್ಯ ಖಾತ್ರಿಗೊಳಿಸಬೇಕು. ಎನ್‌ಇಪಿಯ ಹೇರಿಕೆ ಕೈಬಿಡಬೇಕು. ಸ್ವಯಂ ಹಣಕಾಸು ಸಂಸ್ಥೆಗಳನ್ನು ನಿಲ್ಲಿಸಿ, ತಾರತಮ್ಯವಿಲ್ಲದೇ ಎಲ್ಲ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಬೇಕು. ಅತಿಥಿ ಶಿಕ್ಷಣ ಹಕ್ಕುಗಳನ್ನು ರಕ್ಷಿಸಬೇಕು ಎಂದು ಒತ್ತಾಯಿಸುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ, ನಿತಿನ್ ಹಾಗೂ ಪುಷ್ಪಾ ಇದ್ದರು.

ಮೈಸೂರು ಜೈಲಿನಿಂದ 7 ಮಂದಿ ಅಲ್ಪಾವಧಿ ಶಿಕ್ಷಾ ಬಂಧಿಗಳ ಬಿಡುಗಡೆ



ಮೈಸೂರು, ಆ. 16(ಆರ್‌ಕೆ)- 77ನೇ ಸ್ವಾತಂತ್ರ್ಯ ದಿನಾಚರಣೆಯ ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಶೇ. 66ರಷ್ಟು ಶಿಕ್ಷೆ ಪೂರೈಸಿದ 7 ಮಂದಿ ಅಲ್ಪಾವಧಿ ಶಿಕ್ಷಾ ಬಂಧಿಗಳನ್ನು ಆಗಸ್ಟ್ 15ರಂದು ಬಿಡುಗಡೆಗೊಳಿಸಲಾಯಿತು.

ಆಗಸ್ಟ್ 11ರಂದು ಸರ್ಕಾರ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್ ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಶಿಕ್ಷಾ ಬಂಧಿಗಳನ್ನು ಬಿಡುಗಡೆ ಮಾಡಿದರು.

ಹಾಸನ ಜಿಲ್ಲೆ, ಸಕಲೇಶಪುರ ತಾಲೂಕಿನ ಅರಕೆರೆ ಹಳ್ಳಿಯ ರಂಗಯ್ಯ, ಕೊಡಗು ಜಿಲ್ಲೆ ಸೋಮವಾರಪೇಟೆ ತಾಲೂಕಿನ ಬಾಳೆಹುಂಡಿ ಗ್ರಾಮದ ಚಂದ್ರ ಅಲಿಯಾಸ್ ಮರಿ, ವಿರಾಜಪೇಟೆ ತಾಲೂಕಿನ ಅರಮೇರಿಹಳ್ಳಿಯ ಪೊಯಾತಿರ ಎಂ. ಕಾಳಪ್ಪ, ಮೈಸೂರು ತಾಲೂಕು, ಹೆಚ್.ಡಿ.ಕೋಟೆ ತಾಲೂಕಿನ ವಡ್ಡರಪಾಳ್ಯಹಳ್ಳಿ ಗ್ರಾಮದ ಗುರುಸ್ವಾಮಿ, ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ ನೀಲಕಂಠನಹಳ್ಳಿ ಗ್ರಾಮದ ಕೆ. ಪ್ರಸನ್ನ ಹಾಗೂ ಚಾಮರಾಜನಗರ ತಾಲೂಕಿನ ಸಿಂಗನಪುರ ನಿವಾಸಿ ನಾಗರಾಜು ಜೈಲಿನಿಂದ ಬಿಡುಗಡೆಯಾದವರು.

ನಾಳೆ ಕನ್ನಡವೇ ಸತ್ಯ ಕನ್ನಡವೇ ನಿತ್ಯ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು,ಆ.16(ಎಂಟಿವೈ)- ಮೈಸೂರಿನ ಜನಚೈತನ್ಯ ಫೌಂಡೇಷನ್ ವತಿಯಿಂದ ಆ.18ರಂದು ಸಂಜೆ 4.40ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಭಾವಗೀತೆ, ಜನಪದ ಗೀತೆ ಹಾಗೂ ಭಕ್ತಿಗೀತೆಗಳ 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಟಿ.ಸುದರ್ಶನ್, ಮನೋವಿಜ್ಞಾನಿ ಡಾ.ರೇಖಾಮನಃಶಾಂತಿ, ಪ್ರಸೂತಿ ತಜ್ಞೆ ಡಾ.ರೇಖಾ ಅರುಣ್ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಗಾಯಕ ಅಮ್ಮ ರಾಮಚಂದ್ರ ಆಗಮಿಸಲಿದ್ದಾರೆ ಎಂದರು. ಗಾಯಕರಾದ ಡಾ. ರೇಖಾ ಅರುಣ್, ಗುರುರಾಜ್, ಉಮೇಶ್, ಸತ್ಯವತಿ, ತಿರುಮಲೇಶ್, ಎನ್. ಲೋಕೇಶ್ ಹಾಗೂ ಗೌರಿ ಓಸ್ವಾಲ್ ಹಾಗೂ ಇನ್ನಿತರರು ವಿವಿಧ ಗೀತೆಗಳನ್ನು ಹಾಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಎಂ.ಪುಟ್ಟಸ್ವಾಮಿ, ಉಮೇಶ್, ಶಿವಕುಮಾರ್, ಸತ್ಯವತಿ ಇದ್ದರು.



ಮೈಸೂರಿನ ಅಗ್ರಹಾರದಲ್ಲಿ ಜೈ ಭಾರತ್ ಸ್ನೇಹ ಬಳಗ ಮತ್ತು ಸ್ಥಳೀಯ ಅಲ್ಪಸಂಖ್ಯಾತ ಮುಖಂಡರೊಂದಿಗೆ 77 ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಸ್ವಾತಂತ್ರ್ಯ ಹೋರಾಟಗಾರ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ 225ನೇ ಜಯಂತಿ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಹಾಗೂ ಸಂಗೊಳ್ಳಿ ರಾಯಣ್ಣರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ಸೌಮ್ಯ ಉಮೇಶ್, ಯುವ ಮುಖಂಡ ಶಶಿರಾಜ್, ನಗರ ಹಾಲುಮತ ಮಹಾಸಭಾದ ವಿಜಯಕುಮಾರ್, ಮುಖಂಡರಾದ ಕಲೀಮ್ ಶರೀಫ್, ರಮೇಶ್ ಇತರರು ಇದ್ದರು.



ಮೈಸೂರಿನ ಎನ್.ಆರ್. ಮೊಹಲ್ಲಾದ ಹಿರಿಯ ನಾಗರಿಕರ ವೇದಿಕೆಯ ವತಿಯಿಂದ 77ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಅಧ್ಯಕ್ಷ ಮಿಲ್ಕ್‌ಮಂಜು, ರಾಮೇಗೌಡ, ಗಿರಿಧರ್, ಆಚಾರಿಬಾಬು, ರಂಗಪ್ಪಗೌಡ, ಮೋಹನ್‌ಕುಮಾರ್, ರಾಕೇಶ್‌ಗೌಡ, ನಾಗೇಶ್, ಮುರಳಿ, ಯೋಗೇಶ್, ರಾಜು, ಮಧುಸೂದನ್, ಧನಂಜಯ್ ಹಾಜರಿದ್ದರು.

ಕಸ್ತೂರಿರಂಗನ್ ವರದಿ ವಿರುದ್ಧ ಸಂಘಟನಾತ್ಮಕ ಹೋರಾಟ

ಕಸ್ತೂರಿ ರಂಗನ್ ವರದಿ ವಿರೋಧಿ ಹೋರಾಟ ಸಮಿತಿ ಸಭೆಯಲ್ಲಿ ತೀರ್ಮಾನ

- ನಿರ್ಬಂಧ ಅರಣ್ಯ ಗಡಿಯಲ್ಲೇ ಮುಗಿಸಲು ಸಮಿತಿ ಮುಂದೆ ಮನವಿ
- ಮುಖ್ಯಮಂತ್ರಿ, ಅರಣ್ಯ ಸಚಿವರ ಬಳಿಗೆ ನಿಯೋಗ
- ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ನಿರ್ಧಾರ





ಮಡಿಕೇರಿ, ಆ.16– ಕೊಡಗು ಸೇರಿದಂತೆ 8 ಜಿಲ್ಲೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಕಸ್ತೂರಿರಂಗನ್ ವರದಿಯ ಸಾಧಕ ಬಾಧಕಗಳ ಕುರಿತು ಕಸ್ತೂರಿ ರಂಗನ್ ವರದಿ ವಿರೋಧಿ ಹೋರಾಟ ಸಮಿತಿ ವತಿಯಿಂದ ಮಡಿಕೇರಿ ನಗರದ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಯಿತು.

ಸಭೆಯಲ್ಲಿ ಮಾಜಿ ಮತ್ತು ಹಾಲಿ ಶಾಸಕರು ಪಾಲ್ಗೊಂಡು ಸಂಘಟನಾತ್ಮಕ ಹೋರಾಟದ ಸಂದೇಶ ನೀಡಿದರು. ಮಡಿಕೇರಿ ಕ್ಷೇತ್ರದ ಮಾಜಿ ಶಾಸಕರಾದ ಅಪ್ಪಚ್ಚು ರಂಜನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹೋರಾಟದ ರೂಪುರೇಷೆಗಳ ಕುರಿತು ಚರ್ಚಿಸಲಾಯಿತು.

ಕಸ್ತೂರಿರಂಗನ್ ವರದಿ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಮಾತನಾಡಿ, 2013ರ ಡಿಸೆಂಬರ್‌ನಲ್ಲಿ ವರದಿ ಜಾರಿಯಾಗಿದ್ದು, ಕಸ್ತೂರಿರಂಗನ್ ವರದಿಗೆ ಮೊದಲಿನಿಂದಲೂ ನಾವು ವಿರೋಧ ವ್ಯಕ್ತಪಡಿಸುತ್ತಲೇ ಬಂದಿದ್ದೇವೆ. ಇದೀಗ ಮತ್ತೇ ಪಶ್ಚಿಮ ಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಮಾಡಲು ಹುನ್ನಾರ ನಡೆಯುತ್ತಿದೆ. ವರದಿ ಜಾರಿಯಾದಲ್ಲಿ ಜಿಲ್ಲೆಯ ಜನರು ಬದುಕಲಾಗುವುದಿಲ್ಲ. ಅಭಿವೃದ್ಧಿ ಕಾರ್ಯಗಳಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂಘಟಿತ ಹೋರಾಟ ಅನಿವಾರ್ಯವಾಗಿದೆ ಎಂದರು.

ಸಭೆಯಲ್ಲಿ ಪ್ರಮುಖರಾದ ಮಾಚಿಮಾಡ ರಾಜಾ ತಿಮ್ಮಯ್ಯ, ಬೊಟ್ಟಂಗಡ ರಾಜು, ಚೇರಂಡ ನಂದಾ ಸುಬ್ಬಯ್ಯ, ಐ.ಆರ್.ದುರ್ಗಾಪ್ರಸಾದ್ ಸೇರಿದಂತೆ ಮತ್ತಿತರರು ಮಾತನಾಡಿ, ಕಸ್ತೂರಿ ರಂಗನ್ ವರದಿ ಜಾರಿಯಾದಲ್ಲಿ ಜಿಲ್ಲೆಯ ಜನರು ಎದುರಿಸಬೇಕಾದ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಕಸ್ತೂರಿರಂಗನ್ ವರದಿಯ ವಿರುದ್ಧ ಪಕ್ಷಾತೀತ ಹೋರಾಟ ನಡೆಸುವುದು, ವರದಿಯ ಪುನರ್ ಪರಿಶೀಲನೆಗೆ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರುವುದು, ಅಗತ್ಯವಿದ್ದಲ್ಲಿ ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗುವುದು ಸೇರಿದಂತೆ ಪ್ರಮುಖ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಸಭೆಯಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್ ಪೊನ್ನಣ್ಣ, ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್‌ಗೌಡ, ಮಾಜಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯರಾದ ವೀಣಾ ಅಚ್ಚಯ್ಯ, ಸುನೀಲ್ ಸುಬ್ರಮಣಿ, ಕಾಂಗ್ರೆಸ್ ರಾಜ್ಯ ವಕ್ತಾರ ಸಂಕೇತ್ ಪೂವಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ ಸೇರಿದಂತೆ ಜಿಲ್ಲೆಯ ಸಂಘಟನೆಗಳ ಮುಖಂಡರು ಹಾಜರಿದ್ದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಎ.ಎಸ್.ಪೊನ್ನಣ್ಣ, ಕಸ್ತೂರಿ ರಂಗನ್ ವರದಿ ಅನುಷ್ಠಾನಕ್ಕೆ ತರುವ ರೂಪುರೇಷೆಗಳನ್ನು ನಿರ್ಧಾರ ಮಾಡುವ ಸಮಿತಿಯ ಎದುರು ನಮ್ಮ ಮನವಿ ಸಲ್ಲಿಸಬೇಕು. ಬಫರ್‌ಝೋನ್ ಜಾರಿಯಾಗಬಾರದು, ನಿರ್ಬಂಧ ಅರಣ್ಯ ಗಡಿಯಲ್ಲೇ ಮುಗಿಯಬೇಕು. ಸರ್ವಪಕ್ಷದ ಮುಖಂಡರು, ಎಲ್ಲಾ ಜಿಲ್ಲೆಗಳ ನಿಯೋಗ ಮುಖ್ಯಮಂತ್ರಿಗಳನ್ನು ಹಾಗೂ ಅರಣ್ಯ ಸಚಿವರನ್ನು ಭೇಟಿ ಮಾಡಿ, ನಮ್ಮ ನಿಲುವು ಸ್ಪಷ್ಟಪಡಿಸಿ, ಇದೇ ನಿಲುವನ್ನು ಸಮಿತಿ ಎದುರು ರಾಜ್ಯ ಸರಕಾರ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಲಾಗುವುದು. 8 ಜಿಲ್ಲೆಗಳ ಶಾಸಕರು, ಸಂಸದರ ನಿಯೋಗದಿಂದ ಕೇಂದ್ರ ಸಚಿವರನ್ನು ಭೇಟಿ ಮಾಡಲು ನಿರ್ಧಾರ, ವರದಿಯ ವಿರುದ್ದ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ನಿರ್ಧಾರ ಕೈಗೊಳ್ಳಲಾಗಿದ್ದು, ಜಿಲ್ಲೆಯ ಕೃಷಿ ಚಟುವಟಿಕೆಗಳಿಗೆ, ಕಾಫಿ ತೋಟಗಳಿಗೆ, ಪ್ರವಾಸೋದ್ಯಮ, ಕೆರೆ ನಿರ್ಮಾಣ ಸೇರಿದಂತೆ ಜಿಲ್ಲೆಯ ಜನರ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗಬಾರದು. ಜನರಿಗೆ ತೊಂದರೆ ಆಗದ ರೀತಿ, ಪರಿಸರ ರಕ್ಷಣೆಗೆ ಪೂರಕವಾಗಿ ನಿರ್ಧಾರ ಕೈಗೊಳ್ಳಲಾಗುವುದೆಂದರು.

ಮಾಜಿ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಇಂದಿನ ಸಭೆಯಲ್ಲಿ ಪ್ರಮುಖ 4 ನಿರ್ಣಯಗಳನ್ನು ಕೈಗೊಳ್ಳಲಾಗಿದ್ದು, ಹಲವು ಮುಖಂಡರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವರದಿಯ ವಿರುದ್ಧ ರಾಜಕೀಯ ರಹಿತವಾಗಿ ಹೋರಾಟ ಮಾಡಲಾಗುವುದು. ಕಸ್ತೂರಿರಂಗನ್ ವರದಿ ಮಾರಕವಾಗಿರುವ ಜಿಲ್ಲೆಗಳ ಶಾಸಕರು, ಸಂಸದರು ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸಚಿವರನ್ನು ಭೇಟಿ ಮಾಡಿ ವಿಚಾರವನ್ನು ಪ್ರಸ್ತಾಪಿಸಲಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕಸ್ತೂರಿ ರಂಗನ್ ವರದಿ ವ್ಯಾಪ್ತಿಗೆ ಜಿಲ್ಲೆಯ 54 ಗ್ರಾಮಗಳು ಒಳಪಡುತ್ತವೆ. ಗಾಡ್ಗೀಳ್ ವರದಿಗೂ ಕಸ್ತೂರಿ ರಂಗನ್ ವರದಿಗೂ ಯಾವುದೇ ವ್ಯತ್ಯಾಸವಿಲ್ಲ. ವರದಿ ಜಾರಿ ಸಂಬಂಧ ಗೋವಾ ಫೌಂಡೇಶನ್, ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್‌ನ ಮೊರೆ ಹೋದ ಹಿನ್ನೆಲೆಯಲ್ಲಿ ವರದಿ ಜಾರಿಯಾಗಿದೆ. ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್‌ನ ಎದುರು ಕೇರಳ ರಾಜ್ಯ ಸಮರ್ಥವಾಗಿ ವಾದ ಮಂಡಿಸಿದೆ. ಆದರೆ ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ಸರಕಾರಗಳು ಸಮರ್ಥವಾಗಿ ವಾದ ಮಂಡಿಸದ ಹಿನ್ನೆಲೆಯಲ್ಲಿ ನಮಗೆ ತೊಂದರೆಯಾಗಿದೆ. ಈ ದಿಸೆಯಲ್ಲಿ ಸಮಿತಿ ಎದುರು ನಮ್ಮ ಅಹವಾಲು ಸಲ್ಲಿಸಬೇಕು. ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್‌ನ ಬದಲಾವಣೆ ತರಲು ಸಾಧ್ಯವಿದೆಯೇ ಎಂಬ ಬಗ್ಗೆ ಪ್ರಯತ್ನಿಸಬೇಕೆಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಹಲವು ಮಹನೀಯರನ್ನು ನೀಡಿದ ಪುಣ್ಯಭೂಮಿ ಕೊಡಗು

ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಬಣ್ಣನೆ



ಮಡಿಕೇರಿ, ಆ.16– ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದ ಮಹನೀಯರ ಆದರ್ಶವನ್ನು ಗೌರವಿಸಿ, ಸಾಮರಸ್ಯದಿಂದ ಬಾಳ್ವೆ ನಡೆಸುವ ಜವಾಬ್ದಾರಿ ನಮ್ಮದಾಗಿದೆ. ಸ್ವಾತಂತ್ರ್ಯ ಹೋರಾಟದ ಶತಮಾನದ ಇತಿಹಾಸ ಇಂದಿನ ಅಭಿವೃದ್ಧಿಗೆ ಮುನ್ನೋಟವಾಗಲಿ ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್. ಬೋಸರಾಜು ಆಶಿಸಿದರು.

ಕೊಡಗು ಜಿಲ್ಲಾಡಳಿತದ ವತಿಯಿಂದ ನಗರದ ಐತಿಹಾಸಿಕ ಕೋಟೆ ಆವರಣದಲ್ಲಿ ಆಯೋಜಿತ 77ನೇ ಸ್ವಾತಂತ್ರ್ಯೋತ್ಸವದಲ್ಲಿ ರಾಷ್ಟ್ರ ಧ್ವಜಾರೋಹಣಗೈದು, ಪಥ ಸಂಚಲನದ ಗೌರವ ವಂದನೆ ಸ್ವೀಕರಿಸಿ ಅವರು ಸಂದೇಶ ನೀಡಿದರು. ಸ್ವಾತಂತ್ರ್ಯ, ಸೌಹಾರ್ದತೆ, ಭ್ರಾತೃತ್ವದಲ್ಲಿ ಅಡಿಗಲ್ಲಿನ ಮೇಲೆ ನಿಜವಾದ ಅರ್ಥದಲ್ಲಿ ಭಾರತದಲ್ಲಿ ಸಮಾಜ ನಿರ್ಮಾಣವಾಗಿದೆ ಎಂದು ಸಚಿವರು ಅಭಿಪ್ರಾಯಿಸಿದರು.

ಮರೆಯಲಾಗದ ರತ್ನಗಳು: ಕೊಡಗು ಸ್ವಾತಂತ್ರ್ಯ ಹೋರಾಟಕ್ಕೆ ಹಲ ಮಹನೀಯರನ್ನು ನೀಡಿದ ಪುಣ್ಯಭೂಮಿಯಾಗಿದ್ದು, ಸ್ವಾತಂತ್ರ್ಯ ಚಳುವಳಿಯಲ್ಲಿ ಕೊಡಗು ಒಂದು ಭಾಗವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಭಾರತೀಯ ಸೈನ್ಯಕ್ಕೂ ಈ ಜಿಲ್ಲೆ ವೀರ ಸೇನಾನಿಗಳನ್ನು, ಯೋಧರನ್ನು ನೀಡಿದೆ. ಈ ಪೈಕಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ, ಜನರಲ್ ಕೆ.ಎಸ್.ತಿಮ್ಮಯ್ಯ ಭಾರತೀಯ ಸೇನಾ ಇತಿಹಾಸದಲ್ಲಿ ಎಂದಿಗೂ ಮರೆಯಲಾಗದ ರತ್ನಗಳೆಂದು ಬಣ್ಣಿಸಿದರು.

ಬಹುಜನರ ಹಿತಕಾಯ್ದ ಸರ್ಕಾರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವ ಸರ್ಕಾರವು ಸಾರ್ವಜನಿಕರಿಗೆ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಬಹುಜನರ ಹಿತ ಕಾಪಾಡಲು ಮುಂದಾಗಿದೆ. ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಆ.13ರವರೆಗೆ 9,08,223 ಮಹಿಳೆಯರು ಉಚಿತವಾಗಿ ಬಸ್ ಪ್ರಯಾಣ ಮಾಡಿದ್ದು, ಸುಮಾರು 3.34 ಕೋಟಿ ರೂ. ಭರಿಸಲಾಗಿದೆ. 'ಗೃಹಲಕ್ಷ್ಮಿ' ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ 1,31,321 ಗುರಿಯಲ್ಲಿ ಆ.12ರವರೆಗೆ 1,01,667 ಮಂದಿ ಹೆಸರು ನೋಂದಾಯಿಸಿ, ಶೇ.77.10 ರಷ್ಟು ಪ್ರಗತಿ ಸಾಧಿಸಲಾಗಿದೆ. ಜಿಲ್ಲೆಯಲ್ಲಿ ಆ.13ರವರೆಗೆ 1,29,537 ಮಂದಿ 'ಗೃಹಜ್ಯೋತಿ' ಯೋಜನೆಗೆ ಹೆಸರು ನೋಂದಾಯಿಸಿದ್ದು, ಗೃಹಜ್ಯೋತಿಯ ಗ್ಯಾರಂಟಿಯ ವೆಚ್ಚ 2,90,45,099 ರೂ. ಗಳನ್ನು ಸರ್ಕಾರ ಭರಿಸಿದೆ ಎಂದು ಸಚಿವ ಬೋಸರಾಜು ತಿಳಿಸಿದರು. ಅನ್ನಭಾಗ್ಯ ಯೋಜನೆಯಡಿ ಸರ್ಕಾರ ಬಿಪಿಎಲ್, ಎಎವೈ ಫಲಾನುಭವಿಗಳಿಗೆ ಈಗಾಗಲೇ ವಿತರಿಸುತ್ತಿರುವ 5 ಕೆ.ಜಿ ಅಕ್ಕಿಯೊಂದಿಗೆ ಹೆಚ್ಚುವರಿ 5 ಕೆ.ಜಿ ಅಕ್ಕಿಯನ್ನು ವಿತರಣೆ ಮಾಡಲು ಉದ್ದೇಶಿಸಿತ್ತು. ಆದರೆ ಅಕ್ಕಿಯ ಕೊರತೆ ಇರುವ ಕಾರಣ ಹೆಚ್ಚುವರಿ 5 ಕೆ.ಜಿ ಅಕ್ಕಿಯ ಬದಲಾಗಿ ಪ್ರತಿ ಕೆ.ಜಿ.ಗೆ 34 ರೂ.ನಂತೆ ಪ್ರತೀ ಫಲಾನುಭವಿಗೆ ಮಾಹೆಗೆ 170 ರೂ.ನಂತೆ ಡಿ.ಬಿ.ಟಿ ಮೂಲಕ ಜುಲೈ ತಿಂಗಳಲ್ಲಿ 4.24 ಕೋಟಿ ರೂ. ನಗದನ್ನು ವರ್ಗಾವಣೆ ಮಾಡಲಾಗಿದೆ ಎಂದು ಹೇಳಿದರು.

ಕಾಫಿ ಬ್ರ್ಯಾಂಡಿಂಗ್‌ಗೆ ಕ್ರಮ: ಸರ್ಕಾರ ಬಜೆಟ್‌ನಲ್ಲಿ ಕೊಡಗು ಪ್ರವಾಸೋದ್ಯಮ ಅಭಿವೃದ್ಧಿಗೆ ಇಕೋ ಟೂರಿಸಂ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಕಾಫಿ ಬ್ರಾಂಡಿಂಗ್ ಮಾಡಲು ಘೋಷಿಸಿದೆ. ಕಾಫಿಯ ಅನನ್ಯವಾದ ರುಚಿ ಮತ್ತು ಕಂಪನ್ನು ಹೊಂದಿರುವುದರಿಂದ ಕಾಫಿಗೆ ಇನ್ನಷ್ಟು ಪ್ರಚುರಪಡಿಸಿ ಜನಪ್ರಿಯಗೊಳಿಸುವಲ್ಲಿ ಮತ್ತು ಕಾಫಿ ಇಕೋ ಟೂರಿಸಂ ಉತ್ತೇಜಿಸಲು ಕಾಫಿ ಬ್ರಾಂಡಿಂಗ್ ಮಾಡಲು ಮುಂದಾಗಿದೆ ಎಂದು ತಿಳಿಸಿದರು.

ಕಿರು ಹೊತ್ತಿಗೆ ಬಿಡುಗಡೆ: ಪ್ರಸ್ತುತ ಸರ್ಕಾರದ ಸಾಧನೆ ಸಂಬಂಧ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಹೊರತಂದಿರುವ 'ಪ್ರಗತಿಪರ ಅಭಿವೃದ್ಧಿಗಾಗಿ ನುಡಿದಂತೆ ನಡೆದಿದ್ದೇವೆ' ಕಿರುಹೊತ್ತಿಗೆಯನ್ನು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ಅವರು ಇದೇ ಸಂದರ್ಭ ಬಿಡುಗಡೆ ಮಾಡಿದರು.

ಶಾಸಕ ಡಾ.ಮಂಥರ್ ಗೌಡ, ನಗರಸಭೆ ಅಧ್ಯಕ್ಷೆ ಎನ್.ಪಿ.ಅನಿತಾ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿ.ಪಂ. ಸಿಇಒ ವರ್ಣಿತ್ ನೇಗಿ, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಕೇಶವ ಕಾಮತ್, ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಪೊನ್ನಚ್ಚನ ಶ್ರೀನಿವಾಸ್, ಎಡಿಸಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ನರ್ಸ್ ಮೇಲೆ ಸಾಕುನಾಯಿ ದಾಳಿ





ಮಡಿಕೇರಿ, ಆ.16– ಗರ್ಭಿಣಿಯ ಆರೋಗ್ಯ ತಪಾಸಣೆಗಾಗಿ ತೆರಳಿದ್ದ ನರ್ಸ್ ಮೇಲೆ ಸಾಕುನಾಯಿ ದಾಳಿ ನಡೆಸಿದ ಘಟನೆ ಕೊಡಗಿನ ಪಾರಾಣೆ ಗ್ರಾಮದಲ್ಲಿ ನಡೆದಿದ್ದು, ತೀವ್ರವಾಗಿ ಗಾಯಗೊಂಡಿರುವ ನರ್ಸ್ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನರ್ಸ್ ಭವ್ಯಾ ಅವರು ಪಾರಾಣೆ ಗ್ರಾಮದ ಮನೆಯೊಂದರ ಗರ್ಭಿಣಿಯ ಆರೋಗ್ಯ ತಪಾಸಣೆಗಾಗಿ ತೆರಳಿದ್ದಾಗ ಅವರ ಮೇಲೆ ಸಾಕುನಾಯಿ ದಾಳಿ ನಡೆಸಿದ್ದು, ಮನೆ ಮಾಲೀಕರು ಬಂದು ನಾಯಿಯನ್ನು ನಿಯಂತ್ರಿಸುವುದರೊಳಗಾಗಿ ಭವ್ಯಾ ಅವರ ತೋಳು ಮತ್ತು ಇತರೆಡೆ ನಾಯಿ ಕಚ್ಚಿ ತೀವ್ರವಾಗಿ ಗಾಯಗೊಳಿಸಿದೆ. ಅಸ್ವಸ್ಥಗೊಂಡಿದ್ದ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಮನೆ ಮಾಲೀಕರು ನಾಯಿಯನ್ನು ಕಟ್ಟಿ ಹಾಕದೇ ಬಿಟ್ಟಿದ್ದೇ ಈ ಘಟನೆಗೆ ಕಾರಣ ಎಂದು ಹೇಳಲಾಗಿದೆ.

ಕಿಗ್ಗಟ್ಟ್‌ನಾಡ್ ಹಿರಿಯ ನಾಗರಿಕ ವೇದಿಕೆ ಮನವಿಗೆ ಸ್ಪಂದಿಸಿದ ಡಿಸಿ

ಪೊನ್ನಂಪೇಟೆ ನೂತನ ತಾಲೂಕು ಕಚೇರಿ ಕಾರ್ಯಾರಂಭ

ಪೊನ್ನಂಪೇಟೆ, ಆ.16– ಕಿಗ್ಗಟ್ಟ್‌ನಾಡ್ ಹಿರಿಯ ನಾಗರಿಕ ವೇದಿಕೆಯ ಮನವಿಗೆ ಸ್ಪಂದಿಸಿರುವ ಜಿಲ್ಲಾಧಿಕಾರಿ ವೆಂಕಟರಾಜ ಅವರು ಪೊನ್ನಂಪೇಟೆ ತಾಲೂಕು ಕಚೇರಿ ಕಾರ್ಯಾರಂಭಕ್ಕೆ ಚಾಲನೆ ನೀಡಿದ್ದಾರೆ.

ವೇದಿಕೆಯ ಪದಾಧಿಕಾರಿಗಳು ಇತ್ತೀಚೆಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಪೊನ್ನಂಪೇಟೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ತಾಲೂಕು ಕಚೇರಿ ಇನ್ನೂ ಕಾರ್ಯಾರಂಭ ಮಾಡದ ಕಾರಣ ಪ್ರತಿಯೊಂದು ಕೆಲಸಕ್ಕೆ ಸಾರ್ವಜನಿಕರು ದೂರದ ವಿರಾಜಪೇಟೆಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಪೊನ್ನಂಪೇಟೆ ತಾಲೂಕು ಕಚೇರಿ ಕಾರ್ಯ ಆರಂಭಿಸಬೇಕು ಎಂದು ಮನವಿ ಮಾಡಿದ್ದರು. ಮನವಿಯನ್ನು ಆಲಿಸಿದ ಜಿಲ್ಲಾಧಿಕಾರಿಗಳು ಶೀಘ್ರವೇ ಕಚೇರಿ ಆರಂಭಿಸುವ ಭರವಸೆ ನೀಡಿದ್ದರು. ಅದರಂತೆ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಅವರ ಜೊತೆ ಚರ್ಚಿಸಿ ವಿರಾಜಪೇಟೆ ತಾಲೂಕು ಕಚೇರಿಯಲ್ಲಿದ್ದ ಪೊನ್ನಂಪೇಟೆಯ ತಾಲೂಕು ಕಚೇರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಪೊನ್ನಂಪೇಟೆಯ ನೂತನ ತಾಲೂಕು ಕಚೇರಿಗೆ ತರಿಸಿ ಕಾರ್ಯಾರಂಭ ಮಾಡುವಂತೆ ಮಾಡಿದರಲ್ಲದೆ, ಅದನ್ನು ಶಾಸಕರ ಮೂಲಕವೇ ಉದ್ಘಾಟಿಸಿದರು. ಇದರಿಂದ ಪೊನ್ನಂಪೇಟೆಯ ಸಾರ್ವಜನಿಕರು ದೂರದ ವಿರಾಜ ಪೇಟೆಗೆ ಹೋಗುವ ಬದಲು ಪೊನ್ನಂಪೇಟೆಯ ನೂತನ ತಾಲೂಕು ಕಚೇರಿಗೆ ತೆರಳಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಬಹುದಾಗಿದೆ.

ವೇದಿಕೆಯ ಮನವಿಗೆ ಸ್ಪಂದಿಸಿ, ನೂತನ ತಾಲೂಕು ಕಚೇರಿಯನ್ನು ಕಾರ್ಯಾರಂಭ ಮಾಡಿದ ಜಿಲ್ಲಾಧಿಕಾರಿ ವೆಂಕಟರಾಜ ಅವರನ್ನು ವೇದಿಕೆಯ ಪದಾಧಿಕಾರಿಗಳು ಅಭಿನಂದಿಸಿರುವುದಾಗಿ ಅಧ್ಯಕ್ಷ ಕೊಟ್ಟುಕತ್ತೀರ ಪಿ. ಸೋಮಣ್ಣ ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಮಂಡ್ಯ ಶಾಸಕ ಗಣಿಗ ರವಿಕುಮಾರ್ ಸ್ವಂತ ವಾಹನದಲ್ಲಿ ಸವಾರಿ; ಸಾರ್ವಜನಿಕರ ಆಕ್ರೋಶ



ಹುಲಿ ಸಂರಕ್ಷಿತ ಅರಣ್ಯ ಪ್ರದೇಶವಾದ ಹಿಮವದ್ ಗೋಪಾಲಸ್ವಾಮಿಬೆಟ್ಟಕ್ಕೆ ಎಲ್ಲಾ ರೀತಿಯ ಖಾಸಗಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ. ಶಾಸಕರೇ ಆಗಲಿ, ಸಂಸದರೇ ಆಗಲಿ ಯಾವುದೇ ಜನಪ್ರತಿನಿಧಿಯೂ ಕೂಡ ಖಾಸಗಿ ವಾಹನದಲ್ಲಿ ಬೆಟ್ಟಕ್ಕೆ ತೆರಳುವಂತಿಲ್ಲ. ನಮ್ಮ ಅಧಿಕಾರಿಗಳು ಮಂಡ್ಯ ಶಾಸಕರ ಖಾಸಗಿ ಕಾರು ಬೆಟ್ಟಕ್ಕೆ ಹೋಗಲು ಹೇಗೆ ಅನುಮತಿ ನೀಡಿದರು ಎಂಬುದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ವರದಿ ತರಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

- ರಮೇಶ್‌ಕುಮಾರ್, ಕನ್ಸರ್‌ವೇಟರ್ ಆಫ್ ಫಾರೆಸ್ಟ್

ಗುಂಡ್ಲುಪೇಟೆ, ಆ.16– ಖಾಸಗಿ ವಾಹನ ಸಂಚಾರ ನಿಷೇಧಿಸಲ್ಪಟ್ಟಿರುವ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿರುವ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಸೋಮವಾರ ಮಧ್ಯಾಹ್ನ ಶಾಸಕರೊಬ್ಬರು ತಮ್ಮ ಖಾಸಗಿ ವಾಹನದಲ್ಲಿ ತೆರಳಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮಂಡ್ಯ ಶಾಸಕ ಗಣಿಗ ರವಿಕುಮಾರ್ ಅವರು ತಮ್ಮ ಖಾಸಗಿ ಕಾರಿನಲ್ಲಿ (ಕೆಎ 11–ಎನ್ 9965) ಬೆಂಬಲಿಗರೊಂದಿಗೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶವನ್ನು ಪ್ರವೇಶಿಸಿದ್ದು, ಇದಕ್ಕೆ ಸ್ಥಳೀಯ ಅರಣ್ಯ ಇಲಾಖೆ ಅಧಿಕಾರಿಗಳು ಅನುಮತಿ ನೀಡಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕಳೆದ 9 ವರ್ಷದಿಂದ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶಕ್ಕೆ ಅನುಮತಿ ನೀಡುತ್ತಿರಲಿಲ್ಲ. ಹುಲಿ ಸಂರಕ್ಷಿತ ಅರಣ್ಯ ಪ್ರದೇಶವಾಗಿರುವ ಇಲ್ಲಿ ವಾಹನ ದಟ್ಟಣೆ ಹೆಚ್ಚಾದರೆ ವನ್ಯ ಮೃಗಗಳ ಚಲನವಲನಕ್ಕೆ ತೊಂದರೆಯುಂಟಾಗುತ್ತದೆ ಎಂಬ ಕಾರಣದಿಂದ ಅರಣ್ಯ ಇಲಾಖೆ ಈ ನಿರ್ಧಾರವನ್ನು ಕೈಗೊಂಡಿತ್ತು. ಅದರಂತೆ ಖಾಸಗಿ ವಾಹನಗಳ ಪ್ರವೇಶಕ್ಕೆ ಅರಣ್ಯ ಇಲಾಖೆ ಅನುಮತಿ ನೀಡುತ್ತಿರಲಿಲ್ಲ. ಆದರೆ ಈಗ ಶಾಸಕರೆಂಬ ಕಾರಣಕ್ಕಾಗಿ ಅವರ ಖಾಸಗಿ ವಾಹನಕ್ಕೆ ಅನುಮತಿ ನೀಡಿರುವುದನ್ನು ಸಾರ್ವಜನಿಕರು ಖಂಡಿಸಿದ್ದಾರೆ. ಶಾಸಕರ ವಾಹನ ಸಂಚರಿಸಿದರೆ, ವನ್ಯಜೀವಿಗಳ ಚಲನವಲನಕ್ಕೆ ತೊಂದರೆಯಾಗುವುದಿಲ್ಲವೇ? ಎಂದು ಪ್ರಶ್ನಿಸಿರುವ ಅವರು ಹಾಗೆ ಬಿಡುವುದಾದರೆ ಎಲ್ಲಾ ವಾಹನಗಳನ್ನು ಬಿಡಲಿ ಎಂದು ಒತ್ತಾಯಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಎಸಿಎಫ್ ನವೀನ್, ಜನಪ್ರತಿನಿಧಿಗಳ ವಾಹನಗಳು ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ತೆರಳಲು ಅವಕಾಶವಿದೆ. ಹೀಗಾಗಿ ಮಂಡ್ಯ ಶಾಸಕರ ಕಾರನ್ನು ಬಿಟ್ಟಿದ್ದೇವೆ. ಅವರ ಜೊತೆ ಅರಣ್ಯ ಇಲಾಖೆ ಸಿಬ್ಬಂದಿಯೂ ನಮ್ಮ ವಾಹನದಲ್ಲಿ ತೆರಳಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಜಿಲ್ಲೆಯಾದ್ಯಂತ 77ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ

- ಎಲ್ಲೆಡೆ ಹಾರಾಡಿದ ತ್ರಿವರ್ಣ ಧ್ವಜ
- ಮುದ ನೀಡಿದ ಶಾಲಾ–ಕಾಲೇಜು ಮಕ್ಕಳ ನೃತ್ಯ
- ಮನಸೂರೆಗೊಂಡ ಆಕರ್ಷಕ ಪಥ ಸಂಚಲನ



ಚಾಮರಾಜನಗರ, ಆ.16– ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ, ಹನೂರು ಸೇರಿದಂತೆ ಜಿಲ್ಲಾದ್ಯಂತ ಮಂಗಳವಾರ 77ನೇ ಸ್ವಾತಂತ್ರ್ಯೋತ್ಸವವನ್ನು ಸಡಗರ–ಸಂಭ್ರಮದಿಂದ ಆಚರಿಸಲಾಯಿತು.

ಎಲ್ಲೆಡೆ ತ್ರಿವರ್ಣ ಧ್ವಜಗಳು ಹಾರಾಡಿದವು, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರನ್ನು ಸ್ಮರಿಸಲಾಯಿತು. ಸಾಧಕರನ್ನು ಸನ್ಮಾನಿಸುವ ಮೂಲಕ ಜಿಲ್ಲಾದ್ಯಂತ ಅರ್ಥಪೂರ್ಣವಾಗಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು.

ನಗರದಲ್ಲಿ ಸಂಭ್ರಮ: ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಜಿಲ್ಲಾಡಳಿತದ ವತಿಯಿಂದ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಅವರು ಧ್ವಜಾರೋಹಣ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ಜಿಲ್ಲೆಯೂ ಸ್ವಾತಂತ್ರ್ಯ ಹೋರಾಟಕ್ಕೆ ತನ್ನದೇ ಆದ ಕೊಡುಗೆ ನೀಡಿರುವುದು ಹೆಮ್ಮೆಯ ಸಂಗತಿ. ಜಿಲ್ಲೆಯ ಹಲವಾರು ಅಪ್ರತಿಮ ದೇಶಭಕ್ತರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಜಿಲ್ಲೆಗೆ ಗೌರವ ತಂದಿದ್ದಾರೆ. ಈ ಎಲ್ಲಾ ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಪೂರಕ ನಮನಗಳನ್ನು ಅರ್ಪಿಸೋಣ. ಸ್ವಾತಂತ್ರ್ಯ ಮಹೋತ್ಸವದ ಈ ಸಂದರ್ಭದಲ್ಲಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಮನೆಗಳಿಗೆ ತೆರಳಿ ಜಿಲ್ಲಾಡಳಿತವು ಸನ್ಮಾನಿಸಿದೆ ಎಂದು ತಿಳಿಸಿದರು.

ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರಕೃತಿ ವಿಕೋಪದಿಂದ ಒಟ್ಟು 606 ಹೆಕ್ಟರ್ ಪ್ರದೇಶದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಹಾನಿಯಾಗಿದ್ದು, ಸರ್ಕಾರದಿಂದ ಹಂತ–ಹಂತವಾಗಿ ರೈತರಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ತಂತ್ರಾಂಶದ ಮೂಲಕ ಪರಿಹಾರ ಮೊತ್ತವನ್ನು ವಿತರಿಸಲಾಗುತ್ತಿದ್ದು, ಈಗಾಗಲೇ 330ಹೆಕ್ಟರ್ ಪ್ರದೇಶಕ್ಕೆ ಒಟ್ಟು 593 ರೈತರಿಗೆ 43.04 ಲಕ್ಷ ರೂಪಾಯಿಗಳಲ್ಲಿ ಪರಿಹಾರ ಸಂದಾಯವಾಗಿರುತ್ತದೆ. ಉಳಿದ ರೈತರಿಗೆ ಹಂತ–ಹಂತವಾಗಿ ಪರಿಹಾರ ಮೊತ್ತ ಬಿಡುಗಡೆಯಾಗುತ್ತದೆ ಎಂದರು.

ತೋಟಗಾರಿಕೆ ಬೆಳೆಯು 7759 ಹೆಕ್ಟರ್‌ಗಳಲ್ಲಿ ಬಿತ್ತನೆಯಾಗಿದ್ದು, ಅದರಲ್ಲೂ ಮುಖ್ಯವಾಗಿ ಟೊಮೆಟೊ, ಈರುಳ್ಳಿ, ಆಲೂಗಡ್ಡೆ, ಬದನೆ, ಬೀನ್ಸ್ ಮತ್ತು ಎಲೆಕೋಸ್ ಬೆಳೆಗಳ ಬಿತ್ತನೆಯಾಗಿರುತ್ತದೆ. ಜಿಲ್ಲೆಯ ಮುಂಗಾರು ಹಂಗಾಮಿನ ವಾಡಿಕೆ ವಿಸ್ತೀರ್ಣ 1,17,897 ಹೆಕ್ಟರ್ ಇದ್ದು, ಪ್ರಸ್ತುತ 53,506 ಹೆಕ್ಟರ್ ಪ್ರದೇಶಗಳಲ್ಲಿ ವಿವಿಧ ಬೆಳೆಗಳ ಬಿತ್ತನೆಯಾಗಿರುತ್ತದೆ ಎಂದು ತಿಳಿಸಿದರು. ಬಳಿಕ ಉಸ್ತುವಾರಿ ಸಚಿವರು ಮಹಾತ್ಮ ಗಾಂಧೀಜಿ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಆಕರ್ಷಕ ಪಥ ಸಂಚಲನ, ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಸ್ವಾತಂತ್ರ್ಯ ಹಿರಿಮೆ, ದೇಶಭಕ್ತಿ ಕುರಿತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಪ್ರತಿಭಾ ಪುರಸ್ಕಾರ, ಲ್ಯಾಪ್‌ಟಾಪ್ ವಿತರಣೆ, ಇತರೆ ಕಾರ್ಯಕ್ರಮಗಳಡಿ ವಿದ್ಯಾರ್ಥಿಗಳಿಗೆ ಪುರಸ್ಕರಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಪೂವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯಾಧಿಕಾರಿ ದೀಪಾ ಜೆ.ಕಂಟ್ರಾಕ್ಟರ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸರಸ್ವತಿ ಇತರರು ಉಪಸ್ಥಿತರಿದ್ದರು.

ಕಿರು ಹೊತ್ತಿಗೆ ಬಿಡುಗಡೆ...

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು, ಪ್ರಗತಿಪರ ಅಭಿವೃದ್ಧಿ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊರತಂದಿರುವ 'ನುಡಿದಂತೆ ನಡೆದಿದ್ದೇವೆ' ಕಿರು ಹೊತ್ತಿಗೆಯನ್ನು ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿ, ವಿತರಿಸಲಾಯಿತು.

ಚಿನ್ನದ ವ್ಯಾಪಾರಿಯ ದರೋಡೆ ಪ್ರಕರಣದ ಎಂಟು ಆರೋಪಿಗಳ ಬಂಧನ



ಚಾಮರಾಜನಗರ, ಆ.16– ಆ.11 ರಂದು ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಅಂಚೆ ಕಚೇರಿ ಮುಂಭಾಗ ನಡೆದಿದ್ದ ಕೇರಳದ ಚಿನ್ನದ ವ್ಯಾಪಾರಿಯ ದರೋಡೆ ಪ್ರಕರಣದ ಎಂಟು ಆರೋಪಿಗಳನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಎಲ್ಲರೂ ಅಂತರರಾಜ್ಯ ದರೋಡೆಕೋರರು ಎಂಬುದು ತನಿಖೆಯಿಂದ ದೃಢಪಟ್ಟಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇವರು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲೂ ಇದೇ ರೀತಿಯ ಕೃತ್ಯ ಎಸಗಿರುವುದು ತನಿಖೆಯಿಂದ ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಬಂಧಿತರಿಂದ ವ್ಯಾಪಾರಿಯ ಕಾರು ಹಾಗೂ ದುಷ್ಕೃತ್ಯ ಎಸಗಲು ಬಳಸಿದ್ದ ಮತ್ತೆರಡು ಕಾರುಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಆದರೆ, ದರೋಡೆ ಮಾಡಿರುವ 40 ಲಕ್ಷ ಹಣ ಪತ್ತೆಯಾಗಿಲ್ಲ. ತನಿಖೆ ಪ್ರಗತಿಯಲ್ಲಿದೆ ಎಂದು ಎಸ್‌ಪಿ ಪದ್ಮಿನಿ ಸಾಹು ಮಾಹಿತಿ ನೀಡಿದ್ದಾರೆ.

